ಯಕ್ಷಗಾನ

ವಾಸವದತ್ತ-ರತ್ನಾವಳಿ

ಗ್ರಂಥಕರ್ತರು:

ಟಿ. ರಾಮಕೃಷ್ಣ ಭಟ್ಟ, ವಿದ್ವಾನ್,

ಸಾಹಿತ್ಯ ಕುಟೀರ,

ಬಾಯಾರು.

ಬೆಲೆ: 2/-

ಯಕ್ಷಗಾನ

ವಾಸವದತ್ತ - ರತ್ನಾವಳಿ

ಗ್ರಂಥಕರ್ತರು:

ಟಿ. ರಾಮಕೃಷ್ಣ ಭಟ್ಟ, ವಿದ್ವಾನ್.

ಸಾಹಿತ್ಯ ಕುಟೀರ,

ಬಾಯಾರು.

ಪ್ರಥಮ ಮುದ್ರಣ: 1977- 1000 ಪ್ರತಿಗಳು

ಮುದ್ರಕರು: ಜನತಾ ಪವರ್ ಪ್ರೆಸ್, ವಿಟ್ಲ-574 243

ಮುನ್ನುಡಿ

ಇತ್ತೀಚಿಗಿನ ಎರಡು ದಶಕಗಳಲ್ಲಿ ಜನಸಾಮಾನ್ಯರಿಂದ ಹಾಗೆಯೇ ವಿದ್ವಾಂಸರಿಂದಲೂ ಜಾನಪದ ಕಲೆಯಾದ ಯಕ್ಷಗಾನಕ್ಕೆ ಸಿಕ್ಕಿದ ವಿಪುಲ ಪ್ರೋತ್ಸಾಹ, ಅದರ ನಾಟ್ಯ, ಅಭಿನಯ, ವೇಷಭೂಷಣ ಸಾಹಿತ್ಯವೇ ಮುಂತಾದ ವಿವಿಧ ಅಂಗಗಳಲ್ಲಿ ಪ್ರಯೋಗಶೀಲವಾದ ಹಾಗೂ ಗಟ್ಟಿಯಾದ ಕಾರ್ಯಗಳು ನಡೆದು, ಅದರ ವಿಕಾಸಕ್ಕೆ ದಾರಿಮಾಡಿಕೊಟ್ಟಿದೆ. ಯಕ್ಷಗಾನ ಕಲೆಯ ಕುರಿತು ಸಂಶೋಧನಾತ್ಮಕ ನೆಲೆಯಿಂದ ಹಲಕೆಲವು ಗ್ರಂಥಗಳೇನೋ ಬೆಳಕು ಕಂಡಿವೆ; ಆದರೆ ಯಕ್ಷಗಾನ ಪ್ರಸಂಗಗಳಲ್ಲಿರುವ ಸಾಹಿತ್ಯಿಕ ಮೌಲ್ಯಗಳ ಕುರಿತು ಸಾಕಷ್ಟು ಪ್ರಕಾಶ ಬೀಳಲಿಲ್ಲ. ಬಹಳ ಹಿಂದಿನಿಂದಲೇ ಜಾನಪದ ಕಾವ್ಯಗಳ ಪ್ರಭಾವ ಸಾಹಿತ್ಯದ ಮೇಲೆ ಆಗಿದ್ದುದು ಕಂಡುಬರುತ್ತದೆ. ಇದಕ್ಕೆ ಕಾರಣ ಅವುಗಳ ಸಾಹಿತ್ಯಿಕ ಮೌಲ್ಯ. ಅದೂ ಅಲ್ಲದೆ ಜನಜೀವನದಲ್ಲಿ ಸಾಹಿತ್ಯವು ಗುರುವಿನಂತೆ ಪೂಜ್ಯವಾಗಿದ್ದರೆ ಜಾನಪದ ಕಾವ್ಯಗಳು ಗೆಳೆಯನಂತೆ ಹಾಸುಹೊಕ್ಕಾಗಿವೆ. ಯಕ್ಷಗಾನ ಕಾವ್ಯಗಳಲ್ಲಿರುವ ಸಾಹಿತ್ಯಿಕ ಮೌಲ್ಯಗಳ ದಿಸೆಯಲ್ಲಿ ಬಹಳಷ್ಟು ಕಾರ್ಯ ನಡೆಯಬೇಕು. ಹಾಗೆ ನಡೆದಾಗ ಜಾನಪದ ಕಲೆಗಳ ರಾಜನಂತಿರುವ ಯಕ್ಷಗಾನದ ಮಹತ್ವ, ಶ್ರೇಷ್ಠತೆಗಳನ್ನು ಮನಗಾಣಲು ಸಾಧ್ಯವಾದೀತು. ಅಲ್ಲದೆ ಮುಂದೆ ಹೊರಬರುವ ಹೊಸ ಪ್ರಸಂಗಗಳ ಮೇಲೆಯೂ ಉತ್ತಮ ಪ್ರಭಾವ ಬೀರೀತು.

ಪ್ರತಿ ವರ್ಷವೂ ಮೇಳಗಳು ಜನರನ್ನು ಆಕರ್ಷಿಸುವುದಕ್ಕಾಗಿ ಹೊಸ ಹೊಸ ಪ್ರಸಂಗಗಳನ್ನು ಪ್ರದರ್ಶಿಸುತ್ತಾ ಬರುತ್ತಿವೆ. ಇದರಿಂದ ಪ್ರಸಂಗಕರ್ತರಿಗೂ ಪ್ರೋತ್ಸಾಹ ಸಿಕ್ಕಿ ಹಲವಾರು ಹೊಸ ಪ್ರಸಂಗಗಳು ರಂಗಸ್ಥಳ ಕಂಡಿವೆ. ಈಗ ಏಳು ವರ್ಷಗಳ ಹಿಂದೆಯೇ ಈ ವಾಸವದತ್ತ–ರತ್ನಾವಳಿ ಪ್ರಸಂಗವನ್ನು ನಾನು ರಚಿಸಿದ್ದರೂ ಇದು ಅಚ್ಚುಮೊಳೆ ಕಾಣುವುದು ಸಾಧ್ಯವಾಗಲಿಲ್ಲ.

ಇದರ ರಚನೆಗೆ ನನ್ನ ಯಕ್ಷಗಾನ ಮಿತ್ರರ ಪ್ರೋತ್ಸಾಹವೇ ಕಾರಣ. ಇದರ ಕಥೆ ಬಹುಮಟ್ಟಿಗೆ ಸ್ಕಾಂದ ಪುರಾಣವನ್ನೇ ಅನುಸರಿಸುತ್ತದೆ. ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ ಉದಯನ ಕಥಾ ಪ್ರಪಂಚ ಬಹಳ ವಿಸ್ತಾರವಾಗಿ ವ್ಯಾಪಿಸಿದೆ. ಆದರೆ ಆದರ್ಶವಿಲ್ಲವೆಂಬ ಕಾರಣದಿಂದಲೋ ದೇವರ ಅವತಾರ ಸಂಬಂಧವಿಲ್ಲವೆಂದೋ ರಾಮಾಯಣ ಮಹಾಭಾರತಗಳಂತೆ ಅದು ಪ್ರಚಾರಕ್ಕೆ ಬರಲಿಲ್ಲ. ಆದರೂ ಉದಯನ ಕಥಾವಳಿಯಲ್ಲಿರುವ ಜೀವನ ದರ್ಶನ, ನೀತಿನಿರೂಪಣೆಗಳು ಮಹತ್ವದ್ದೇ ಆಗಿವೆ. ಈ ಪ್ರಸಂಗದಲ್ಲಿ ವೀಣಾನಾದ ಪ್ರಿಯನಾದ ಉದಯನ ರಾಜ ಧೀರೋದಾತ್ತನೇ ಆಗಿರುತ್ತಾನೆ. ಶೃಂಗಾರ ವೀರ ಹಾಸ್ಯ ರಸಗಳಿಂದ ಕೂಡಿರುವುದರಿಂದ ಇದು ರಂಗಸ್ಥಳಕ್ಕೆ ಹಿಡಿದೀತೆಂದು ತಿಳಿದಿದ್ದೇನೆ. ನಾನು ಇದನ್ನು ರಚಿಸಿದ ನಂತರ ಯಕ್ಷಗಾನ ಲೋಕದ ದಿಗ್ಗಜವೆನಿಸಿದ ದಿವಂಗತ ಶ್ರೀ ಕುರಿಯ ವಿಠಲ ಶಾಸ್ತ್ರಿಗಳು ನನ್ನಿಂದ ಈ ಪ್ರಸಂಗವನ್ನು ಆದ್ಯಂತ ಓದಿಸಿ, ಹರಸಿದ್ದಲ್ಲದೆ ಅಮೂಲ್ಯವಾದ ಸಲಹೆಗಳನ್ನು ನೀಡಿದ್ದಾರೆ. ಆ ಬಗ್ಗೆ ಅವರಿಗೆ ನನ್ನ ಹೃತ್ಪೂರ್ವಕ ನೆನಕೆ ಸಲ್ಲಬೇಕು. ಈ ಪ್ರಸಂಗವನ್ನು ಪ್ರದರ್ಶಿಸುವಾಗ ಈ ಕೆಲವು ಸೂಚನೆಗಳನ್ನು ಅವಶ್ಯವಾಗಿ ಗಮನಿಸಬೇಕು. ಪ್ರಸೇನಾಖ್ಯ ಮತ್ತು ಭದ್ರಬಾಹುಗಳನ್ನು ಮಾಗಧ ಶಿಶುಪಾಲರಂತೆ ಕೋಲು ಕಿರೀಟ ಸಹಿತ ಚಿತ್ರಿಸಬಹುದು. ಚಂಡ ಮಹಾಸೇನ, ವಿಕ್ರಮ ಬಾಹುಗಳಿಗೂ ಕೋಲು ಕಿರೀಟಗಳನ್ನೇ ಉಪಯೋಗಿಸಬೇಕು. ಪುಳಿಂದಕನಿಗೆ ಕೇಸರಿ ತಟ್ಟಿ ಕಿರೀಟ ಉಪಯೋಗಿಸಬೇಕು. ವಸಂತಕ ಹಾಸ್ಯ ಪ್ರಧಾನ ಪಾತ್ರ.

ಈ ಪ್ರಸಂಗದ ಕಥೆಯನ್ನು ಹೆಣೆಯುವಲ್ಲಿ ಈ ಕೆಳಗಿನ ಗ್ರಂಥಗಳಿಗೆ ನಾನು ಋಣಿ.

1. ಕಥಾಮೃತ— ಎ. ಆರ್. ಕೃಷ್ಣ ಶಾಸ್ತ್ರಿ.
2. ಭಾಸನ ಎರಡು ನಾಟಕಗಳು— ಸಿ. ಪಿ. ಕೆ.

3. ಕಥಾ ಸರಿತ್ಸಾಗರ– ಎಂ. ಜೀವನ.
4. ಸ್ವಪ್ನ ವಾಸವದತ್ತ– ಅಳಸಿಂಗಾಚಾರ್ಯರ್.
5. ರತ್ನಾವಲಿ– ಕೋ. ನ. ಕಾರಂತ.
6. ಕನ್ನಡ ರತ್ನಾವಳಿ– ಸಿ. ಪಿ. ಕೆ.
7. ಅಜಾತ ಶತ್ರು (ಹಿಂದಿ) ಜಯಶಂಕರ ಪ್ರಸಾದ.
8. ಭಾಸ ಕವಿ– ಸಿ. ಕೆ. ವೆಂಕಟ್ರಾಮಯ್ಯ.

ಈ ಪ್ರಸಂಗವನ್ನು ಅಂದವಾಗಿ ಮುದ್ರಿಸಿಕೊಟ್ಟ ವಿಟ್ಲ ಜನತಾ ಪವರ್ ಪ್ರೆಸ್ಸಿನ ಮಾಲಕರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಇತಿ,

1-11-77 ವಿದ್ವಜ್ಜನ ವಿಧೇಯ,

ಬಾಯಾರು. T. ರಾಮಕೃಷ್ಣ ಭಟ್ಟ

ಕಥಾ ಸಾರ

ಕಥೆಯ ಹಿನ್ನೆಲೆ: ಹಿಂದೊಮ್ಮೆ ಬ್ರಹ್ಮಸಭೆಯಲ್ಲಿ ನರ್ತನವು ನಡೆಯುತ್ತಿದ್ದಾಗ ವಿಧೂಮನೆಂಬ ಗಂಧರ್ವನು ಕಾಮಾವಿಷ್ಟನಾಗಿ ಅಲಂಬುಸೆಯೆಂಬ ಅಪ್ಸರೆಯನ್ನು ಎವೆಯಿಕ್ಕದೆ ನೋಡಿದನು. ಅವಳೂ ಅದಕ್ಕೆ ಅನುರಾಗಪೂರ್ಣ ದೃಷ್ಟಿಯಿಂದ ಉತ್ತರಿಸಿದಳು. ಇವರ ಕಾಮುಕ ವರ್ತನೆಯಿಂದ ಕೋಪಗೊಂಡ ಬ್ರಹ್ಮನು, ಇಬ್ಬರೂ ಸತಿಪತಿಯರಾಗಿ ಮರ್ತ್ಯಲೋಕದಲ್ಲಿ ಜನಿಸಿ ಹಿಂತಿರುಗಿರೆಂದು ಶಪಿಸಿದನು.

ಆಗ ಕೌಶಾಂಬಿಯಲ್ಲಿ ಪಾಂಡವಕುಲದ ಶತಾನೀಕನೆಂಬ ರಾಜನು ವಿಷ್ಣುಮತಿಯೆಂಬ ರಾಣಿಯೊಂದಿಗೆ ಆಳುತ್ತಿದ್ದನು. ವಿಧೂಮನು ಈ ದಂಪತಿಗಳಿಗೆ ಮಗನಾಗಿ ಸಹಸ್ರಾನೀಕನೆಂಬ ಹೆಸರಿನಿಂದ ಜನಿಸುವನು. ಅಲಂಬುಸೆಯು ಅಯೋಧ್ಯಾಧಿಪತಿಯಾದ ಕೃತವರ್ಮನಿಗೆ ಮೃಗಾವತಿ ಎಂಬ ಮಗಳಾಗಿ ಸಹಸ್ರಾನೀಕನನ್ನು ವರಿಸುವಳು. ಮೃಗಾವತಿಯು ಗರ್ಭವತಿಯಾದಾಗ ಅವಳಿಗೆ ರಕ್ತಸರೋವರದಲ್ಲಿ ಸ್ನಾನಮಾಡಬೇಕೆಂಬ ಬಯಕೆಯಾಯಿತು. ಸಹಸ್ರಾನೀಕನು ತನ್ನ ರಾಣಿಯ ಬಯಕೆಯನ್ನು ಈಡೇರಿಸುವುದಕ್ಕಾಗಿ ರಕ್ತದ ಬದಲಾಗಿ ಅರಗಿನ ರಸದಿಂದ ಕೊಳವನ್ನು ತಯಾರಿಸುವನು. ಅವಳು ಅದರಲ್ಲಿ ಸ್ನಾನಮಾಡುತ್ತಿರುವಾಗ ಗರುಡವಂಶದ ಭಯಂಕರ ಪಕ್ಷಿಯೊಂದು, ಮಾಂಸದ ಮುದ್ದೆಯೆಂದು ಭ್ರಮಿಸಿ, ಅವಳನ್ನು ಕಚ್ಚಿಕೊಂಡು ಉದಯ ಪರ್ವತದ ತಪ್ಪಲಿಗೆ ಹಾರಿಹೋಯಿತು. ಅವಳು ಜೀವಂತಳೆಂದು ತಿಳಿದದ್ದರಿಂದ ಅವಳನ್ನು ಅಲ್ಲಿಯೇ ಬಿಟ್ಟುಹೋಯಿತು. ಅಲ್ಲಿ ಮೃಗಾವತಿಯು ಜಮದಗ್ನಿ ಮಹರ್ಷಿಯ ಆಶ್ರಮದಲ್ಲಿದ್ದು ಯಥಾ ಕಾಲದಲ್ಲಿ ಉದಯನ ಎಂಬ ಗಂಡುಮಗುವನ್ನು ಪಡೆಯುವಳು. ಜಮದಗ್ನಿಯು ಉದಯನನಿಗೆ ವಿದ್ಯಾಸಂಸ್ಕಾರಗಳನ್ನು ಕೊಡುವನು.

ಮೃಗಾವತಿಯು ಸಹಸ್ರಾನೀಕನೆಂಬ ಹೆಸರುಳ್ಳ ಒಂದು ಕಡಗವನ್ನು ಉದಯನನಿಗೆ ಹಾಕುವಳು.

ಒಂದು ದಿನ ಕಾಡಿನಲ್ಲಿ ವಾಸುಕಿಯ ಅಣ್ಣನಾದ ವಸುನೇಮಿ ಎಂಬ ಸರ್ಪನು, ಬೇಡನೊಬ್ಬನ ಕೈಯಲ್ಲಿ ಸಿಕ್ಕಿಬಿದ್ದಿರಲು ಉದಯನ ತನ್ನಲ್ಲಿದ್ದ ಕಡಗವನ್ನು ಆ ಬೇಡನಿಗೆ ಕೊಟ್ಟು ಆ ಹಾವನ್ನು ಬಿಡಿಸುವನು. ಸಂತೋಷಗೊಂಡ ವಸುನೇಮಿಯು ಉದಯನನಿಗೆ ಘೋಷವತಿಯೆಂಬ ವೀಣೆಯನ್ನು ಕೊಡುವನು. ಆ ವೀಣೆಯನ್ನು ನುಡಿಸಿ ಸುಲಭವಾಗಿ ಆನೆಗಳನ್ನು ಹಿಡಿಯಬಹುದಿತ್ತು. ವ್ಯಾಧನು ಕಡಗವನ್ನು ಕೌಶಾಂಬಿಗೆ ಕೊಂಡುಹೋಗಿ ಮಾರಿದಾಗ ಸಹಸ್ರಾನೀಕನಿಗೆ ತಿಳಿದು, ಅವನು ಜಮದಗ್ನ್ಯಾಶ್ರಮದಲ್ಲಿದ್ದ ಮಡದಿ ಮಕ್ಕಳನ್ನು ಅರಮನೆಗೆ ಕರೆದೊಯ್ಯುವನು. ಅನಂತರ ಚಕ್ರತೀರ್ಥದಲ್ಲಿ ಮಿಂದು ಆ ದಂಪತಿಗಳು ಸ್ವರ್ಗವನ್ನು ಸೇರುವರು. ಅನಂತರ ಉದಯನ ರಾಜ್ಯವಾಳತೊಡಗಿದನು.

ಇಲ್ಲಿಂದ ಪ್ರಸ್ತುತ ಪ್ರಸಂಗದ ಕಥೆ ಪ್ರಾರಂಭವಾಗುತ್ತದೆ.

ಆಗ ಅವಂತೀದೇಶದ ರಾಜನಾದ ಚಂಡಮಹಾಸೇನನಿಗೆ ವಾಸವನ ದಯದಿಂದ ಜನಿಸಿದ ವಾಸವದತ್ತೆಯೆಂಬ ಸುಂದರಿಯಾದ ಮಗಳಿದ್ದಳು. ಪ್ರಾಯಪ್ರಬುದ್ಧೆಯಾದ ಆಕೆಯನ್ನು ವಿರೋಧಿಯಾದರೂ ಉದಯನನಿಗೇ ಕೊಡಬೇಕೆಂದು ಅವನ ಇಚ್ಛೆ. ಮಗಳಿಗೆ ವೀಣಾಭ್ಯಾಸವನ್ನು ಮಾಡಿಸುವ ನೆವದಿಂದ ಉದಯನನನ್ನು ಬರಹೇಳಲು, ಅವನ ಬೇಡಿಕೆಯನ್ನು ತಿರಸ್ಕರಿಸುವನು. ಕೋಪಗೊಂಡ ಚಂಡಮಹಾಸೇನ ಉದಯನನನ್ನು ಉಪಾಯದಿಂದ ಸೆರೆಹಿಡಿಯುವುದಕ್ಕಾಗಿ ಒಂದು ಯಾಂತ್ರಿಕ ಗಜವನ್ನು ರಚಿಸಿ, ಅದರೊಳಗೆ ತನ್ನ ಇಬ್ಬರು ಮಕ್ಕಳಾದ ಗೋಪಾಲಕ ಮತ್ತು ಪಾಲಕರೆಂಬವರನ್ನು ಭಟರ ಸಹಿತ ಕುಳ್ಳಿರಿಸಿ ವಿಂಧ್ಯಾವನದಲ್ಲಿ ಬಿಡುವನು. ಬೇಟೆಗೆ ಬಂದ ಉದಯನ ಆನೆಯನ್ನು

ಹಿಡಿಯುವ ಉದ್ವೇಗದಿಂದ ಈ ಕೃತಕ ಗಜವನ್ನು ಅನುಸರಿಸಿ, ವೀಣೆ ನುಡಿಸಿ, ಗೋಪಾಲಕ ಪಾಲಕರ ಕೈಯಲ್ಲಿ ಸಿಕ್ಕಿಬೀಳುತ್ತಾನೆ. ಅವರು ಅವನನ್ನು ಬಂಧಿಸಿ ಕೊಂಡೊಯ್ಯಲು ಚಂಡಮಹಾಸೇನ ಆವನನ್ನು ಸತ್ಕರಿಸಿ ಬಂಧನದಲ್ಲಿಟ್ಟು, ತನ್ನ ಮಗಳನ್ನು ವೀಣಾಭ್ಯಾಸಕ್ಕೆ ಕಳುಹಿಸಿಕೊಡುತ್ತಾನೆ. ಉದಯನ ವಾಸವದತ್ತೆಯರಿಗೆ ಅಲ್ಲಿ ಪ್ರೇಮ ಬೆಳೆಯುತ್ತದೆ. ಇತ್ತ ಚಾಣಾಕ್ಷನಾದ ಯೌಗಂಧರಾಯಣ ಪ್ರಭುವನ್ನು ಬಂಧ ಮುಕ್ತಗೊಳಿಸುವುದಕ್ಕಾಗಿ ಸಿದ್ಧ ಗುರು ಯೋಗೇಶ್ವರನಿಂದ ಅದೃಶ್ಯಾಂಜನವನ್ನು ಪಡೆದು, ವಸಂತಕನ ಸಹಿತ ವೇಷಾಂತರಗಳಿಂದ ಉದಯನನಿಗೆ ಕೊಂಡೊಯ್ದು ಕೊಡುವನು. ಅದರ ಸಹಾಯದಿಂದ ಉದಯನ ವಾಸವದತ್ತೆಯೊಂದಿಗೆ ಚಂಡಮಹಾಸೇನನ ಖಡ್ಗಸಮೇತ ತಪ್ಪಿಸಿಕೊಂಡು ಹೋಗಿ ತನ್ನ ಸೇನೆಯೊಂದಿಗೆ ಸೇರುವನು. ಇದನ್ನು ತಿಳಿದ ಚಂಡಮಹಾಸೇನ ಕೋಪಗೊಂಡು ಯುದ್ಧಕ್ಕೆ ಸನ್ನದ್ಧನಾದರೂ ಅಶರೀರವಾಣಿಯ ಆದೇಶದಂತೆ ವಾಸವದತ್ತೆಯನ್ನು ವಿಧಿಪೂರ್ವಕವಾಗಿ ಉದಯನನಿಗೆ ಮದುವೆ ಮಾಡಿಕೊಡುವನು.

ಹೀಗಿರಲು ಕೌಶಾಂಬಿಯಲ್ಲಿ ಒಂದು ದಿನ ಓಲಗದಲ್ಲಿದ್ದ ಉದಯನ ರಾಜ ಯೌಗಂಧರಾಯಣನೊಡನೆ ತನ್ನ ಸಾರ್ವಭೌಮತ್ವದ ಪರಿಪೂರ್ಣತೆಯ ಬಗ್ಗೆ ಪ್ರಶ್ನಿಸುತ್ತಾನೆ. ಅದಕ್ಕೆ ಕೋಸಲರಾಜನಾದ ಪ್ರಸೇನನನ್ನೂ, ಸಿಂಹಳೇಶ್ವರನಾದ ವಿಕ್ರಮಬಾಹುವನ್ನೂ ಜಯಿಸಿದರೆ, ಏಕಚಕ್ರಾಧಿಪತಿತ್ವವು ಸಿದ್ಧಿಸುವುದೆಂದು ಮಂತ್ರಿಯು ಉತ್ತರಿಸಲು, ಉದಯನ ಅದನ್ನು ಸಾಧಿಸಲು ಆಜ್ಞೆ ನೀಡುತ್ತಾನೆ. ವಾಸವದತ್ತೆಯು ತಮ್ಮ ರಾಜ್ಯದಲ್ಲೆಲ್ಲ ವಸಂತೋತ್ಸವವನ್ನು ಆಚರಿಸುವಂತೆ ಅಪ್ಪಣೆಯಾಗಬೇಕೆಂದು ಪ್ರಾರ್ಥಿಸುತ್ತಾಳೆ. ಅದಕ್ಕೆ ರಾಜನು ಸಮ್ಮತಿಸುವನು.

ಅತ್ತ ಯೌಗಂಧರಾಯಣನ ಬಳಿಗೆ ಸಿಂಹಳಕ್ಕೆ ಹೋಗಿದ್ದ ಬಾಭ್ರವ್ಯನೆಂಬ ಬೇಹಿನವನು ಬಂದು, ಸಿಂಹಳ ರಾಜಕುಮಾರಿ

ರತ್ನಾವಳಿಯನ್ನು ವರ್ಣಿಸಿ, ಆಕೆಯನ್ನು ವಿವಾಹವಾದವನು ಸಾರ್ವಭೌಮನಾಗುವನೆಂದು ಜ್ಯೋತಿಷಿಗಳು ನುಡಿದ ಭವಿಷ್ಯವನ್ನು ಬಿನ್ನೈಸುವನು. ಈ ವೃತ್ತಾಂತದಿಂದ ಹುರುಪುಗೊಂಡ ಯೌಗಂಧರಾಯಣ ಮತ್ತು ರುಮಣ್ವಾನರು ತಮ್ಮ ಪ್ರಭುವಿಗೆ ರಾಣಿಯು ಮನನೋಯದಂತೆ ರತ್ನಾವಳಿಯನ್ನು ಜೊತೆಗೂಡಿಸಲು ಹಂಚಿಕೆ ಹೂಡುವರು. ಸಿಂಹಳೇಶ್ವರನಿಗೆ ರಾಜನ ಹೆಸರಲ್ಲಿ ಗುಪ್ತವಾಗಿ ಒಂದು ಓಲೆ ಬರೆದು, ಅದರಲ್ಲಿ ವಾಸವದತ್ತೆ ಬೆಂಕಿಯಲ್ಲಿ ಉರಿದು ಹೋದಳೆಂದೂ ರತ್ನಾವಳಿಯನ್ನು ವಿವಾಹವಾಗಲು ಕಾಣಿಕೆಯಾಗಿ ಕಳುಹಿಸಿಕೊಡಬೇಕೆಂದೂ ಸೂಚಿಸಿ ಬಾಭ್ರವ್ಯನ ಮೂಲಕ ಕಳುಹಿಸಿಕೊಟ್ಟರು.

ಸಿಂಹಳದಲ್ಲಿ ಈ ಪತ್ರವನ್ನು ನೋಡಿ ವಿಕ್ರಮಬಾಹು, ಮಾಂಡವ್ಯ ಮುನಿಯ ಭವಿಷ್ಯವಾಣಿಯನ್ನು ನೆನೆದು, ತನ್ನ ತಂಗಿಯ ಮಗಳಾದ ವಾಸವದತ್ತೆಯು ಸತ್ತುಹೋದದ್ದರಿಂದ ಮಗಳಾದ ರತ್ನಾವಳಿಯನ್ನು ಉದಯನನಿಗೆ ಕೊಡಲು ನಿಶ್ಚೈಸಿ, ಪರಿವಾರ ಸಮೇತ ರತ್ನಾವಳಿಯನ್ನು ಕರೆದೊಯ್ಯುವನು. ಮಧ್ಯ ಪಥದಲ್ಲಿ ಸಾಗರವನ್ನುತ್ತರಿಸುವಾಗ ನೌಕೆಯು ಕೆಡೆದು, ರತ್ನಾವಳಿಯು ಉತ್ತರ ತೀರದಲ್ಲೂ ಸಿಂಹಳೇಶ್ವರನು ದಕ್ಷಿಣ ತೀರದಲ್ಲೂ ಹೇಗೋ ಮೇಲೇಳುತ್ತಾರೆ. ಅನಂತರ ದುಃಖಿಸುತ್ತಿದ್ದ ರತ್ನಾವಳಿಯನ್ನು ಧನದತ್ತನೆಂಬ ವ್ಯಾಪಾರಿಯು ಕೌಶಾಂಬಿಗೆ ಕರೆದೊಯ್ದು ಯೌಗಂಧರಾಯನ ವಶಕೊಡುತ್ತಾನೆ. ಮಂತ್ರಿ ಆಕೆಯ ಸಂಗತಿಗಳನ್ನೆಲ್ಲ ತಿಳಿದು, ಅವಳಿಗೆ ಸಾಗರಿಕೆ ಎಂಬ ಹೆಸರಿಟ್ಟು ಅವಳನ್ನು ರಾಣಿಯ ಸೇವಕಿಯನ್ನಾಗಿ ನೇಮಿಸುವನು.

ಒಂದು ದಿನ ವಸಂತೋತ್ಸವದ ಸಂದರ್ಭದಲ್ಲಿ ರತ್ನಾವಳಿಯು, ಮದನ ಮಂಟಪದಲ್ಲಿದ್ದ ಉದಯನನನ್ನು ದೂರದಿಂದ ಕಂಡು ಮನಸೋತು, ಅವನೇ ತನ್ನ ಗಂಡನೆಂದು ತಿಳಿದು ಸಂತಸ

ಗೊಳ್ಳುವಳು. ಅವಳು ಹಲಗೆಯ ಮೇಲೆ ಅವನ ಚಿತ್ರ ಬರೆದು ಆನಂದಿಸುತ್ತಿದ್ದಾಗ ಅವಳ ಸಖಿಯಾದ ಸುಸಂಗತೆಯು ಬಂದು ಅದರೊಂದಿಗೇ ರತ್ನಾವಳಿಯ ಚಿತ್ರವನ್ನೂ ಬಿಡಿಸುತ್ತಾಳೆ. ಸುಸಂಗತೆ ಅವಳಲ್ಲಿ ಅನುಕಂಪದಿಂದ ಅವಳನ್ನು ರಾಜನೊಂದಿಗೆ ಬೆಸೆಯಲು ಯತ್ನಿಸುವಳು. ಹೀಗೆ ರಾಜನ ಕುರಿತು ಸಖಿಯರಿಬ್ಬರು ಆಡುತ್ತಿದ್ದ ಮಾತುಗಳನ್ನು ಅಲ್ಲೇ ಮರದ ಮೇಲಿದ್ದ ಮೈನಾ ಹಕ್ಕಿಯು ಕೇಳಿತು. ಅದು ಹಾರಿಹೋಗಿ ವಸಂತಕನೊಂದಿಗೆ ವಿಹರಿಸುತ್ತಿದ್ದ ರಾಜನ ಸಮೀಪ ಕುಳಿತು, ಆ ನುಡಿಗಳನ್ನೇ ಪುನರುಚ್ಚರಿಸಿತು. ಅದರಿಂದ ಪ್ರೇರಿತನಾದ ರಾಜನು ರತ್ನಾವಳಿಯನ್ನರಸುತ್ತ ಬಂದು, ಸುಸಂಗತೆಯ ಸಹಾಯದಿಂದ ಆಕೆಯ ದರ್ಶನವಾಗುವುದು. ಅಷ್ಟರಲ್ಲಿ ಅಲ್ಲಿಗೆ ವಾಸವದತ್ತೆಯು ಬಂದದ್ದರಿಂದ ರತ್ನಾವಳಿಯು ಅಡಗಿಕೊಳ್ಳಬೇಕಾಯಿತು. ಚಿತ್ರಪಟವು ರಾಣಿಗೆ ಸಿಕ್ಕಿ ರಾಜನು ರಾಣಿಯ ಕೋಪಕ್ಕೆ ಗುರಿಯಾಗುವನು.

ಅನಂತರ ವಸಂತಕ ಮತ್ತು ಸುಸಂಗತೆಯರ ಪ್ರಯತ್ನದಿಂದ ಮಕರಂದೋದ್ಯಾನದ ಲತಾಕುಂಜದಲ್ಲಿ ಉದಯನ ರತ್ನಾವಳಿಯರ ಸಮಾಗಮಕ್ಕೆ ಸನ್ನಾಹವಾಗುತ್ತದೆ. ರತ್ನಾವಳಿಯು ರಾಣಿಯ ವೇಷ ಧರಿಸಿ ಲತಾಕುಂಜಕ್ಕೆ ಬರಬೇಕಾಯಿತು. ಇದೆಲ್ಲ ಕಾಂಚನಮಾಲೆಯೆಂಬ ದಾಸಿಯ ಮೂಲಕ ರಾಣಿಗೆ ತಿಳಿದು, ಅವರ ಸಮಾಗಮವು ರಾಣಿಯ ಆಗಮನದಿಂದಾಗಿ ವಿಫಲಗೊಳ್ಳುತ್ತದೆ. ರಾಣಿಯ ದೆಸೆಯಿಂದಾಗಿ ನಿರಾಶೆಗೊಂಡ ರತ್ನಾವಳಿ ನೇಣು ಹಾಕಿ ಸಾಯಲು ಯತ್ನಿಸುತ್ತಿದ್ದಾಗ ಅಲ್ಲಿಗೆ ಉದಯನ ಬಂದು ರಾಣಿಯೆಂದೇ ಭ್ರಮಿಸಿ ಆಕೆಯನ್ನು ರಕ್ಷಿಸುತ್ತಾನೆ. ಆಗ ರಾಜನಲ್ಲಿ ಕ್ಷಮಾಯಾಚನೆಗಾಗಿ ಬಂದ ವಾಸವದತ್ತೆ ಅಲ್ಲಿ ರತ್ನಾವಳಿಯನ್ನು ಕಂಡು ಕೋಪದಿಂದ ಅವಳನ್ನು ಸೆರೆಮನೆಯಲ್ಲಿರಿಸುತ್ತಾಳೆ.

ಈ ಸಂದರ್ಭದಲ್ಲಿ ಯೌಗಂಧರಾಯಣನ ಆಲೋಚನೆಯಂತೆ ಕೋಸಲೇಶ್ವರನಾದ ಪ್ರಸೇನನನ್ನು ಗೆಲ್ಲುವುದಕ್ಕಾಗಿ ಉದಯನ,

ವಿಂಧ್ಯಾಚಲದ ಶಬರರಾಜ ಪುಳಿಂದಕನನ್ನು ಸಹಾಯಕ್ಕಾಗಿ ಕರೆಯಿಸಿ ಕೋಸಲ ದೇಶವನ್ನು ಮುತ್ತುತ್ತಾನೆ. ಯುದ್ಧದಲ್ಲಿ ಉದಯನನಿಗೆ ಜಯವಾಗುತ್ತದೆ.

ಅನಂತರ ಸಾಗರಿಕೆಯ ಬಂಧನವನ್ನು ಬಿಡಿಸುವುದಕ್ಕಾಗಿ ಯೌಗಂಧರಾಯಣನು ಅವಂತಿಯಿಂದ ಓರ್ವ ಐಂದ್ರಜಾಲಿಕನನ್ನು ಕರೆತರಿಸಿ ಅವನಿಗೆ ಮಂತ್ರ ಶಕ್ತಿಯಿಂದ ಕಾರ್ಯಸಾಧಿಸುವಂತೆ ಉಪಾಯ ಸೂಚಿಸುತ್ತಾನೆ. ಆ ಸಮಯಕ್ಕೆ ಸರಿಯಾಗಿ ಸಿಂಹಳೇಶ್ವರನ ಮಂತ್ರಿ ವಸುಭೂತಿಯು ರತ್ನಾವಳಿಯನ್ನರಸುತ್ತಾ ಉದಯನನ ಆಸ್ಥಾನಕ್ಕೆ ಬರುತ್ತಾನೆ. ಮಾಂತ್ರಿಕನ ಮಂತ್ರಪ್ರಭಾವದಿಂದ ಸಾಗರಿಕೆಯಿದ್ದ ಸೆರೆಮನೆ ಕಿಚ್ಚಿನಿಂದ ಧಗಧಗಿಸುವಂತೆ ಕಾಣಲು ಉದಯನ ಭಯಗೊಂಡು ರತ್ನಾವಳಿಯನ್ನು ಸೆರೆಬಿಡಿಸಿ ತರುತ್ತಾನೆ. ಆಗ ವಸುಭೂತಿಯು ರತ್ನಾವಳಿಯ ಕೊರಳಲ್ಲಿದ್ದ ರತ್ನಹಾರದಿಂದ ಅವಳನ್ನು ಗುರುತಿಸುವನು. ಆಗ ಯೌಗಂಧರಾಯಣ ಪ್ರಭುವನ್ನು ಚಕ್ರವರ್ತಿಯನ್ನಾಗಿಸಲು ತಾನೇ ಇಷ್ಟೆಲ್ಲಾ ಮಾಡಬೇಕಾಯಿತೆಂದು ಹೇಳಿದಾಗ ಸತ್ಯಸಂಗತಿ ಎಲ್ಲರಿಗೂ ತಿಳಿಯುತ್ತದೆ. ಅನಂತರ ಸಂಭ್ರಮದಿಂದ ರತ್ನಾವಳೀ ಉದಯನರ ವಿವಾಹ ನೆರವೇರುತ್ತದೆ.

ಪಾತ್ರಗಳ ವಿವರ:

1. ಉದಯನ (ವತ್ಸದೇಶಾಧಿಪ)
2. ಯೌಗಂಧರಾಯಣ (ಉದಯನನ ಮಂತ್ರಿ)
3. ರುಮಣ್ವಾನ (ದಂಡನಾಯಕ)
4. ವಿಕ್ರಮಬಾಹು (ಸಿಂಹಳ ರಾಜ)
5. ಬಾಭ್ರವ್ಯ
6. ಮಾಂಡವ್ಯ ಮುನಿ
7. ವಸಂತಕ (ಉದಯನನ ನರ್ಮ ಸಚಿವ)
8. ಚಂಡ ಮಹಾಸೇನ (ಅವಂತೀಶ)
9. ಶಾಲಂಕಾಯನ (ಮಂತ್ರಿ)
10. ಗೋಪಾಲಕ } (ಅವಂತೀ ರಾಜಕುಮಾರರು)
11. ಪಾಲಕ } (ಅವಂತೀ ರಾಜಕುಮಾರರು)
12. ಬುದ್ಧಿಮತಿ
13. ಪ್ರಸೇನಾಖ್ಯ (ಕೋಸಲ ರಾಜ)
14. ಭದ್ರಬಾಹು
15. ಪುಳಿಂದಕ (ಶಬರ ರಾಜ)
16. ಜಯವರ್ಮ (ರುಮಣ್ವಾನನ ಅಳಿಯ)
17. ವಸುಭೂತಿ
18. ಧನದತ್ತ
19. ಮಾಂತ್ರಿಕ
20. ಗುರು ಯೋಗೇಶ್ವರ

ಸ್ತ್ರೀಯರು

1. ವಾಸವದತ್ತೆ
2. ರತ್ನಾವಳಿ
3. ಸುಸಂಗತೆ
4. ಕಾಂಚನಮಾಲೆ

ದೂತರು, ಸೈನಿಕರು, ನರ್ತಕಿಯರು, ಅಂಬಿಗ ಇತ್ಯಾದಿ.

ಯಕ್ಷಗಾನ

ವಾಸವದತ್ತ - ರತ್ನಾವಳಿ

॥ ಶಾರ್ದೂಲ ವಿಕ್ರೀಡಿತಂ ॥

ಶ್ರೀಪೀನ ಸ್ತನ ರತ್ನ ಹಾರ ಕಷಣದ್ವಿಸ್ತಾರ ವಕ್ಷಸ್ಥಳಂ ।
ಭೂಪಾಲೌಘ ಕಿರೀಟ ದೀಪ್ತಿ ವಿಲಸತ್ಪಾದಾಂಬುಜೋದ್ಭಾಸಿತಂ॥
ಕೂಪಾರ ಪ್ರಿಯವಾಸನಾದಿ ಪುರುಷಂ ಶೃಂಗಾರ ಲೀಲಾಮಯಂ ।
ಪಾಪೋತ್ಪಾಟನ ನಾಮನೀಗೆಮಗೆ ಸೌಭಾಗ್ಯೋತ್ಸವಾನಂದವಂ
॥ ೧ ॥

ರಾಗ ನಾಟಿ ॥ ಝಂಪೆ ತಾಳ ॥

ಜಯ ಜಯ ಗಣಾಧೀಶ । ಜಯ ವಿಶ್ವ ಜನಪೋಷ । ಜಯ ನಾಮ ಪೀಯೂಷ । ಜಯತು ವಿಘ್ನೇಶ ॥ ಜಯ ಶರಣ ಭಯ ಹರಣ । ಜಯ ದಿವಿಜನುತ ಚರಣ । ಜಯ ಕೋಟಿ ರವಿ ಕಿರಣ । ಜಯ ದಯಾ ಭರಣ ॥ ಜಯತು ಜಯತು ॥ ೧ ॥ ಆದಿಯಲಿ ನಿನ್ನ ನಮಂ । ರಾದಿಗಳು ಪೂಜಿಪರು । ಮೋದದಿಂ ಮಣಿಯುವೆನು । ಮೋದಕ ಪ್ರಿಯನೆ ॥ ಹೇ ದೇವ ಹೇ ರಂಬ । ಪಾದಾಬ್ಜ ರೋಲಂಬ । ನಾದೆನಗೆ ನೀಡು ಲಂ । ಬೋದರನೆ ಶುಭವ ॥ ಜಯತು ಜಯತು ॥ ೨ ॥ ಸಕಲ ವಿದ್ಯಾ ಕಲಾ । ನಿಕರ ವಾರಿಧಿ ವಿನಾ । ಯಕ ಕಾವ್ಯ ಶಕ್ತಿ ದಾ । ಯಕ ರಸನೆ ಯಿಂದ ॥ ಪ್ರಕಟಗೈವುದು ಕೃತಿಯು । ಮುಕುಟ ಮಣಿ ಎಂಬಂತೆ । ಸುಕರದಿಂ ವಿಘ್ನನಾ । ಶಕ ದೇವ ಗಣಪ ॥ ಜಯತು ಜಯತು ॥ ೩ ॥

॥ ಭಾಮಿನಿ ॥

ಬಿಸುರುಹಾಸನೆ ದೇವಿ ಕವಿಜನ । ವಿಸರ ವಂದಿತೆ ವೀಣೆಯಿಂ
ಸಂ । ತಸದಿ ಗಾನವ ನುಡಿಸು ವಂದದೊಳೊಲಿದು ನೀನೆನ್ನ ॥ ರಸ
ನೆಯಲಿ ನೆಲಸಿದ್ದರ್ಕೃತಿಯನು । ರಸಭರಿತ ಮಪ್ಪಂತೆ ಮಿಗೆ ಪೇ ।
ಳಿಸಲು ಧನ್ಯನು ನಾನು ಮಣಿಯುವೆ ಪಾದ ಬಿಸರುಹದಿ ॥ ೧ ॥

॥ ಕಂದ ॥

ನೊಸಲೊಳ್ ನೇತ್ರಗಳಿನೆ ಶೋ । ಭಿಸಿದರ್ ವರ ಪಾರ್ತಿ
ಸುಬ್ಬನುಂ ಮುದ್ದಣನುಂ ॥ ಪೆಸರಾಂತು ಯಕ್ಷಗಾನದಿ । ಪೊಸಬ
ಗೆಣ್ತಿ ವಂದನೀಯರಾಗಿಹ ಕವಿಗಳ್ ॥ ೧ ॥

॥ ಕಂದ ॥

ಭಾಸಂ ಪ್ರತಿಜ್ಞೆಯಲ್ಲಿನೆ । ವಾಸವದತ್ತೆಯನುದಾತ್ತ ರಸಿಕ
ಜನಕ್ಕಂ ॥ ಪೂಸುವೆನು ಯಕ್ಷಗಾನ ಸು । ವಾಸಕಮಂ ಶೋಭಿ
ಸಲೀ ದೇವಿಯು ತನುವೊಳ್ ॥ ೧ ॥

॥ ಮತ್ತೇಭ ವಿಕ್ರೀಡಿತಂ ॥

ವರಹರ್ಷಂ ನೆರೆವೇಳೆ ಸಂಸ್ಕೃತದೊಳಾ ರತ್ನಾವಳೀ ನಾಟಕಂ
ಬರೆವೆಂ ನಾನದ ಯಕ್ಷಗಾನ ವಿಧಿಯಿಂ ರಂಗಸ್ಥಳಕ್ಕೊಪ್ಪುವಂ ॥
ತಿರೆಹರ್ಷಂ ಮಿಗಲಾ ರಸಾಲ ರಸದಿಂದಾ ಶರ್ಕರಂ ಮೊಳ್ಪವೋ ।
ಲರಲೊಂದುಗ್ಗಡ ಕಂಪಿನಿಂದರಳಿದಂ ತಿಂದೀ ಕಲೋ ದ್ಯಾನದೊಳ್
॥ ೧ ॥

॥ ದ್ವಿಪದಿ ॥

ಸ್ಕಾಂದ ಪೌರಾಣವನು ಹೊಂದಿ ಪೇಳುವೆನು । ಚಂದದಿಂ
ಯಕ್ಷಗಾನದಲಿ ಕತೆಯಿದನು ॥ ೧ ॥

ರಾಗ ಸೌರಾಷ್ಟ್ರ ॥ ತಾಳ ತ್ರಿವುಡೆ ॥

ಮೆರೆವ ಕೈಲಾಸಾದ್ರಿ ಶಿಖರದಿ । ಪರಮ ಪಾವನೆ ಗಿರಿಜೆ
ಯೊಂದಿನ । ಹರುಷದಿಂ ಪತಿಪಾದ ಸರಸಿಜ । ಕೆರಗಿ ನುಡಿಯೆ ॥೧॥
ಮನದಿನಿಯ ಪೊಸತೊಂದು ಸತ್ಕಥೆ । ಎನಗೆ ಪೇಳುವುದೊಲಿದು
ಪ್ರೇಮದೊ । ಳೆನಲು ಶಿವ ನಸು ನಗುತ ನುಡಿದನು । ವನಜ

ಮುಖಿಗೆ ॥ ೨ ॥ ಬೆಸೆಸುವೆನು ಕೇಳ್ ದೇವಿ ಲೋಕಕೆ । ಪೊಸತೆನಲು ಕತೆಯೊಂದನುದಯನ । ವಸುಮತೀಶನ ಪುಣ್ಯಚರಿತವ । ಬಿಸಜನೇತ್ರೆ ॥ ೩ ॥ ತರುಣಿ ವಾಸವದತ್ತೆ ಚೆಲುವೆಯು । ರರಸಿಯುದಯನ ಚಕ್ರವರ್ತಿಯು । ವರಿಸಿದಳು ಪ್ರೇಮದಲಿ ವರಭೂ । ವರನಿಗೊಲಿದು ॥ ೪ ॥ ಮರೆಯೆ ರತ್ನಾವಳಿಯು ಲೋಕೋ । ತ್ತರಮನೋಜ್ಞಾಕಾರೆ ಮಾರನ । ಶರವೆನಲು ಸಿಂಹಳ ನೃಪಾಲನ । ತರಳೆಯೆನಿಸಿ ॥ ೫ ॥ ಉದಯನಾವನಿಪಾಲ ಪ್ರೇಮಾಂ । ಬುಧಿಯೊಳೋಲಾಡಿದಳು ಪ್ರೇಮದ । ಕದವ ತೆರೆದಳು ವರಿಸಿದಳು ಸ । ಮ್ಮುದದೊಳವನ ॥ ೬ ॥ ಕ್ಷಿತಿಗೆ ಕೀರ್ತಿಯನಿತ್ತ ಸಜ್ಜನ । ಸತಿಯುರಿಬ್ಬರ ಪರಮ ಪ್ರೇಮದ । ಕತೆಯಿದನು ಪೇಳುವೆನು ಕೇಳ್ದರೆ । ಮತಿಗೆ ಶುಭವು ॥ ೭ ॥

॥ ವಾರ್ಧಿಕ ॥

ಕಾಮಿನೀ ಮಣಿಯೆ ಲಾಲಿಸವಂತಿದೇಶದೊಳ್ । ಭೂಮೀಶ ಕಂಠೀರವಂ ಮಹಾವೀರನು । ದ್ದಾಮ ರಿಪುನಿಕರ ಪ್ರಚಂಡ ಸಾಹಸಸಿಂಹ ಚಂಡ ಮಹಸೇನ ನೃಪನು ॥ ಧೀಮಂತ ಮಂತ್ರಿ ಜನವಾರದಿಂ ಪಾಠಕ । ಸ್ತೋತ್ರಮದಿಂದೊಂದಿನಂ ವಿಭವದಿಂ ನರ್ತಿಸುವ। ಭಾಮೆಯರ ಗಡಣದಿಂದೋಲಗದೊಳೆಸೆದಿರಲ್ ನೃಪಚಂದ್ರ ಗುಣಸಾಂದ್ರನು ॥ ೧ ॥

ರಾಗ ಭೈರವಿ ॥ ಝಂಪೆತಾಳ ॥

ಏವೆಂಬೆ ಚಂಡಮಹ । ಸೇನ ನೃಪತಿಯ ಕೀರ್ತಿ । ಮಾನಿನಿಯು ವೈಭವ ವಿ । ತಾನವನು ಜಗದಿ ॥ ೧ ॥ ಅಂಗಾರವತಿ ಆತ । ನಂಗನೆಯು ಶೋಭಿಪಳ । ನಂಗ ನಂಗನೆಯಂತೆ ॥ ಸಿಂಗಾರದಿಂದ ॥ ೨ ॥ ಭೂಪಗೀರ್ವರು ವಂಶ । ದೀಪಕರು ತನಯರಾ । ಗೋಪಾಲ ಪಾಲಕರು । ರೂಪಬಲಯುತರು ॥ ೩ ॥ ತರಳೆಯಾತಗೆ ಮೆರೆವ । ತರುಣ ವಾಸವದತ್ತೆ । ಸುರನರರ ಚೆಲುವಿನಿಂ । ದೆರಕ ಹೊಯ್ದಂತೆ ॥ ೪ ॥ ಮದವವೋಲಗೆ ಸಾಲೆ । ಪಿಧಿಯು ಸಾಹಸದ ನೆಲೆ । ವಿಧುವದನೆ ವರಮದನ । ಮದಕಲ್ಪವಲ್ಲೀ ॥ ೫ ॥ ಚಂಡಿಕೆಯನೊಲಿ

ಸಿ ಪ್ರ । ಚಂಡ ಖಡ್ಗವ ಪಡೆದ । ಚಂಡ ಮಹಸೇನನು ॥ ದ್ದಂಡೆ ಸಾಹಸಿಯು ॥ ೬ ॥ ವಸುಧೇಶ ಸಚಿವನೊಳು । ಬೆಸಸಿದನು ಸುತೆಯು ಶೋ । ಭಿಸುತಿಹಳು ಬಳೆದು ಷೋ । ಡಶ ವರ್ಷ ತುಂಬಿ ॥ ೭ ॥

ರಾಗ ಕೇದಾರ ಗೌಳ ॥ ಅಷ್ಟ ತಾಳ ॥

ಹರಯ ತುಂಬಿದ ಹೆಣ್ಣು ಜಗದ ಜನಕೆ ಕಣ್ಣು । ಇರಿಸಿಕೊಂಬುದಧರ್ಮವು ॥ ಅರಳಿದ ಸುಮ ಬಾಡದಿರುವುದೆ ಶೀಘ್ರದಿ । ಧರೆಯ ನೀತಿಯನರಿಯೆ ॥ ೧ ॥ ತರಳೆಯ ರೂಪಲಾವಣ್ಯಕೆ ಸರಿಯಾದ । ವರನ ಕಾಣೆನು ಜಗದಿ ॥ ಅರಸಿದೊಡೋರ್ವನಿಹನು ವತ್ಸದೇಶದ । ಧರಣಿಪನುದಯನನು ॥ ೨ ॥ ಎನಲೆಂದ ಮಂತ್ರೀಶ ನಾತನಮ್ಮಯ ಶತ್ರು । ಘನ ಗೌರವಾನ್ವಿತನು ॥ ವಿನಯದೊಳೊಪ್ಪನು । ತನುಜೆಯನೆನೆ ಪೇಳ್ದ । ಜನಪತಿ ನಿಜವೆನ್ನುತ ॥ ೩ ॥ ಹೆಣ್ಣಿನ ಕಡೆಯಿಂದ ಮಾತನಾಡಿಸಿದರೆ । ಸಣ್ಣವರಾಗುವೆವು ॥ ಬಣ್ಣಗುಂದುವುದಹುದಾದರೆ ಕಾರ್ಯವ । ತಣ್ಣಗೆ ಬಿಡಬಹುದೆ ॥ ೪ ॥ ಅದಕೊಂದುಪಾಯದೊಳಾತನ ನಮ್ಮಯ । ಸದನಕೆ ಕರೆಸುವುದ ಮುದಗೊಳಿಸುವುದವನೊಲವಿನಿಂ ಸುದತಿಯ । ಮದುವೆಯ್ಯ ಮಾಡುವುದು ॥ ೫ ॥ ವೀಣಾವಾದನದಿ ಪ್ರವೀಣನಾತನುಬಂದು ಏಣಾಂಬಕಿಗೆ ಬೋಧಿಸಿ ॥ ಕಾಣುತ ಪ್ರೇಮದಿ ಗುರುವಾಗೆ ಹಿಂದಣ ಕೇಣವು ಮಾಯುವುದು ॥ ೬ ॥

ರಾಗ ಸೌರಾಷ್ಟ್ರ ॥ ತ್ರಿವುಡೆ ತಾಳ ॥

ಆದಕೆ ಕಾರ್ಯವ ಸಾಧಿಸಲು ನೀ । ಚದುರನಾಗಿಹ ದೂತನೋರ್ವನ । ವಿಧಿಸಿ ಕೌಶಾಂಬೀಶನಾ ಸ । ನ್ನಿಧಿಗೆ ಕಳುಹು ॥ ೧ ॥ ದೂತ ಬಿನ್ನವಿಸುವುದು ರಾಜನ । ಜಾತೆ ವಾಸವದತ್ತೆ ವೀಣಾ ಪ್ರೀತಿಯಿಂದದಕಲಿಯಲಿಚ್ಛಿಸೆ । ಸಾತಿಶಯದಿ ॥ ೨ ॥ ಗುರುವೆನಿಸಿ ಬಂದಿಲ್ಲಿ ವಿದ್ಯೆಯ । ನರುಹ ಬೇಕೆನ ಕೇಳ್ದು ಮಂತ್ರೀ । ಶ್ವರನು ಚರನಹ ಬುದ್ಧಿಮತಿಯನು । ಕರೆದು ಪೇಳ್ದ ॥ ೩ ॥ ವತ್ಸಪತಿಯೆಡೆಗೈದಿ ವಾಸವ । ದತ್ತೆಗಾತನು ಗುರುವೆನಿಸಿ ಬರ । ಲಿತ್ತ ಚದುರಿಂ ಕಜ್ಜವೆಸಗೆನೆ । ಭೃತ್ಯ ನಡೆದ ॥ ೪ ॥

॥ ವಾರ್ಧಿಕ ॥

ಬಾಲೇಂದು ಫಾಲ ಕೇಳೆತ್ತ ಕೌಶಾಂಬಿಯೊಳ್ । ಲೀಲೆಯಿಂ ನೃಪ ಸಹಸ್ರಾನೀಕ ಜಾತ ಭೂ । ಪಾಲ ಮದನಂ ಪರಮ ಶೌರ್ಯ ಸದನಂ ಚಂದ್ರವಂಶ ಕೀರ್ತಿ ಪತಾಕನು ॥ ಮೇಲೆನಿಪ ಶೃಂಗಾರ ಸಾಗರಂ ಉದಯನ ನೃ । ಪಾಲನತಿ ವಿಭವದಿಂದೋಲಗದೊಳಿ ಸೆಯೆ ಸುರಪಾಲನಂದದಿ ಜನಂ ಜಯವೆನಲು ತೂರ್ಯತ್ರಯಂ ಪೊಣ್ಮೆ ಸಂಭ್ರಮದಲಿ ॥ ೧ ॥

ರಾಗ ಕಾಂಭೋಜಿ ॥ ಝಂಪೆತಾಳ ॥

ಎಂತು ಬಣ್ಣಿಪೆನವನ ವೈಭವವ ಜಗದ ಸಾ । ಮಂತನುತ ಚರಣನತಿ ನಿಪುಣ ॥ ಮಂತ್ರಿಯೌಗಂಧರಾಯಣನು ಸೇನಾಪತಿ ಯು । ತಂತ್ರಜ್ಞನಹ ರುಮಣ್ವಾನ ॥ ೧ ॥ ವಸುನೇಮಿ ನಾಗನಿ ತ್ತಿಹ ಘೋಷವತಿಯೆಂಬ ಹೆಸರಾಂತ ವೀಣೆಯಿಂದವನು ॥ ವಸುಧೆ ಯೊಳು ಗಜಗಳನು ಸೆಳೆವ ಶಕ್ತಿಯ ಪಡೆದ । ನಸಮ ಸಾಹಸಿ ಪೇಳ್ವ ನಿಂತು ॥ ೨ ॥ ಕೇಳೆಲೈ ಮಂತ್ರಿವರ ಪ್ರಜೆಗಳೆಲ್ಲರು ಸುಖದಿ । ಬಾಳುತಿರ್ಪರೆ ದೇಶದೊಳಗೆ ॥ ತಾಳಿಹುದೆ ಚಕ್ರಾಧಿಪತ್ಯ ಕೀರ್ತಿಯ ನೆನಲು । ಪೇಳಿದನು ಸಚಿವ ಕಲೆವಾಗಿ ॥ ೩ ॥ ಶಶಿಕುಲದ ಕೀರ್ತಿ ಚಂದ್ರಿಕೆಯಂತೆ ಬೆಳಗುತಿದೆ । ದಶದಿಶೆಯೊಳೆಲ್ಲ ವಸುಮತಿಯ ॥ ರಸೆಯ ಸಾಮಂತರತಿ ಹಿತರು ಬಾಗದ ವೈರಿ । ವಿಸರವನು ಬಾಗಿ ಸದೆ ಬಿಡೆವು ॥ ೪ ॥

॥ ಕಂದ ॥

ಇಂತೆನಲಮಂತಿಯಮಾ ಭೂ । ಕಾಂತಂ ಕಳುಪಿರ್ದದೂತ ವೈತಂದಾಗಂ ॥ ಸಂತಸದಿಂ ಸಮಯವ ತಿಳಿ । ದಂತರವಂ ಪೇಳ್ದ ನಮಿಸುತುದಯನ ನೃಪನೊಳ್ ॥ ೧ ॥

ರಾಗ ಯರಕಲ ಕಾಂಭೋಜ ॥ ಅಷ್ಟತಾಳ ॥

ಲಾಲಿಸು ಶಶಿಕುಲ । ಮೌಳಿ ಸದ್ಗುಣಿಯೆ ॥ ಪೇಳುವ ಮಾತ ಭೂ । ಪಾಲದ್ಯುಮಣಿಯೆ ॥ ಲಾಲಿಸು ॥ ಪಲ್ಲವಿ ॥ ಬಂದೆನವಂತಿ ಯಿಂ । ದೊಂದುನೇಮವನಾವ । ಸುಂಧರಾಧಿಪನೀಯಲಿಂದು ಬಿನ್ನ

ಕೆ ನಿನ್ನ । ಗಂಧರ್ವಗಾಯನದೆ ॥ ಕೀರ್ತಿಯಂ ಕೇಳ್ದು । ನಂದದಿ ತಲೆದೂಗಿದ ॥ ಶೌರ್ಯದ ಮೇಲ್ಮೆ । ಯಂದವರಿದು ಮೆಚ್ಚಿದ ॥ ವಸುನೇಮಿಃಯಿಃಂ । ಹೊಂದಿದ ಶಕ್ತಿಗೆ ತಾ ಬೆರಗಾದ ॥ ಲಾಲಿಸು ॥ ॥ ೧ ॥ ಆತನ ಪ್ರೀತಿಯು । ಜಾತೆ ವಾಸವದತ್ತೆ । ಭೂತಳದೊಳಗೆ ರೂ । ಪಾತಿಶಯದಿ ರತಿ ಖ್ಯಾತಿಯು ಮೀರಿಹಳು ॥ ಸಕಲ ವಿದ್ಯಾ । ವ್ರಾತವ ಕಲಿತಿಹಳು ॥ ನಾನಾವಿಧ । ಗೀತಾದಿಗಳ ಬಲ್ಲಳು ॥ ವೀಣಾಭ್ಯಾಸ । ಕಾತುರಗೊಂಡೋರ್ವ ಗುರುವನಿಚ್ಛೈಪಳು ॥ ಲಾ ಲಿಸು ॥ ೨ ॥ ಆ ನರಾಧಿಪ ಮಹಾ । ಸೇನನ ಬಿನ್ನಹ । ನೀನವಂತಿಗೆ ಬಲು । ಸಾನುರಾಗದಿ ಬಂದು । ಮಾನಿನಿಗತಿಮುದದಿ ॥ ಗುರು ವಾಗಿರ್ದು । ವೀಣೆಯಂವಾದನದಿ ॥ ಬೋಧಿಸಿ ಘನ । ಮಾನ ವಂತನೆಗುಣದಿ ॥ ಕೈಗೊಂಡು ಸ । ನ್ಮಾನವ ಧನ್ಯನ ಮಾಳ್ಪುದು ದಯದಿ ॥ ಲಾಲಿಸು ॥ ೩ ॥

॥ ಭಾಮಿನಿ ॥

ದೂತನೆಂದುದ ಕೇಳ್ದು ವರ ಭೂ । ನಾಥ ಸಹಿಸದೆ ಕರಳಿ ಗರ್ಜಿಸಿ । ಖಾತಿಯಲಿ ಕಿಡಿ ಕಾರಿದನು ಸಿಡಿಲಂತೆ ರೌದ್ರದಲಿ ॥ ಮಾತು ಬಲ್ಲೆನೆನುತ್ತ ಲೋಕದ । ರೀತಿಯನು ಮೀರುವುದೆ ಮೂರ್ಖನ । ಬೂತುಗನ ತಲೆಯಿಂದಲಿಳಿಸುವೆ ಪಿತ್ತದುದ್ರೇಕ ॥ ೧ ॥

ರಾಗ ಸೌರಾಷ್ಟ್ರ ॥ ತ್ರಿವುಡೆ ತಾಳ ॥

ಇವನ ಗರ್ವದ ಕೋಡು ಮುರಿಯದೆ । ಭುವನ ಕಂಟೀ ಕ್ಷೇಮ ಸಜ್ಜನ । ನಿವಹ ನಡೆಯುವುದೆಂತು ಲೋಕದಿ । ಬವಣೆ ಯಾಯ್ತು ॥ ೧ ॥ ಹೇಳಿ ಕರೆ ಕಳುಹಿಸಲು ನಾವೇ । ನೂಳಿಗದ ಜನವಾಯ್ತು ಲೋಕವ । ನಾಳುವೆವು ನಾವೆಂದು ತಿಳಿಯನೆ । ಖೂಳ ನಾತ ॥ ೨ ॥ ಚಂಡಸೇನನೊ ನೀತಿಯರಿಯದ । ಭಂಡನೋ ಕಂಡ ದೊಳು ಬೀಳುವ । ದಿಂಡನೋ ಮದ್ದರವೆನೀತನ । ಮೊಂಡು ತನಕೆ ॥ ೩ ॥ ಎಂದ ನುಡಿಯನು ಕೇಳುತಾಯ । ಗಂಧರಾಯಣ ವಿನಯದಿಂದವ ॥ ಸುಂಧರಾಧಿಪ ಗೆಂದ ಸಾಮವ । ಚಂದವೆನುತ ॥ ೪ ॥

ರಾಗ ಸಾರಂಗ ॥ ಅಷ್ಟತಾಳ ॥

ವಸುಮತೀಶನೆ ಲಾಲಿಸು । ಈ ಕಾರ್ಯರ್ಕು । ಬ್ಯಸವೇಕಿ ನಿತು ಯೋಚಿಸು ॥ ಅಸಮ ಸಾಹಸವೇಕೆ । ಸಸಿಗೇಕೆ ಕೊಡಲಿಯು । ಮಸೆವುದು ನಾವಾತ । ಗುಸಿರುವುದಿದರಿಂತು ॥ ವಸು ॥ ೧ ॥ ಗುರುವಿನ ಸನ್ನಿಧಿಗೆ । ಶಿಷ್ಯನು ಬಂ । ದಿರಬೇಕು ವರವಿದ್ಯೆಗೆ ॥ ಧರೆಗಿದೊಪ್ಪುವ ರೀತಿ । ಯರಿಯುತವಂತಿಯು । ಧರಣಿಪ ಪುತ್ರಿಯು । ಬರಲು ಶೋಭಿಪುದೆಲ್ಲ ॥ ೨ ॥

॥ ವಾರ್ಧಿಕ ॥

ಅಹುದಹುದು ಸರಿಯೆನುತ ಭೂಮಿಪಂ ದೂತನಿಗೆ । ವಿಹಿತದಿಂ ಬೆಸಸಿದಂ ಪೋಗಿ ಪೇಳ್ ನಮ್ಮೊಳೀ । ಕುಹಕತನ ಕಟ್ಟಿಟ್ಟು ಶಿಷ್ಯೆಯುಂ ಕಳುಹುವುದು ಗುರುವ ಸನ್ನಿಧಿಗೆ ತೀದು ॥ ಮಹಿಯ ಪದ್ಧತಿಯಿಂತು ಸಾಕು ನಡೆಯೆನಲು ಭಯ । ಸಹಿತ ಬರುತಲವಂತಿಯರಸನಾಲಯದಲ್ಲಿ । ಸಹಜದಿಂ ಬಿನ್ನವಿಸೆ ಪಾದಕಾನತನಾಗಿ ಚಂಡಮಹಸೇನ ನೃಪಗೆ ॥ ೧ ॥

ರಾಗ ಸುರುಟಿ ॥ ಏಕತಾಳ ॥

ಲಾಲಿಸು ರಾಜೇಂದ್ರ । ವಿಕ್ರಮ । ಶೀಲ ಸುಗುಣಸಾಂದ್ರ ॥ ಆಲಿಸು ವತ್ಸ ನೃ । ಪಾಲನು ರೋಷವ । ತಾಳುತ ನಮ್ಮೊಳು । ಪೇಳಿದ ವಚನವ ॥ ೧ ॥ ಗುರುವಿನ ಸನ್ನಿಧಿಗೆ । ಶಿಷ್ಯೆಯು । ಬರಲೆಂದನು ಕಡೆಗೆ ॥ ಉರಿಯುತ ಗರ್ವದೊ । ಳಿರುತಿದವನೆ ಭೂ । ವರಕಿಡಿಯಾದನು । ಪುರಹರನಂದದಿ ॥ ೨ ॥

ರಾಗ ಭೈರವಿ ॥ ಅಷ್ಟತಾಳ ॥

ಏನೆಂಬೆ ನೀ ಧೂರ್ತಗೆ । ಗೌರವದಿಂದ ॥ ಮಾನವಿತ್ತುದಕೆ ಹೀಗೆ ॥ ಹೀನರ ಬಳಿಗೆ ಸಂ । ಧಾನವೇತಕೆ ಗರ್ವಿ । ತಾನೆ ಕಾಣನು ನಿಜವ ॥ ೧ ॥ ಭಂಡನಾದನೆ ವತ್ಸನು । ಗರ್ವದ ಪಿತ್ತ ॥ ಮಂಡೆಯಿಂದಿಳಿಸುವೆನು ॥ ಚಂಡಿಕೆಯಿತ್ತಂಥ । ಖಂಡೆಯದಿಂದಲಿ । ಖಂಡಿಸುವೆನು ಮದವ ॥ ೨॥ ಎನಲೆಂದ ನೃಪಸುತನು । ಗೋಪಾಲಕ।

ಘುನರೋಷದಿಂ ಪೇಳ್ದನು ॥ ಜನಕ ಕೇಳಿಂದಿನೊ । ಳಿನಿತೊಂದು ಕಾರ್ಯಕೆ । ಮನದಿ ಚಿಂತಿಪುದೇತಕೆ ॥ ೩ ॥ ಅಪ್ಪಣೆ ಕೊಟ್ಟರೀಗ । ವತ್ಸೇಶನ । ದರ್ಪವ ಮುರಿವೆ ಬೇಗ ॥ ತಪ್ಪದೆ ಪಿಡಿದು ತಂ । ದೊಪ್ಪಿಸುವೆನು ಪಾದ । ಕಪ್ಪಿಸುವೆನು ಚಣದಿ ॥ ೪ ॥

ರಾಗ ಮಾರವಿ ॥ ಏಕತಾಳ ॥

ಕೇಳುತ ನೃಪಸುತ । ಪಾಲಕನಾಕ್ಷಣ । ಕಾಲನ ತೆರಮಸಗಿ ॥ ಪೇಳಿದ ವತ್ಸ ನೃ । ಪಾಲನ ಕೊಬ್ಬನು । ಕೀಳುವೆ ನಿಮಿಷದಲಿ ॥ ೧ ॥ ಏನಿದಕಿನಿತ । ಧ್ಯಾನವಿದೇತಕೆ । ಭಾನುಸುತನೆ ತಡೆಯೆ ॥ ಮಾನವನರಿಯುದ । ಮಾನವ ಪ್ರಾಣಿಯು । ಪ್ರಾಣಸಹಿತ ತರುವೆ ॥ ೨ ॥ ಶೀಘ್ರದೊಳಾತನ । ವಿಗ್ರಹ ಮುಖದಲಿ । ಪ್ರಗ್ರಹದಲಿ ಬಿಗಿದು ॥ ಉಗ್ರವನಿಳಿಸುವೆ । ನಗ್ರಜನೇತಕ । ನುಗ್ರಹಿಸಪ್ಪಣೆಯು ॥ ೩ ॥

ರಾಗ ಕಾಂಭೋಜ ॥ ಝಂಪೆತಾಳ ॥

ಕಂದರಿಂತೆನೆ ಕೋಪ । ದಿಂದ ಯೋಚಿಸಿ ಭೂಪ । ನೆಂದನ್ ದಯನ ಶಕ್ತಿಯುತನು ॥ ಬಂಧಿಸುತ ಕೃತ್ರಿಮೋಪಾಯುದಿಂ ಪಿಡಿ ತಂದು । ನಂದನೆಗೆ ಮದುವೆಯೆಸಗುವುದು ॥ ೧ ॥ ಕಾನನದೊಳ್ಳೆ ದುವನು ಮೃಗಯಾವಿಹಾರಕೆಂ । ದಾನರಾಧಿಪನಿರಂತರವು ॥ ಆನೆ ಗಳ ಸೆಳೆಯುವನು ವಸುನೇಮಿಯಿತ್ತ ವೀ । ಣಾನಾದ ಮಾಧುರ್ಯ ದಿಂದ ॥ ೨ ॥ ನಿಜವರಿಯುದಂತೆ ನಾವ್ ಯಂತ್ರದಿಂ ಕೃತ್ರಿಮದ ಗಜವೊಂದ ರಚಿಸುತದರೊಳಗೆ ॥ ಭುಜಬಲಾನ್ವಿತ ವೀರ ಭಟರ ಕುಳ್ಳಿರಿಸಿ ಸಾ । ಮಜವ ವನದೊಳಗೆ ಕಳುಹುವುದು ॥ ೩ ॥ ಅನು ವುಗಾಣುತ ದೂರಕೆಳೆದು ಬಂಧಿಸಿ ವತ್ಸ । ಜನಪತಿಯು ತರುವುದೆಂ ದೆನುತ ॥ ಅನಘಮತಿ ಸುತನಿಗಾಜ್ಞೆಯನಿತ್ತು ರಚಿಸೆ ನೂ । ತನ ವಾದ ಕೃತ್ರಿಮದ ಗಜವ ॥ ೪ ॥

॥ ಭಾಮಿನಿ ॥

ಆನೆಯನು ಕಳುಹಿದನು ತನ್ನಯ । ಸೂನು ಗೋಪಾಲಕನ ಕಾಹಿನ । ಸೇನೆಯಿಂದೊಡಗೂಡಿ ಕೌಶಲಗಳನು ತಾನರುಹಿ ॥

ಮೋನದಿಂ ಕೀಲಾನೆ ವಿಂಧ್ಯಾ । ಕಾನನಕೆ ನಡೆಕರಲು ಭಟರವಿ ।
ತಾನವದರೊಳು ಕುಳಿತು ಕಾದುದು ಬಲು ರಹಸ್ಯದಲಿ ॥ ೧ ॥

॥ ವಾರ್ಧಿಕ ॥

ಮತ್ತೇಭ ಗಮನೆ ಕೇಳ್ ಮುಂಗತೆಯು ಕೌಶಾಂಬಿ । ಪತ್ತನ ದೊಳುದಯನಂ ಮೃಗಯಾವಿಹಾರಕೆಂ । ದುತ್ತಮಕಿರಾತ ಪಡೆ ಯಂ ನೆರಹಿ ನಿಜಪುರಕೆ ಮಂತ್ರಿಯಂ ಕಾವಲಿರಿಸಿ ॥ ಮತ್ತೆ ಸೇನಾ ಪತಿ ರುಮಣ್ವಂತನಂ ವೆರಸಿ । ಬಿತ್ತರದೊಳೆಸೆವ ವಿಂಧ್ಯಾರಣ್ಯವಂ ಪೊಕ್ಕು । ಚಿತ್ತದುತ್ಸಾಹದಿಂ ಬೇಟೆಯಾಡುತ ಬಂದ ಸಕಲ ಮೃಗ ಸಂಕುಲವನು ॥ ೧ ॥

ರಾಗ ಮುಖಾರಿ ॥ ಏಕತಾಳ ॥

ಬೇಟೆಯಾಡುತ್ತ ಬಂದ ಭೂಪ । ರಿಪುಕುಲ ತಾಪ । ಬೇಟೆ ಯಾಡುತ್ತ ಬಂದ ಭೂಪ ॥ ಪಲ್ಲವಿ ॥ ಬೇಡರ ಪಡೆಯೊಂದು ಗೂಡಿ । ಉತ್ಸಾಹವೇರಿ ಕಾಡೊಳು ಮೃಗಗಳ ನೋಡಿ ॥ ಓಡಿಸಿ ಬಲಗಳ । ಹೂಡುತ ಶಸ್ತ್ರದಿ । ಪೀಡಿಸಿ ಬಲು ಸೆಣ । ಸಾಡುವ ಮಿಗಗಳ । ಕಾಡಿಸಿ ಕೆಲವನು । ಗೂಡಿನೊಳಿಕ್ಕಿ ಪ್ರ । ಗಾಢದಿ ಮೃಗಯಾ । ಕ್ರೀಡೆಯಿಂದೆಸಲು ॥ ಬೇಟೆ ॥ ೧ ॥ ಅತ್ತಿತ್ತ ನೋಡುತ್ತ ಸುಳಿದು । ಅಡಗಿದ ಪ್ರಾಣಿ । ಮೊತ್ತದ ಸೋವನು ತಿಳಿದು ॥ ಸುತ್ತುತ ಸುಳಿಯುತ । ಮತ್ತಿ ಮೃಗಂಗಳ । ಕುತ್ತಿ ಕೆಡಹಿ ಮುಂ॥ ದೊತ್ತುತ ಹ್ಯೊ ಹ್ಯೊ । ಯುತ್ತ ನಗುತ ಕರ । ಳುತ್ತ ಶಬರಗಣ ವೆತ್ತಲು ಕಾನನ ಪತ್ತನವೆನಲು ॥ ಬೇಟೆ ॥ ೨ ॥

॥ ವಾರ್ಧಿಕ ॥

ಅನಿತರೊಳು ವೇಗದಿಂ ಶಬರನೋರ್ವಂ ನೃಪನ । ಸವಿಹಕ್ಕೆ ತಂದೋದ ವಿಭುವೆ ಕೇಳದ್ಭುತಂ । ವನದ ಮೇರೆಯೊಳೊಂದು ನೀಲಗಜಮಂ ಕಂಡೆ ವರ್ಣಿಸೆ ವಿಚಿತ್ರವೆನಲು ॥ ಜನಪನಾತುರ ದಿಂದ ವೀಣೆಯಂ ಕೊಂಡು ಪರಿ । ಜನವನುಳಿದೇಕಾಂಗಿಯಾಗಿ ಬರಲತ್ತ ಕಾ । ನನದಿ ಕಂಡಂ ಯಂತ್ರಗಜವನುದ್ರೇಕಮಿರೆ ಸತ್ಯ ಗೋಚರಮಪ್ಪುದೆ ॥ ೧ ॥

ರಾಗ ಕೊರವಿ ॥ ಆದಿತಾಳ ॥

ನಿಜವರಿಯುದೆ ಭೂ । ಭುಜನಾ ಕೃತ್ರಿಮ । ಗಜವನು ನೋಡುತ ವೀಣೆಯು ॥ ವಿಜನ ವನದಿ ಗಜ । ವಿಜಯಕೆ ನಾದವ ಸೃಜಿಸಿದ ಮಧುರದ ಗೀತಿಯು ॥ ೧ ॥ ವೀಣೆಯು ಸುಮಧುರ । ತಾನಕೆ ಸೋತಿತು । ವಾಣಿಯ ಮೋಹಕ ಗಾನವು ॥ ಕಾನನಕಮೃತದ । ಸೋನೆಯಿಂದೆನೆ ರಸ । ಪಾನಕೆ ಪೊಸತೀ ತಾಣವು ॥ ೨ ॥ ಆಲಿಸುತಾ ಶುಂಡಾಲವು ನಾದವ । ಲೀಲೆಯೊಳೈದಲು ದೂರಕೆ ॥ ಭೂಲೋಲನು ಹಿಂ । ಬಾಲಿಸಿ ನಡೆದನು । ಸೋಲುತ ಕೃತ್ರಿಮದಾಟಕೆ ॥೩॥

॥ ಭಾಮಿನಿ ॥

ದೂರ ಸರಿಯಲು ಭರದಿ ಕೃತ್ರಿಮ । ವಾರಣೋದರದಿಂದಲರಿಭಟ । ವಾರ ಹೊರ ಧುಮುಕಿದುದು ಮುಗಿಲಿಂ ಸಿಡಿಲಿನಂದದಲೀ ॥ ಧೀರನಚ್ಚರಿಗೊಂಡು ಕಪಟ ವಿ । ಚಾರವರಿಯುತರೋಷದಿಂ ನೀ । ವಾರು ಹಗೆತನವೇಕೆ ಪೇಳಿರೆನುತ್ತಲಿದಿರಾದ ॥ ೧ ॥

ರಾಗ ಮಾರವಿ ॥ ಏಕತಾಳ ॥

ಹಗೆತನವೇತಕೆ । ಬಗೆದಿರಿ ಚೋರರೊ। ವಿಗಡರು ನೀವಾರು॥ ಮುಗಿಸುವೆ ಶೀಘ್ರಾ । ಶುಗದಲಿ ನಿಮ್ಮನು । ಪುಗಿಸುವೆ ಯಮಪುರಕೆ ॥ ೧ ॥ ಕೇಳಾವಂತಿ ನೃ । ಪಾಲನ ಸುತ ಗೋ । ಪಾಲಕ ನಾನಿಹೆನು ॥ ಕಾಳಗವಿದುನ। ಮ್ಮಾಳೊಳು ಗರ್ವದಿ। ಪೇಳಿದ ನುಡಿಗಾಯ್ತು ॥ ೩ ॥ ಪಾಲಕ ನಾನಿಹೆ । ಕೇಳಾವಂತಿಯ । ಪಾಲನ ಬಾಲಕನು ॥ ಖೂಳನೆ ಪಿಡಿದೆ । ಮ್ಮಾಲಯಕೊಯ್ಯುವೆ । ಕಾಳಗದಲಿ ನಿನ್ನ ॥ ೩ ॥ ಬಿಡು ಬಿಡು ನುಡಿಯನು । ಕಡುಗಲಿಯಹೆ ಬೆಂ । ಗಡೆಯೊಳು ಮೋಸದಲಿ ॥ ಪಿಡಿಯಲು ಬಂದಿರೆ । ಧಡಿಗರೆ ಯಮನದ । ವಡೆಯನು ತೋರಿಸುವೆ ॥ ೪ ॥ ದೂತಗೆ ಗರ್ವದ । ಮಾತನು ಪೇಳ್ದಾ । ರೀತಿಯೆ ಯುದ್ಧದೊಳು ॥ ಚಾತುರ್ಯದೊಳಿಹ । ಘಾತಿಪ ಕುಶಲವ । ನೀ ತಿಳಿವರೆ ತೋರು ॥ ೫ ॥ ಆಡಿದ ಕಟಕಿಯ । ಮೋಡಿಯ ಗರ್ವದ । ಕೋಡನು ಮುರಿಯುವೆನು ॥ ಬೇಡುತ ಶರಣೆಂ । ದಾಡಲು ಬಿಡುವೆನು । ನೋಡೀ ಶರತತಿಯ

॥ ೬ ॥ ವಿಧುಕುಲದರಸರು । ಸದರದೆ ಪರನೃಪ । ಸದನಕೆ ಪೋಗ್ಯ ವರೆ॥ ಮದಮುಖರಂದದಿ । ಕದನಕೆ ಬರೆ ಯಮು। ಸದನಕೆ ಕಳುಹು ವೆನು ॥ ೭ ॥ ಅದವುನೆಗೇತಗೆ । ಸೆರೆವುನೆಗೊಯ್ಯುವೆ । ಭರದಿಂ ದೀಗೆನುತ ॥ ವರಗೋಪಾಲಕ । ಶರವರ್ಷವ ತಾ ಸುರಿಸಿದನೆಡೆ ಬಿಡದೆ ॥ ೮ ॥

ರಾಗ ಕಾಂಭೋಜಿ ॥ ಝಂಪೆತಾಳ ॥

ಏಕೆ ಸಾಹಸ ಬರಿದೆ । ಸಾಕು ತಡೆ ಪೊಸತಾಯಿತು । ಲೋಕ ಕಿದು ಗಿರಿಯುಸಿರುವೆನೆಳು ॥ ನೂಕಬಲ್ಲುವೆ ನಿನಗೆ । ಸೋಕುವುದೆ ಜಯ ವೆನುತ । ನೇಕಶರದಿಂ ಮುಸುಕೆ ನೃಪನು ॥ ೧ ॥ ತಲೆಗಟ್ಟ ಸಿಂಪವದು । ಬಲೆಯೊಳಗೆ ಬೀಳುವುದ । ಚಲವಾದರೇನಶನಿಹೊ ಡೆಯೆ ॥ ನೆಲೆಗಟ್ಟು ಬಿರಿಯುವುದು । ತಿಳಿಯೆಯಾ ನೀನೆನುತ । ಹಳಿದ ಗೋಪಾಲಕನು ನೃಪನ ॥ ೨ ॥ ಮುತ್ತಿ ತಂದಯುನ ನೃಪನ। ಸುತ್ತುವರಿಯುತ ಸೇವೆ । ಪೃಥ್ವೀಶ ನೇಕಾಂಗಿ ಬಳಲಿ ॥ ತತ್ತರಿಸಿ ಸೆರೆಯಾದ । ಮತ್ತೆ ಪ್ರಗ್ರಹದಿಂದ । ಸುತ್ತಿ ಬಿಗಿದೆಳೆದೊಯ್ಯೆ ಪುರಕೆ ॥ ೩ ॥

॥ ಭಾಮಿನಿ ॥

ಭರದೊಳೊಯ್ಯುತವಂತಿಧರಣೀ ॥ ವರನ ಸಮ್ಮುಖದಲ್ಲಿ ನಿಲ್ಲಿಸಿ । ಪರುಷಗೊಂಡರು ಸಿಂಹವನು ಪಿಡಿದೊಯ್ದು ತಂದಂತೆ ॥ ಒರೆವೆನೆಂತಾ ಬಳಿಕ ನೃಪನಾ॥ ದರಿಸಿ ನೇಹದ ಮಾತಿನಿಂದುಪ।ಚರಿಸಿ ಪೇಳಿದ ವಿನಯದಿಂ ಕೌಶಾಂಬಿಪತಿಗಿಂತು ॥ ೧ ॥

ರಾಗ ಮಧುಮಾಧವಿ ॥ ತ್ರಿವುಡೆತಾಳ ॥

ಕೇಳು ಶಶಿಕುಲ ಶರಧಿ ಚಂದ್ರಮ । ಪೇಳುವೀ ನುಡಿಯನ್ನು ಕೋಪವ । ತಾಳದಿರು ಬಂಧಿಸುತಲೊಯ್ದುದು । ಖೂಳತನದಿಂದ ಲ್ಲವೈ ॥ ೧ ॥

ರಾಗ ಸೌರಾಷ್ಟ್ರ ॥ ತ್ರಿವುಡೆತಾಳ ॥

ಪಂದೆಗಳ ತೆರದಿಂದ ವಂಚಿಸಿ । ಬಂದು ಬಂಧಿಸಲೇನು ಹಗೆ ತನ । ಮಂದಮತಿನೀದ್ರೋಹಿ ವೀರನೆ । ಗಂದವಲ್ಲ ॥ ೧ ॥

ರಾಗ ಮಧುಮಾಧವಿ ॥ ತ್ರಿವುಡೆತಾಳ ॥

ಹಗೆತನವು ನಮಗಿಲ್ಲವೆನ್ನಯು। ಮಗಳುವಾಸವದತ್ತೆ ಮನದೊಳು।
ಬಗೆಯೆ ವೀಣಾಭ್ಯಾಸ ಕದರಿಂ । ಸೊಗದಿನೀಗುರುವಪ್ಪುದು ॥೧॥

ರಾಗ ಸೌರಾಷ್ಟ್ರ ॥ ತ್ರಿವುಡೆತಾಳ ॥

ಠಕ್ಕು ತೌಳಿಗಳೇಕೆ ದರ್ಪದ । ಸೊಕ್ಕು ಮಿಕ್ಕಿದುದಿಂಥ ಮೂರ್ಖತೆ । ದಕ್ಕಲಾರದು ನಿನಗೆ ನೃಪರಿಗೆ । ತಕ್ಕುದಲ್ಲ ॥ ೧ ॥

ರಾಗ ಮಧುಮಾಧವಿ ॥ ತ್ರಿವುಡೆತಾಳ ॥

ಶಾಂತನಾಗಿನ್ನೆಂತು ವರ್ತಿಸ । ಲಿಂತೆನಲು ನೃಪಚಕ್ರವರ್ತಿಗ । ಳಂತೆ ಕಾಂಬುದನಲ್ಕೆ ಸಂತಸ । ವಂತರಂಗದಿ ತಾಳುತ ॥ ೧ ॥ ಅರಮನೆಯೊಳಿರು ಸುಖದಿ ನೀನೆಂ। ದರುಹಲುದಯನ ಮೌನದಿಂದಿರೆ। ಧರಣಿಪತಿ ಕಳುಹಿದನು ನೃಪನುಂ । ದಿರಕೆ ಭಟಜನ ಸಹಿತದಿ ॥೨॥

॥ ವಾರ್ಧಿಕ ॥

ಉದಯನ ನೃಪಾಲನಂ ಸೆರೆಗಿಕ್ಕಿ ಸದನೆಗೆ । ವಿಧಿಸಿದಂ ನೇಮಮಂ ಸಂಗೀತ ಶಿಕ್ಷಣವ । ವಿಧಿಯಂತೆ ಪಡೆಯಲೆಂದಾಗ ಪಿತನಾಜ್ಞೆಯಂ ಪೊತ್ತು ವಾಸವದತ್ತೆಯು ॥ ಮುದವೇರಿ ಬಳಿಕ ವೀಣಾಭ್ಯಾಸಕೋವರನ । ವಧು ಪರೀಕ್ಷೆಗೊ ಎನಲ್ ಸಿಂಗರಿಸಿ ನೃಪನ ಸ । ನ್ನಿಧಿಗೆ ಸಖಿಯರ ಬಳಸಿ ಸತ್ಫಲದ ಕಾಣ್ಕೆಯಂ ಕೈಗೊಂಡು ಪೊರಮಟ್ಟಳು ॥ ೧ ॥

ರಾಗ ಕಲ್ಯಾಣಿ ॥ ಆದಿತಾಳ ॥

ಭಾವಜನರಗಿಣಿ । ಭಾವಕಿಯರ ಮಣಿ । ಭಾವಿಸೆ ಸುರತರುಣಿ ॥ ಲಾವಣ್ಯದರಸ। ದೇವನದಿಯೊಜಸ। ಠೀವಿದ ಬಲು ಹೊಸ । ಕಾವನ ರಮಣೀ ॥ ಭಾವಜ ॥ಪಲ್ಲವಿ॥ ನೋಡುತ । ಕಡೆಗಣ್ಣಿನ ನೋಟದಿ। ಹೂಡುತ । ಕಾಮನ ಕಣೆಗಳನರೆ । ತೀಡುತ ॥ ಮುಂಗುರುಳನು ನಸುನಗೆ । ಗೂಡುತ । ನೀಡುತ॥ ನಾಡೆ ಸುತನುಗಂಧ । ಅನಿಲನ। ಮಾಡಲು ಮಿಗೆ ಮಂದ॥ ರೂಢಿಯೊಳೀಪೆ।ಣ್ಣೀಡಾರೆನೆಮುದ। ವೇಡಿಸಿ ಸಖಿಜನ । ಕೂಡುತ ಬಂದಳು ॥ ಭಾವಜ ॥ ೧ ॥ ಸುರಿಸುತ । ಸನ್ಮೋಹನ ವರ್ಷವ ॥ ಧರಿಸುತ । ಸಂತೋಷವ ಮನದೊಳು । ಮೆರೆಸುತ।ಗುರುಭಾವವಭಕ್ತಿಯು। ನಿರಿಸುತ।ಸ್ಮರಿಸುತ॥ ಸರಿದುಬಳಿಗೆ

ನೃಪನ । ಕಾಣಿಕೆ । ಇರಿಸುತ ಕಂಡವನ ॥ ಎರಗಲು ಪದಯುಗ । ಸರಸಿಜದೊಳು ಭೃ । ಪರ ನೋಡುತಲಿನೆ । ಬೆರಗಿನೊಳಾಕೆಯು ॥ ಭಾವಜ ॥ ೨ ॥

ರಾಗ ಮೋಹನ ॥ ಅಷ್ಟತಾಳ ॥

ಯಾರೆ ಪೈಯಾರಿ ನೀನು । ಸುಂದರಿ ಸುರ । ನಾರಿಯೊ ಚೆಲುವಿ ದೇನು ॥ ಸಾರಶೃಂಗಾರ ವಿ । ಸ್ತಾರ ವಿಲಾಸದೊ । ಈ ರೀತಿ ಬಂದುದೇನು ॥ ೧ ॥ ಕಾಣಿಕೆಗಳಿವೇತಕೆ । ನೀನಿಂತೆನ್ನ । ಕಾಣಲು ಬಂದೆಯೇಕೆ ॥ ಜಾಣೆ ನಿನ್ನಯ ಚಿಕ್ಕೆಯು । ವೀಣೆಯಿದೇತಕೆ । ವಾಣಿಯು ತೆರದೊಳಿಹೆ ॥ ೨ ॥ ನಿನ್ನ ಸೃಷ್ಟಿಯ ಮಾಡಿದ । ವಿಧಾತನಿ । ಗಿನ್ನೆಂಟೆ ಅಪವಾದದ ॥ ಬನ್ನವು ತಿರೆಯು ಮೋ । ಹನ್ನೆಯೆ ಪರ ನಾರಿ । ಯನ್ನೇಕೆ ಜಣ್ಣಿಪನೋ ॥ ೩ ॥ ಕಾಮಿತಾರ್ಥವದೇನಿದೆ । ಮಾನಸದಲ್ಲಿ । ಕಾಮಿನಿಮಣಿ ಮಾಗದೆ ॥ ಪ್ರೇಮದೆ ಕೇಳಭಿ । ರಾಮೆ ನೀಡುವೆ ಚಂದ್ರ । ಧಾಮರುಚಿರ ಕಾಂತಿಯೆ ॥ ೪ ॥ ಮಾನಿನಿ ಮೌನವೇಕೆ । ಮಾತಾಡೆ ದು । ಮ್ಮಾನವೇನಿದು ಮನಕೆ ॥ ನಾನರಿಯೆನು ಪೆಣ್ಣ । ಮಾನಸವರಿತು ಸು । ಮ್ಮಾನದಿ ಮಾತಾಡಲು ॥ ೫ ॥

ರಾಗ ಮಧ್ಯಮಾವತಿ ॥ ತ್ರಿಪುಡೆತಾಳ ॥

ಎನಲು ವಾಸವದತ್ತೆ ಶಿರವನು । ಮಣಿದು ಲಜ್ಜಾಭರದಿ ನುಡಿ ದಳು । ಜನಕನೆನ್ನಯ ಮಂತಿ ಪತಿ ನಾ । ತನುಜೆ ವಾಸವದತ್ತೆಯು ॥ ೧ ॥ ತಂದೆಯಾಜ್ಞೆಯಿಂದಾಗ ನಾನ್ಯೆ । ತಂದೆ ವೀಣಾಭ್ಯಾಸಕೆನುತವ । ಸುಂಧರಾಧಿಪ ನಿನ್ನಡಿಗೆ ಗುರು । ವೆಂದು ಭಾವಿಸಿ ನಿನ್ನನು ॥ ೨ ॥ ಪಾದಸೇವೆಯ ಮಾಳ್ಪೆ ವೀಣೆಯು । ಬೋಧಿಸೆನಗೊಲವಿಂದ ಪಸ ರಿದೆ । ಹೇದಯಾನಿಧಿ ನಿನ್ನ ಕೀರ್ತಿಯು । ದೀಧಿತಿಯು ಜಗವೆಲ್ಲವ ॥ ೩ ॥ ಭೂಮಿಪತಿ ಹರಸುತ್ತ ಬಳಿಕಾ । ಕಾಮಿನಿಗೆ ಸಂಗೀತ ಕಲಿಸಲು । ಪ್ರೇಮದಿಂದೊಪ್ಪಿದನು ತೋಷದಿ । ಕಾಮ ಸನ್ನಿಭ ರೂಪನು ॥ ೪ ॥ ಬಂಧನದ ಚಿಂತೆಯನು ಮರೆದನು । ಸುಂದರಾಂಗಿಯು ರೂಪ ಮೋಹದ । ಬಂಧದಲಿ ವೀಣೆಯಲಿ ಗೀತದಿ । ಸಂದು ಹೋದುದು ಕೆಲದಿನ ॥ ೫ ॥ ಸುದತಿಯೂ ಕಣ್ಣಂಬ ಮಿಣ್ಣಗಳು । ಮದನ ಸನ್ನಿ

ಭವನ ರೂಪದ। ನದಿಯೊಳೀಜಾಡಿದುವು ಪ್ರೇಮದ। ಮದವು ಮಿತಿಯನು ಬಲ್ಲುದೆ ॥ ೩ ॥ ವೀಣೆಯೊಳು ನೃಪರಾಗವೇರಲು। ನಾಣಳಿದು ಮತ್ತೊಂದು ದಿನ ಸುಮು। ಬಾಣನುರಿಯೊಳು ನೊಂದು ಕೇಳ್ದಳು। ಜಾಣೆನಿಂದಲಿ ನೃಪನೊಳು ॥ ೭ ॥

ರಾಗ ಮಧ್ಯಮಾವತಿ ॥ ಏಕತಾಳ ॥

ವಂದಿಸುವೆನು ಲಾಲಿಸೆಲೆ ನೃಪಚಂದ್ರ।ಸಂದೇಹವೊಂದು ಮೂಡಿತು ಗುಣಸಾಂದ್ರ ॥ ಪಲ್ಲವಿ ॥ ಇಂದು ವಂಶಜನು ದುಷ್ಯಂತ ಪೂರ್ವದಲಿ। ಸುಂದರೀಮಣಿ ಶಕುಂತಳೆಯ ಪ್ರೇಮದಲೀ ॥ ಗಾಂಧರ್ವ ವಿಧಿಯು ವಿವಾಹದಿ ಕೂಡಿ। ಹಿಂದೇಕೆ ಪೋದ ಪ್ರೀತಿಯನು ನೀಡಾಡಿ ॥ ವಂದಿಸು ॥ ೧ ॥ ತರುಣಿಮಣಿಯೆ ಕೇಳಂದತಿಥಿಯೆಂದನಿಸೆ ಧರಣಿ ಪಾಲನ ಶಕುಂತಳೆಯು ಪಚರಿಸೆ॥ ಬೆರೆದರೀರ್ವರು ಪ್ರೀತಿಯಿಂ ಕಾರ್ಯಭರದಿ। ಪೊರಟನುತ್ತಮರ ರೀತಿಯ ಚಂದ ಜಗದಿ ॥ ೨ ॥ ಆಂತಾದರೆಂತೆಂದು ಯತಿಯ ವೇಷದಲೀ। ಅಂತರಂಗದೊಳೊಲಿಯುತ ಸುಭದ್ರೆಯಲೀ॥ ಕೌಂತೆಯ ಮನವನೆಂತರಿತನೊ ಪಾರ್ಥ। ಪಂಥದಿ ಕೊಂಡೊಯ್ದನಂತೆ ಸಮರ್ಥ ॥ ೩ ॥ ಎಲೆ ಸುಹಾಸಿನಿ ಕೇಳು ನರ ಸುಭದ್ರೆಯರು। ಒಲಿದೋರ್ವರೋರ್ವರ ಮನವರಿತಿಹರು ॥ ಸಲಿಲಜಾಕ್ಷನ ದಯವದಕೆ ಹಿಂದುಂಟು। ಜಲಧಿ ಶಶಿಗಳೆಂತೆ ಶ್ರೇಷ್ಠರ ನೆಂಟು ॥ ೪ ॥

ರಾಗ ಮಿಶ್ರತೋಡಿ ॥ ಅಷ್ಟತಾಳ ॥

ಮಾರಸನ್ನಿಭ ಮಾತ ಕೇಳು। ಲೋಕ। ವೀರ ಗಂಭೀರ ದಯಾಳು॥ ಧಾರಿಣಿಯೊಳು ನಿನ್ನ ತೆರದಿ। ನೃಪ। ಧೀರರ ಕಾಣೆನು ನಿಜದಿ ॥ ಸರ್ವ। ನಾರಿ ವೃಂದಕೆ ಮೋಹ। ಮೀರಿಸಿ ಚಿತ್ತದ। ಸಾರ ಸರ್ವಸ್ವವ। ಹೀರುವ ಮನ್ಮಥ ॥ ಮಾರ ಸನ್ನಿಭ ॥ ೧ ॥ ನಿನ್ನ ಸೇವೆಯೆ ಭಾಗ್ಯವೆಸಗೆ। ಜನ್ಮ। ಜನ್ಮಕೀ ತನುಮನ ನಿನಗೆ ॥ ಮನ್ನಿಸೆನ್ನಪರಾಧ ವಿರಲು। ತವ। ಸನ್ನಿಧಿಗಿದು ಪ್ರೇಮದರಲು॥ ಜನ। ಸನ್ನುತ ಪುರುಷ ನೀಡೆನ್ನ ಕಾಮಿತವನ್ನು। ಕನ್ನೆಯರೊಳಗಿನ ಬನ್ನವನರಿಯೆಯ ॥ ಮಾರ ಸನ್ನಿಭ ॥ ೨ ॥

ರಾಗ ಸಾವೇರಿ ॥ ರೂಪಕ ತಾಳ ॥

ಪೂ । ರ್ಣೇಂದು ವದನೆ । ಕುಂದರದನೆ । ಸುಂದರೀಮಣಿ ॥ ಅಂದ
ವರಿತೆ । ನಿಂದು ಕೇಳ್ಳು । ದೊಂದ ಪೇಣ್ಮಣಿ ॥ ಪೂರ್ಣೇಂದು ॥ ೧ ॥
ಅ । ಗುರುವು ನಿಂತ । ನರಿಯು ಗೃಹದಿ ॥ ಬರುವುದೇ ಬಲ ॥ ಒರೆ
ವೆನೆಂತು । ತರುಣಿ ಮನವ । ಕೊರೆವ ಜಂಬಲ ॥ ಪೂರ್ಣೇಂದು ॥ ೨ ॥
ಈ । ರೂಪವೆಂಬ । ದೀಪದಲ್ಲಿ । ಪಾಪತಂಗವು ॥ ತಾಪಲಿಖಿಯು ।
ಧೂಪವಿದ ಸು । ಖೋಪಭೋಗವು ॥ ಪೂರ್ಣೇಂದು ॥ ೩ ॥

॥ ಭಾಮಿನಿ ॥

ಹೃದಯದೊಳಗಾ ವೀಣೆ ಪ್ರೇಮದ । ಕದವನೊಂದಿನ ತೆರೆಯಲೀ
ರ್ವರು । ಮದನ ತಾಪದೊಳುರಿದು ವರಗಾಂಧರ್ವರೀತಿಯಲಿ ॥
ಮದುವೆಯಾಗುತ ಬಂಧನದ ನೃಪ । ಸದನವೇ ಸುಖ ಶಯ್ಯೆಯಾ
ಗಲು । ಮದದ ಸೊಂಪನು ಪಡೆದರಾರತಿಕಾವ ರಂಗದಲೀ ॥ ೧ ॥

॥ ವಾರ್ಧಿಕ ॥

ಮನದಿನಿಯ ಕೇಳುತ್ತ ಯೌಗಂಧರಾಯಣಂ । ಜನಪತಿಯುವಂತಿ
ಯೊಳ್ ಸೆರೆಯಾದುದಂದರಿ । ರೆನಲು ಚಿಂತಿತನಾಗಿ ಶೋಕಭಾರದಿ
ಬಳಲಿ ವಂಚಿಸಿದ ವೈರಿಗಳಲಿ ॥ ಕನಲಿರೋಷದಿ ಶಠಗೆ ಪ್ರತಿಸಾತ್ಯವೆ
ನುತ ಬಂ । ಧನದಿಂದಲರಸನಂ ಮುಕ್ತಗೊಳಿಸಲ್ ತನ್ನ । ಸನಿಹಕ್ಕೆ
ನರ್ಮಸಚಿವನ ಕರೆದು ನುಡಿದಂ ಪ್ರತಿಜ್ಞೆಗಳ ನೇನೆಂಬೆನು ॥ ೧ ॥

ರಾಗ ನಾದನಾಮಕ್ರಿಯೆ ॥ ಅಷ್ಟತಾಳ ॥

ಬಂಧಿಸಿದನೆ ನಮ್ಮ ಸ್ವಾಮಿಯು । ಮೋಸ । ದಿಂದ ಘಾತಿಸಿ ಪ್ರಜಾ
ಪ್ರೇಮಿಯು ॥ ಅಂಧನಾಗಿ ಹನಹಂಕಾರದಿ । ಈ । ಷಂಡಗೆ ಟಲಿಸುವೆ
ಶೀಘ್ರದಿ ॥ ೧ ॥ ವಂಚಿಸಿ ಪ್ರಭುವನೊಯ್ದುದರಿಂದ ॥ ನಾವು ।
ಸಂಚಿಸಿಂ ಬಿಡಿಸಿ ಬಂಧನದಿಂದ ॥ ಹೊಂಚಿ ಬಳಿಕ ಸೇನೆಯೊಯ್ಯುವುದ ।
ಮತ್ತೆ । ಸಂಚರಿಸುರಿವನಾತಗೀವುದು ॥ ೨ ॥ ಮಂದಮತಿಯು ತಂದು
ಸ್ವಾಮಿಯು । ಪಾದ । ದ್ವಂದ್ವಕೆ ಮಣಿಸುವೆ ನಿಶ್ಚಯ ॥ ಎಂದ
ಘಾತಿಗೆ ತಪ್ಪಿ ನಡೆದರೆ । ಯೌ । ಗಂಧ ರಾಯಣನಲ್ಲ ಬಂದರೆ ॥ ೩ ॥

॥ ವಾರ್ಧಿಕೆ ॥

ಇಂತೆಂದು ಶಪಥವಂ ಕೈಗೊಂಡು ಶೀಘ್ರದಿಂ । ಸಂತವಿಸಿ ರಾಜಮಾತೆಯು ಬಳಿಕ ಮಿತ್ರಂ ವ । ಸಂತಕನ ಸಹಿತ ಯೋಗೇಶ್ವರ ನೆನಿಪ್ಪ ಸಿದ್ಧೇಶ ಗುರು ಸನಿಹ ಕೈದಿ ॥ ಮುಂತಿರ್ಪ ಕಜ್ಜದ ಜಯಕ್ಕೆ ನಾನಾವಿಧದ । ಮಂತ್ರೌಷಧಂಗಳಂ ಪಡೆಯಲೆನೆ ನೃಪನ ವೃ । ತ್ತಾಂತವಂ ಪದಕೆರಗಿ ಪೇಳಿದರು ಬುಧರೊಲಿಯೆ ಜಯಸಿದ್ಧಿಯಾಗದಿಹುದೆ ॥ ೧ ॥

ರಾಗ ಕಾಂಬೋಧಿ ॥ ಅಷ್ಟತಾಳ ॥

ಗುರುವರ್ಯ ಕೇಳಿಮ್ಮ ಸೊಲ್ಲ । ನೃಪ। ಸೆರೆಯಾದ ವೃತ್ತಾಂತವೆಲ್ಲ ॥ ದುರುಳನವಂಶಿಯು । ಧರಣೀಶ ದ್ರೋಹದ । ಪುರುಡನು ಮೋಸದ । ಪರಿಯನೇನೆಂಬೆವು ॥ ೧ ॥ ಮೃಗಯಾ ವಿಹಾರಬೋಳಿರಲು । ತೋಷ । ದಿಂಗೆ ಕಪಟದ ಗಜ ಬರಲು ॥ ಬಗೆಯರಿಯದೆ ಪೋಗೆ । ಹಗುರದೊಳದರಿಂದ ಹಗೆಯು ಭಟರು ನುಗ್ಗಿ । ಬಿಗಿದು ಕೊಂಡೊಯ್ದರು॥೨॥ ಇಂಥಾ ದ್ರೋಹವ ಮಾಡಬಹುದೇ। ವೀರ। ಪಂಥಕೀ ರೀತಿಯೊಪ್ಪುವುದೇ ॥ ಎಂತಾದರೀಗ ಭೂ । ಕಾಂತನ ಬಿಡಿಸುತ್ತ। ಮುಂತೆ ವೈರಿಯ ಬಾಗು। ವಂತೆ ಮಾಡಲೆಬೇಕು ॥೩॥

ರಾಗ ಸಾಂಗತ್ಯ ॥ ರೂಪಕತಾಳ ॥

ಎಂದ ಮಾತನು ಕೇಳ್ದು ಗುರುಯೋಗೇಶ್ವರ ಮನ । ಗುಂದಿ ಯೋಚಿಸುತಲಿಂತೆಂದ ॥ ಮುಂದೆ ನೀವ್ ಜಯಶೀಲರಪ್ಪಂತೆ ಕೊಡುವೆ ನಾ । ನೊಂದು ಮಂತ್ರೌಷಧವನ್ನು ॥ ೧ ॥ ಇದುವ ದೃಶ್ಯಾಂಜನ ವಿದನೊಪ್ಪೆ ದೇಹ ಭಾ । ಗದೊಳುಲೇಪಿಸೆದೃಶ್ಯ ವಿಲ್ಲ ॥ ಉದಯನ ನೃಪ ತನ್ನ ಸುದತಿಯನೊಡಗೊಂಡು । ಹದನ ವರಿತು ಬರಲಹುದು ॥ ೨ ॥ ಚಂಡಿಕೆಯೊಲಿದಿತ್ತ ಖಂಡೆಯ ಬಲವಿರೆ । ಚಂಡ ಮಹಾಸೇನ ನೃಪನ ॥ ದಂಡಿಸಲಸದಳವದರಿಂದೆ ಖಡ್ಗವೆ । ಕೊಂಡುಬರ್ಪುದು ಗುಪ್ತವಾಗಿ ॥ ೩ ॥ ಪೋಗಿರಿನ್ನೆಚ್ಚರ ವಂಜನವಿದರುಪ । ಯೋಗವೊಪ್ಪೆಗೆ ಮಾತ್ರ ನೃಪಗೆ ॥ ಯೋಗೇಶ್ವರ ಸಿದ್ಧನೀಯಲಿಂತದ ಕೊಂಡು ।ಬಾಗುತವಂತಿಗೈತಂದು ॥ ೪ ॥

॥ ಭಾಮಿನಿ ॥

ಶಿರವ ಮುಂಡಸಗೈದ ಮರುಳನ । ತೆರದಿ ವೇಷವ ತಳೆದು ಮಂತ್ರೀ । ಶ್ವರನು ವಿಕಟ ಬ್ರಾಹ್ಮಣನ ತೆರದಿಂ ವಸಂತಕನು ॥ ಧರಿಸಿ ವೇಷವ ಜನರನಗಿಸುತ । ಪುರದೊಳಗೆ ಬರುತಿರಲು ನೃಪತಿ ಯು । ತರಳೆ ವಾಸವದತ್ತೆ ಕಾಣುತ ಕೌತುಕದಿ ನುಡಿಯೆ ॥ ೧ ॥

ರಾಗ ಶಂಕರಾಭರಣ ॥ ರೂಪಕತಾಳ ॥

ಸಖಿಯೆ ಇಂದುಮುಖಿಯೆ ನೋಡು । ವಿಕಟರೀರ್ವರ ॥ ಮುಖವಿಕಾರಗೊಳಿಸಿ ಹಾಸ್ಯ । ಪ್ರಕಟಮಾಳ್ಪರ ॥ ೧ ॥ ಅವರನಿಲ್ಲಿ ಕರೆಸಿ ನಮ್ಮ ಭವನಕೀಕ್ಷಣ ॥ ತವಕದಿಂದ ಮಾಳ್ಪುದೊಂದು । ನವ ಪ್ರದರ್ಶನ ॥ ೨ ॥ ಪ್ರಿಯನ ಮನಕೆ ಸೊಗವಿದೆಂಬ । ಬಯಕೆ ಎನ್ನೊಳು । ಭಯವದೇಕೆ ಎನಲು ಸಖಿಯು । ನಯದಿ ಕರೆದಳು ॥ ೩ ॥ ಬಂದರಾಗಲವರು ಹಿಂದೆ । ಮುಂದೆ ನೋಡುತ ॥ ವಿಂದ ರಲ್ಲಿ ವತ್ಸಭೂಪ । ನಂದಗಾಣುತ ॥ ೪ ॥ ವತ್ಸದೇಶದಿಂದ ಬಂದೆ । ವಿತ್ತಲೆನ್ನುತ ॥ ಹತ್ತಿರಕ್ಕೆ ಬಂದು ಕುಣಿದು । ಮತ್ತೆ ನೋಡುತ ॥ ೫ ॥ ಕಣ್ಣುಮಿಟುಕಿಸುತ್ತ ಮರುಳ । ಸನ್ನೆಗೈಯಲು ॥ ಮಿಣ್ಣ ನಾಗ ನೃಪತಿ ನಿಜದ । ಬಣ್ಣ ತಿಳಿಯಲು ॥ ೬ ॥ ಸಾರಿಗುಪ್ತವಾಗಿ ಕೇಳೆ । ಕಾರಣಗಳನು ॥ ಪೂರ ಮಂತ್ರಿ ನುಡಿದ ಕಾರ್ಯ । ಸಾರ ವಿಧಿಯನು ॥ ೭ ॥

ರಾಗ ಕಾಫಿ ॥ ಅಷ್ಟತಾಳ ॥

ಲಾಲಿಸಿ ಕೇಳೆನ್ನ ದೊರೆಯೆ । ವತ್ಸ । ಪಾಲ ಪರಾಕ್ರಮಿ ಸದ್ಗುಣ ನಿಧಿಯೆ ॥ ಪಲ್ಲವಿ ॥ ತವವಾರ್ತೆಯನು ಕೇಳಿ ಮನದಿ । ದುಃಖ । ಬವಣೆ ಹೆಚ್ಚಿತು ನಮಗೆಲ್ಲಪಾಕ್ಷಣದಿ ॥ ಜವದಿ ಬಂಧನ ಮುಕ್ತಗೊಳಿಸೆ । ಉಪಾ । ಯವನು ಯೋಚಿಸಿ ಬಂದೆವಿಲ್ಲಿಗೆ ತಿಳಿಸೆ ॥ ಲಾಲಿಸಿ ॥ ೧ ॥ ಜನದ ಕಣ್ಣಿಗೆ ಕಾಣದಂತೆ । ಜನ । ಮನವ ಸೆಳೆದು ವಶೀಕರಣ ಮಾಳ್ಪಂತೆ ॥ ವಿನಗೀವೆ ವೀ ಮಹೌಷಧಿಯ । ಕೊಂಡು । ವನಕಿರುಳಲಿ ಕೂಡಿಕೊಂಡು ಕಾಮಿನಿಯ ॥ ಲಾಲಿಸಿ ॥ ೨ ॥ ಚಂಡಮಹಾಸೇನ ನೃಪನ । ವರ । ಖಂಡೆಯವನು ಕೊಂಡು

ಬರ್ಪುದು ಜತನ॥ ದಿಂಡನಾತನ ಮದವಿಳಿಸಿ । ಮುಂ । ಕೊಂಡು ಪೋಪುದು ಮತ್ತೆ ಕೀರ್ತಿಯು ಗಳಿಸಿ ॥ ಲಾಲಿಸಿ ॥ ೩ ॥ ಬಲವು ನಮ್ಮದು ಬಂದು ವಸದಿ । ಬಲು । ಚಲದಿ ಕಾಯುತ್ತಿದೆ ನೀನೊಂದು ಗಜದಿ ॥ ಸುಲಭದೊಳ್ಕೆತರ್ಪುದೆಂದಾ ॥ ಮಂತ್ರ । ಬಲದೌಷಧಿಯನಿತ್ತು ಪೊರಟಿಲ್ಲಿಂದ ॥ ಲಾಲಿಸಿ ॥ ೪ ॥

॥ ವಾರ್ಧಿಕ ॥

ಇಂತೆಂದ ಮಂತ್ರಿಗಳ ತಂತ್ರಮಂ ಮೆಚ್ಚಿ ಭೂ । ಕಾಂತನು ಕಾಂತೆವಾಸವದತ್ತೆಗರುಹುತ್ತ । ಚಿಂತೆಯಂ ನೀಗಿ ತನ್ನೊಡಗೊಂಡು ವರಖಡ್ಗಮಂಕೊಂಡು ಸಖಿಯು ಸಹಿತ॥ ಧ್ವಾಂತದೊಳ್ ಮಂತ್ರೌಷಧ ಪ್ರಭಾವದಲಿ ಜನ । ಸಂತತಿಗೆ ಮರೆಯಾಗಿ ವಸದೆಡೆಗೆ ಬಂದಲ್ಲಿ । ಮಂತ್ರಿಗಳ ಕಂಡಾಗ ಸಕಲ ಬಲ ಹರ್ಷದಿಂ ಯುದ್ಧ ಕಣಿಯಾಗಲಂದು ॥

ರಾಗ ಸೌರಾಷ್ಟ್ರ ॥ ತ್ರಿವುಡೆತಾಳ ॥

ತಂಗಿಯನು ಕದ್ದೊಯ್ದನೆನ್ನುವ । ಸಂಗತಿಯು ತಿಳಿಯುತ್ತ ಪಾಲಕ । ಕಂಗಳೊಳು ಕಿಡಿಯುಗುಳಿ ಕೆರಳಿದ । ಸಿಂಗನಂತೆ ॥ ೧ ॥ ಪೇಳಿದನು ಪಿತನೊಡನೆ ಕೇಳ್ಳೈ । ಖೂಳ ವತ್ಸನು ನಮ್ಮ ಮಾನವ। ಕೀಳುಗೈದನು । ಕಳ್ಳನಾತನ । ಸೀಳಬೇಕು ॥ ೨ ॥ ಮಿಕ್ಕ ಮಾತಿನ್ನೇಕೆ ವತ್ಸನ । ಸೊಕ್ಕನಿಳಿಸುತ ಪಿಡಿದು ಬಂಧನ । ಕಿಕ್ಕದಿದ್ದರೆ ನಮ್ಮ ಕೀರ್ತಿಗೆ । ತಕ್ಕುದಲ್ಲ ॥ ೩ ॥ ಜನಕ ಕೇಳಿಂದಾಜ್ಞೆಯಾದರೆ ಕ್ಷಣದಿ ಬಂಧಿಸಿ ತರುವೆನಾತನ । ಮನದ ಸಂಶಯವನ್ನು ತೊರೆಯೆನೆ । ಜನಪ ನುಡಿದ ॥ ೪ ॥

ರಾಗ ಮಾರವಿ ॥ ಏಕತಾಳ ॥

ಚೋರನ ತೆರದಿ ಕುಮಾರಿಯು ಬಲುಹಿಂ। ಹಾರಿಸಿದಾತನನು॥ ಏರಿದ ಪಿತ್ತವ ಕಾರಿಸಿ ಕಳುಹುವೆ ಮಾರಿಯು ಭೋಜನಕೆ ॥ ೧ ॥ ಕೊಡಿಸಿ ಬಲವನು ಜಾಡಿಸಿ ವತ್ಸನ । ನೋಡಿಸಿ ಪಿಡಿದೆಳೆದು ॥ ಗಾಢದಿ ನೆತ್ತರ ಕೋಡಿಯು ಹರಿಸುವೆ । ಮೂಢನ ದುಷ್ಕೃತಿಗೆ ೨ ॥ ಕಾಳಿಯು ಕರುಣೆಯು ಕೂರಸಿಯಲಿ ರಿಪು । ಜಾಲವ ತರಿ

ತಿರಿದು ॥ ಹೊಳುವ ತಡೆಯುವ ಖೂಳರದಾರೈ । ನೀಳುವನೀ
ಕ್ಷಣದಿ ॥ ೩ ॥ ಕೆರಳುತ ಬಳಿಕಾ ಕರವಾಲಪ ತಾ । ನರಸಲು ಕಾಣ
ದಿರೆ ॥ ಉರಿದುರಿದೇಳುತ ಕೆಂಗಿಡಿಗಾರುತ । ಜರೆದನದಾರೆನುತ
॥ ೪ ॥ ಹೇಡಿಗಳಂದದಿ ವರ ಖಡ್ಗವ ಕ । ದ್ದೋಡಿದನೇ ಭಯದಿ ॥
ತೋಡುವೆನಾತನ ಕರುಳನು ಕದನಕೆ । ಕೂಡಲಿ ಸೇನೆಗಳು ॥ ೫ ॥

ರಾಗ ಸೌರಾಷ್ಟ್ರ ॥ ತ್ರಿವುಡೆ ತಾಳ ॥

ಘುಡುಘುಡಿಸಿ ರೌದ್ರದಲಿ ಮಿಗೆ ಪ । ಲ್ಗಡಿದು ಮೀಸೆಯ
ತಿರುಹಿ ಭೂತಲ । ನಡುಗೆ ಬೀರಿನ್ನೊಂದು ಖಡ್ಗವ । ಜಡಿದು
ಬಳಿಕ ॥ ೧ ॥

॥ ಭಾಮಿನಿ ॥

ಘನಪರಾಕ್ರಮಿ ಚಂಡಿಕೆಯು ಹೃ । ನ್ಮನದಿ ಧ್ಯಾನಿಸೆ ಕೇಳಿ
ದುದು ಸುಂ । ಕ್ವನದ ಬಾನುಲಿಯಿಂತು ತಡೆತಡೆ ಬವರ ಸರಿಯಲ್ಲ॥
ಜನಪನುದಯನ ಪರಮ ವಿಕ್ರಮಿ । ನಿನಗೆ ವರಜಾಮಾತನಿರಲತಿ ।
ವಿನಯದಲಿ ಪೆಣ್ಣಿತ್ತು ವಿವಹವ ಗೈಯ್ಯೆ ಶುಭವೆನಲು ॥ ೧ ॥

ರಾಗ ಕೇದಾರಗೌಳ ॥ ಅಷ್ಟತಾಳ ॥

ಗಗನವಾಣಿಯು ಕೇಳ್ದು ಮನದೊಳಚ್ಚರಿತಾಳ್ದು । ಬಗೆಬಗೆ
ಯೊಳು ಚಿಂತಿಸಿ ॥ ಸುಗಮವೆಂತಹುದೆಂದು ಯೋಚಿಸಲಾಕ್ಷಣ ।
ಮಗುಳೆಂದ ಮಂತ್ರಿಯೊಳು ॥ ೧ ॥ ನಭವಾಣಿ ಕೇಳ್ದೆಯೆ ಶಾಲಂ
ಕಾಯನವನ । ದಭಿಮತವೇನು ಪೇಳು ॥ ಶುಭವಾವುದೆಂಬುದ
ನರಿಯೆ ವಿವೇಕದ । ಪ್ರಭೆಯೊಳು ನೋಡುವುದು ॥ ೨ ॥ ಪ್ರಭುವೆ
ಲಾಲಿಸು ಈಶನಾಜ್ಞೆಯೆಂಬುದು ಸತ್ಯ । ನಭವಾಣಿಯರಿತು ನೀವೋ
ಡೆ ॥ ಲಭಿಸುವುದೀಪ್ಸಿತವಂತೆಸಗಲು ನಮ್ಮ । ವಿಭವವು ಮೇಲ
ಪ್ಪುದು ॥ ೩ ॥ ಸಚಿವನ ಮಾತವ ಸಮ್ಮತಿಸಿ ಭೂಪತಿ ಕಾಲ ।
ಕುಚಿತವಿದಹುದೆನುತ ॥ ಉಚಿತದೊಳೆಂದನು ಪ್ರಚುರದೂತನೊ
ಳಿಂತು । ರುಚಿರವಚನಗಳನು ॥ ೪ ॥ ಉದಯನ ನೃಪಗೈದಿ ಬಿನ್ನೈ
ಸು ಬಾನುಲಿ । ಹದನವ ಚದುರಿನೊಳು ॥ ಕದನಕೆ ಹಗೆಯಿಲ್ಲವಳ
ಯುಂದಿರಲ್ಲಿ ಸ । ಮ್ಮುದದಿಂದಲೈತರ್ಪುದು ॥ ೫ ॥ ವಧುವನಿಂಗರಿ

ನುತ್ತ ವಿಧಿಯಂತೆ ಮಾಳ್ಪೆವು । ಮದುವೆಯನೆನೆ ದೂತನು ॥ ಪದು ಳದಿ ವನದೆಡೆಗೈತಂದು ನೃಪನ ಸ । ನ್ನಿಧಿಯಲ್ಲಿ ಪೇಳ್ದನೆಲ್ಲ ॥ ೬ ॥

ರಾಗ ಸಾರಂಗ ॥ ಅಷ್ಟತಾಳ ॥

ವತ್ಸೇಂದ್ರ ಲಾಲಿಸಯ್ಯ । ಅವಂತೀಶ । ನಿತ್ತಲಟ್ಟಿದನು ಜೀಯ ॥ ಪುತ್ರಿಯ ಕಾಣದೆ । ಚಿತ್ತವಿಕ್ಷೋಭಿಸೆ । ಮತ್ತಾಗ ಬಾನು ಲಿ । ಯುತ್ತರ ನೀಡಿತು ॥ ವತ್ಸೇಂದ್ರ ॥ ೧ ॥ ಪ್ರೇಮಭಾವದಿ ಪೇಳಿದ ॥ ಈ ವಚನವ । ಭೂಮಿಪ ಸಂತೋಷದ ॥ ಜಾಮಾತ ರೊಳು ನಮ್ಮ । ತಾಮಸ ಭಾವದ । ಧೂಮವೇಳದು ಗೈವೆ । ನೇಮದಿ ವಿವಹವ ॥ ೨ ॥ ಪರಿವಾರ ಕೂಡಿಕೊಂಡು । ದಿಬ್ಬಣ ಬಂದು। ಪುರದಿ ಸನ್ಮಾನಗೊಂಡು ॥ ತರಳೆಯ ವಿಧಿಯಂತೆ। ಪರಿಗ॥ ಹಿಸುವುದೆಂದು। ಧರಣಿಪ ಪೇಳ್ದನೆಂ। ದೊರೆಯೆ ಸಂತಸಗೊಂಡು ॥ ವತ್ಸೇಂದ್ರ ॥ ೩ ॥

ರಾಗ ಕಾಂಬೋಧಿ ॥ ಝಂಪೆತಾಳ ।

ದೂತನೆಂದುದ ಕೇಳ್ದು ಭೂತಳಾಧಿಪ ಮಂತ್ರಿ । ವ್ರಾತ ದೊಳು ಮಂತಣವಗೈದು ॥ ಪ್ರೀತಿಯನ್ನೊಡಗೊಂಡು ಪರಿವಾರ ಸಹಿತದಿಂ । ದೈತಂದವಂತಿ ಪುರದೆಡೆಗೆ ॥ ೧ ॥ ಮಹಸೇನ ನೃಪ ನಂದು । ಬಹಳ ಸಂಭ್ರಮದಿಂದ । ಮಹಿಪನಂ ಸತ್ಕರಿಸಿ ಸುತೆಯ॥ ವಿಹಿತದಿಂ ವಿವಹವನು ಗೈದ ಸುಮುಹೂರ್ತದಲಿ । ಮಹಿಯ ಜನ ಮೆಚ್ಚುತಿಣಿವಂತೆ ॥ ೨ ॥ ಬಳಿಕ ನವದಂಪತಿಗಳಂ ಹರಸಿ ವಿಧ ವಿಧದ । ಬಳುವಳಿಯನಿತ್ತು ಬೀಳ್ಕೊಡಲು ॥ ತಳೆದು ಹರ್ಷವ ನುದಯನಂ ಕೊಂಡ ಖಂಡೆಯವ । ನೊಲಿದು ಪಿಂದಿತ್ತು ಪೂರ ವಂಟ ॥ ೩ ॥ ಧಾರಿಣಿಪ ಸ್ತ್ರೀರತ್ನ ಧರಿಸಿ ವತ್ಸವ ಪೊಕ್ಕ । ಭೂರಿ ಮಂಗಳ ಘೋಷ ಮೆರೆಯೆ ॥ ಶ್ರೀರಾಮಸೀತೆಯನ್ನೊಡಗೊಂಡ ಯೋಧ್ಯೆಯಂ । ಚಾರು ವೈಭವದಿ ಪೊಕ್ಕಂತೆ ॥ ೪ ॥

ರಾಗ ಭೈರವಿ ॥ ಝಂಪೆತಾಳ ॥

ಇಂತಿರಲು ವತ್ಸೇಶ । ಕಾಂತಾಸಮೇತನತಿ । ಸಂತಸದೊಳಿ ರ್ದನ । ತ್ಯಂತ ವೈಭವದಿ ॥೧॥ ಒಂದು ದಿನ ಸಚಿವ ಯೌ । ಗಂಧ ರಾಯಣನ ಕರೆ । ದೆಂದ ಕೇಳೈ ಪ್ರಜಾ । ವೃಂದವೆಂತಿರುವುದು ॥೨॥

ಸಾಮಂತರೆಲ್ಲವರು । ಸ್ವಾಮಿನಿಷ್ಠೆಯೊಳಿಹರೆ । ಭೂಮಿಯೊಳು ಮಮ ಸಾರ್ವಭೌಮಪದವೆಂತು ॥ ೩ ॥

॥ ಕಂದ ॥

ಕ್ಷಿತಿಪಾಲಕನೆಂದುದನಾ । ಮತಿಯುತ ಯೌಗಂಧರಾಯಣಂ ಕೇಳ್ದಾಗಂ ॥ ಚತುರಂ ಪೇಳ್ದಂ ಸರ್ವರ್ । ಹಿತರಾ ಸಾಮಂತರೆಲ್ಲ ಪ್ರಭು ಸನ್ನಿಧಿಯೊಳ್ ॥ ೧ ॥

ರಾಗ ಕೇದಾರಗೌಳ ॥ ಅಷ್ಟತಾಳ ॥

ಉದಯನ ವಿಭು ಲೋಕದುದಯಾರ್ಕ ಪ್ರಜೆಗಳ್ಗೆ । ಬುದಧಿಯ ಚಂದ್ರಮನು ॥ ಮದನ ಸನ್ನಿಭರೂಪನೆಂಬರೆಲ್ಲರು ರಿಪು । ಮದಗಜ ಸಿಂಹನೆಂದು ॥ ೧ ॥ ಕೀರ್ತಿಕಾಮಿನಿ ಜಯಕಾಮಿನಿ ಯರು ನಿನ್ನ । ನರ್ತಿಯಿಂ ಸೇವಿಪರು ॥ ನರ್ತಿಸುವಳು ಸಿರಿವೆಣ್ಣು ದೇಶವಿ ಚಕ್ರ । ವರ್ತಿಯಾರೆಣೆ ನಿನಗೆ ॥ ೨ ॥ ಶೃಂಗಾರದೊಳು ವಿಷ್ಣು ಸಂಗರದೊಳು ರುದ್ರ । ಸಂಗನೆಯರಿಗಂಗಜ ॥ ತುಂಗಮಹಿ ಮನೆಂದು ಪಾಡಿ ಪುಣ್ಯವ ಪಡೆ । ವಂಗವ ಬಣ್ಣಿಪುದೆ ॥ ೩ ॥ ಹನೆಂಬೆ ನಾದರೊಂದಪವಾದದಂತೆ ಪ್ರ । ಸೇನಾಖ್ಯ ಕೋಸಲದಿ ॥ ಮಾನಿಸದಿಹ ಸೊಕ್ಕಿ ನಮ್ಮ ಪ್ರಭುತ್ವವ । ಹೀನಸತ್ವನು ನೋಡ ಲು ॥ ೪ ॥ ವಿಕ್ರಮವಂತನು ಸಿಂಹಳೇಶ್ವರನಾದ । ವಿಕ್ರಮಬಾಹು ನಮ್ಮ ॥ ಚಕ್ರಾಧಿಪತ್ಯದೊಳೊಂದುಗೂಡಿದರೆ ಭೂ । ಚಕ್ರ ಕೈ ಸೇರಿ ದಂತೆ ॥ ೫ ॥ ಉರ್ವೀಶನದಕೆಂದ ನಿರ್ವಹಿಸುವುದರಿ । ಗರ್ವದ ಚರ್ವಿಳಿಸಿ ॥ ಸರ್ವರ ಗೆಲ್ದು ನೀ ಸಾರ್ವಭೌಮತ್ವಕೆ । ಪರ್ವಿಸು ಕೀರ್ತಿಯನು ॥ ೬ ॥ ಶಿರವಾಗದರಿಗಳ ಶರಮುಖದಿಂದಲಿ । ಶಿರವ ತರಿದು ಕಪ್ಪವ ॥ ತರುವುದು ಕೀರ್ತಿ ವಿಸ್ತರಿಸೆ ಭೂ ಚಕ್ರದಿ । ಶರ ಣರನುರೆ ಪೊರೆದು ॥ ೭ ॥

॥ ಭಾಮಿನಿ ।

ಎಂದು ಭೂವರನಾಜ್ಞೆಯನು ಯೌ । ಗಂಧರಾಯಣಗೀಯ ಲತ್ಯಾನಂದದಿಂದಲಿ ಮಂತ್ರಿಕಾರ್ಯಾಂತರದಿ ಪೊರಮಡಲು ॥

ಇಂದುಮುಖಿ ತಾನಿತ್ತ ಸುಮಧುರ । ಮಂದಹಾಸವ ಬೀರಿ ಪತಿ ಯೊಡ । ನೆಂದಳಿಂತೊಲಿದೆನ್ನ ಮನದಭಿಲಾಷೆ ಕೇಳೆನುತ ॥ ೧ ॥

ರಾಗ ಕಾಂಭೋಜ ॥ ತ್ರಿವುಡೆತಾಳ ॥

ಲಾಲಿಸು ಪ್ರಾಣಕಾಂತ । ಸದ್ಗುಣವಂತೆ । ಲಾಲಿಸು ಪ್ರಾಣ ಕಾಂತ ॥ ಪಲ್ಲವಿ ॥ ಲಾಲಿಸೆಲೆ ಭೂಪಾಲ ಮೌಳಿ ಸು । ಶೀಲಗುಣ ಗಣಜಾಲಪ್ರೇಮದಿ ॥ ಅ.ಪ ॥ ಕಾಂತ ನಮ್ಮೀ ದೇಶದಿ । ಮೆರೆವ ನಿ । ತಾಂತ ಪ್ರಜಾವರ್ಗದಿ ॥ ಸಂತಸವು ನೆಲೆ ನಿಂತಿಪುದು ನಿಜ । ಸಂತತವು ಕೇ । ಳಿಂತಿದಾದೊಡ । ದಂತರಂಗದ ಚಿಂತೆ ಕಳೆಯೆ ವ । ಸಂತದೊಳಗುತ್ಸವವ ರಚಿಪುದು ॥ ಲಾಲಿಸು ॥ ೧ ॥ ಕಾಂತೆಯರಿಗೆ ಮೋದವೂ । ಉತ್ಸವವ । ಸಂತದೊಳುತ್ಸಾಹವು ॥ ಸ್ವಾಂತದೊಳ ಗತ್ಯಂತ ಹರ್ಷನಿ । ರಂತರವು ಜನ । ಸಂತತಿಗೆ ಗುಣ । ವಂತ ನಡೆಸೆನೆ ಮುಂತೆ ವರ ಭೂ । ಕಾಂತ ಕಾಂತಾಮಣಿಗೆ ನುಡಿದನು ॥ ಲಾಲಿಸು ॥ ೨ ॥ ಕುಂದರದನೆ ಕೇಳೆಲೆ । ಜಾಜೆಯುಮನ । ದಂದ ಪನರಿತೆ ಬಾಲೆ ॥ ಮುಂದೆ ಮುಂದಿನ್ನೇದು ಸಂಭ್ರಮ । ದಿಂದ ಮಧುಮಾಯು ಸಮಯದೊಳ್ ಜನ । ವೃಂದ ನಲಿವಂ ತಪ್ಪು ದುತ್ಸವ । ಮಂದಗಾಮಿನಿ ಮುದದೊಳಿರ್ಪುದು ॥ ಲಾಲಿಸು ॥ ೩॥ ಮದನನೇಳ್ಗೆಯ ಕಾಲವು । ವಸಂತವು ॥ ಮದವೇರುವುದು ಮನ ವು ॥ ಮಧುಪಗಳು ಕುಸುಮದ ಸುಗಂಧೋ । ನ್ಮದದಿ ಸುದತೀ ಜನದ ಮೋಹದ । ಮದಿರೆಯಿಂದುರಿ ಮತ್ತರಾಗಲು । ಮುದವು ಮಧುಮಾಸದ ವಿಲಾಸವು ॥ ಕೇಳೆನ್ನ ಪ್ರಾಣಕಾಂತೆ ॥ ೪ ॥

॥ ವಾರ್ಧಿಕ ॥

ರಾಯನಿಂತಾಸತಿಗೆ ನುಡಿಯುತಿರೆ ಯೌಗಂಧ । ರಾಯಣರು ಮಹಾನ ಮಂತ್ರಿಗಳ್ ಮುಂದೆಂತು । ಪಾಯದಿಂ ಶತ್ರುಗಳ ಗೆಲ್ವುದೆಂದಾಲೋಚಿಸುತ್ತಿರ್ದರೇಕಾಂತದಿ ॥ ಆಯುತದ ಸಮಯಕ್ಕೆ ಬಂದನಾಸಚಿವನ ಸ । ಹಾಯಕಂ ಗೂಢಚರ ಬಾಭ್ರವ್ಯನಲ್ಲಿಗೆ ವಿ । ಧೇಯತನದಿಂ ಮಣಿದು ಪೇಳ್ದ ಮಂತ್ರೀಶಂಗೆ ಚಿತ್ರತರ ವಾರ್ತೆ ಗಳನು ॥ ೧ ॥

ರಾಗ ಮುಖಾರಿ ॥ ಏಕ ತಾಳೆ ॥

ಸಚಿವೇಶ ಲಾಲಿಸೈ ಬಿನ್ನಪವ । ಮಹಾನುಭಾವ । ಸಚಿವೇಶ ಲಾಲಿಸೈ ಬಿನ್ನಪವ ॥ ಪಲ್ಲವಿ ॥ ಸುತ್ರ್ತಮಂತ್ರಣ ದೇಶ ಸುಳಿದು । ಬಂದೆ ವಿಶೇಷ । ವೃತ್ತಾಂತಗಳನೆಲ್ಲ ತಿಳಿದು ॥ ಅತ್ತಲು ಭೂಮಿಯೊಳುತ್ತಮವೆನೆಮೆರೆ । ಯುತ್ತಿಹ ಸಿಂಹಳ । ಪೃಥ್ವಿಪ ವಿಕ್ರಮಪುತ್ರಿಯು ಬಲು ಚೆಲು । ಪೆತ್ತಿಹ ರೂಪವೊ । ಚಿತ್ರಜ ಮೋಹದ ಪುತ್ತಳಿ ಬೊಂಬೆ ॥ ಸಚಿವೇಶ ॥೧॥ ಕುಟಿಲಕುಂತಳೆ ಮೋಹನಾಂಗಿ । ಮಿಂಚುತಿಹುದು । ಚಟುಲ ಕಟಾಕ್ಷದ ಭಂಗಿ ॥ ಧಿಟವಿದು ಕಾಮನ । ಪುಟಚೆಂಡಿನ ಕುಚ । ಕಟಿಕುಟಿ ಸೊಬಗು । ತ್ಕಟ ಮದವೇಳಿಸಿ । ವಿಟಜನಕತಿ ಸಂ । ಕಟವನೆ ವಾರನ । ಪಟವನೆ ಮೆರೆವಳು । ಕಮಲ ಸ್ತನೆಯು ॥ ಸಚಿವೇಶ ॥ ತರುಣಿಯಾಕೆಯು ಹೊಂದಿ ಬಾಳ್ವ । ವೀರನು ಭೂ । ವರನು ಭೂ ಚಕ್ರವ ನಾಳ್ವ ॥ ವರದೈವಜ್ಞರು । ಪರಮ ಜ್ಞಾನದೊ । ಳರಿತಾ ರಮಣಿಯು । ಮೆರೆವ ಭವಿಷ್ಯವ । ನೊರೆದಿಹ ರೀಪರಿ । ಧರೆಗಿದು ಕೌತುಕ । ವೆರಸಿದ ವಾರ್ತೆಯು । ಚರಣದಿ ಬಿನ್ನಹ ॥ ಸಚಿವೇಶ ॥ ೩ ॥

॥ ಭಾಮಿನಿ ॥

ಆಕೆ ರತ್ನಾವಳಿಯು ಪೆಸರಲಿ । ಲೋಕಮೋಹಿನಿಯೆಂದು ನುಡಿಯೆ ವಿ । ವೇಕ ಮತಿಗಳು ಯೋಚಿಸಿದರುದಯನ ನೃಪಾಲನಿಗೆ ॥ ಆ ಕಮಲನೇತ್ರೆಯನು ಹೊಂದಿಸ । ಲೇಕಚಕ್ರಾಧಿಪತಿಯಾಗುವ । ನೇಕೆ ಸಂಶಯವಿನ್ನು ಕಾರ್ಯವ ಸಾಧಿಸುವುದೆನಲು ॥೧॥

ರಾಗ ಸಾಂಗತ್ಯ ॥ ರೂಪಕತಾಳ ॥

ಆದರಿನ್ನಿದಕೊಂದು ಮುಳ್ಳುಂಟು ಕಾರ್ಯವ । ಸಾಧಿಸುವಂಥ ಮಾರ್ಗದಲೀ ॥ ಆ ಧರ್ಮಪತ್ನಿ ವಾಸವದತ್ತೆ ಬಿಡುವಳೆ । ಭೂಧವಗನೆ ರುಮಣ್ವಾನ ॥ ೧ ॥ ರಾಣಿರಾಯರಿಗಿದರರಿವಾಗದಂತತಿ । ಜಾಣತನದಿ ಕಾರ್ಯಗೈದು ॥ ಪಣಾಕ್ಷಿಯನುತರಬೇಕು ಹೊಂದಿಸೆ ಪರಿ । ಣಾಮನೃಪಗೆ ಸೊಗವಹುದು ॥ ೨ ॥ ಅನಿತನಾಲೋಚಿಸಿ ಗುಪ್ತದೋಲೆರ್ವರು । ಘನವಾದೋಲೆಯನೊಂದು ಬರೆದು॥

ಜನಪನ ಮುದ್ರೆಯನಿಕ್ಕಿ ಬಾಭ್ರವ್ಯನ । ಸನಿಹಕೆ ಕರೆದು ಪೇಳಿ
ದನು ॥ ೩ ॥ ಎಲವೊ ನೀ ಸಿಂಹಳಕ್ಕೈದಿ ವಿಕ್ರಮ ಭೂಪ । ನೊಲವು
ಗಾಣುತಲಲ್ಲಿ ಬಳಿಕ ॥ ತಿಳುಹುವುದೊಂದಿಂಥ ಕಪಟ ವಾರ್ತೆಯನು
ಕೌ । ಶಲದಿ ಕಾರ್ಯವ ಸಾಧಿಸುವುದು ॥ ೪ ॥ ಅರಸಿ ವಾಸವದತ್ತೆ
ಯುರಿದು ಹೋಗಿಹಳಂತೆ । ಪುರದೊಳಗಾದ ಕಿಚ್ಚಿನಲಿ ॥ ಅರಸ
ಚಿಂತಿಸುತಿಹನದಕಾಗಿ ಮನದೊಳು । ದೊರೆದೋಲೆಯಿಂದರ ಸೀ
ಯುವುದು ॥ ೫ ॥ ಆ ನಾರೀಮಣಿ ರತ್ನಾವಳಿಯನ್ನು ತರಬೇಕು ।
ಭೂನಾಥನಿಗೆ ಸತಿಯಾಗಿ ॥ ನೀನು ಯತ್ನಿಸಬೇಕು ಪೋಗಲ್ಲಿಗೆಂದು
ಪ್ರ । ಧಾನನು ಸಿರಿಪತ್ರವಿತ್ತ ॥ ೬ ॥

ರಾಗ ಕಾಂಭೋಜ ॥ ಝಂಪೆತಾಳ ॥

ಈ ತೆರದಿ ಬಾಭ್ರವ್ಯನೈದೆ ವಿಕ್ರಮಬಾಹು । ಭೂತಳಾಧಿಪ
ಸಿಂಹಳದಲಿ ॥ ಸಾತಿಶಯದಿಂ ಮೆರೆಯೆ ತಾರುಣ್ಯಕೇರಿರಲು । ಜಾತೆ
ರತ್ನಾವಳಿಯು ಸೊಗದಿ ॥ ೧ ॥ ತರಳೆ ಷೋಡಶ ವರ್ಷಭರಿತಳಾ
ಗಿರೆ ಕಾಮ । ನರಗಿಣಿಯ ತೆರದಿ ಶೋಭಿಸಲು ॥ ಧರಣಿಪತಿ ಚಿಂತಿಸಿ
ದಯೋಗ್ಯವರನನು ಪುತ್ರಿ । ಗರಸಬೇಕೆನುತ ಮಂತ್ರಿಯೊಳು ॥ ೨ ॥
ಕಾಮಿನೀಮಣಿಗೆ ಸರಿಜೋಡಿಯಾಗುವ ಗಂಡು । ಭೂಮಿಯೊಳ
ಗರಸಿ ಸಿಗದಿರಲು ॥ ಭೂಮಿಪತಿ ಚಿಂತೆಯಿಂದಿರಲೊಂದು ದಿನ
ಬಂದ । ನಾ ಮಹಾ ಮಾಂಡವ್ಯ ಮುನಿಪ ॥ ೩ ॥

ರಾಗ ಸೌರಾಷ್ಟ್ರ ॥ ತ್ರಿವುಡೆತಾಳ ॥

ವರಮಹಾಮಾಂಡವ್ಯ ಮುನಿಪನ । ಚರಣ ಸರಸಿಜ ತೊಳೆ
ದು ಬಲು ಸ । ತ್ಕರಿಸಿ ವಂದಿಸಿ ನುಡಿದನಾ ಭೂ । ವರನು ಬಳಿಕ
॥ ೧ ॥ ಎತ್ತಣಿಂದಲಿ ಬಂದುದೆಲೆ ಮುನಿ । ಪೋತ್ತಮನೆ ತವ
ದರ್ಶನದಿ ಮಮ । ಚಿತ್ತ ಪಾವನವಾಯ್ತು ಕ್ಷೇಮವ । ಬಿತ್ತರಿ
ಪುದು ॥ ೨ ॥ ಎನಲು ತಾಪಸ ನುಡಿದ ನಿನ್ನಾ । ನನದ ಸಿರಿ ಪೇಳ
ಕೆ ಕುಂದಿದೆ । ಜನಪ ಚಿಂತೆಯದೇನೆನಲು ನೃಪ । ಮುನಿಗೆ ನುಡಿದ
॥ ೩ ॥ ಏನ ಪೇಳುವೆನೆನ್ನ ಸುತೆ ವರ ಮಾನಿನೀಮಣಿ ಪ್ರಾಯ
ಭರಿತೆ ಸ । ಮಾನ ವರನೋರ್ವನನು ಕಾಣೆನು ಮಾನವರೊಳು
॥ ೪ ॥

॥ ಕಂದ ॥

ಭೂಪನ ನುಡಿಯುಂ ಕೇಳ್ದು । ತಾಪಸನೆಂದಂ ನಿನಗಿದಕೇತಕೆ ಬೆಸನಂ ॥ ರೂಪದಿ ಗುಣದೊಳ್ ಶೌರ್ಯದಾ । ಟೋಪದಿ ಸರಿಯಿಂಗಿ ಲೆನಿಸುವ ವರನೇ ಸಿಗುವಂ ॥ ೧ ॥

ರಾಗ ನವರೋಜು ॥ ಏಕತಾಳ ॥

ಇದಕಿನ್ನೇತಕೆ ಚಿಂತೆ । ಸ । ಮ್ಮದದೊಳ್ ಪ್ರುದುಮುಂತೆ॥ ವಿಧುಕುಲ ವಿಧುನೃಪ । ಮದನನು ತಾ ಬಂ । ದೊದಗುವ ಮದ ಯನ । ನಿದು ನಿಶ್ಚಯವು ॥ ಇದ ॥ ೧ ॥ ರಾಜರ ಕೋಟೀರಮಣಿ। ಉದು । ರಾಜ ಸಮನಾಸುಗುಣಿ ॥ ಆಜನಪತಿಗೀ । ರಾಜೀವಾಕ್ಷಿ ಯು । ರಾಜಿಪ ಜೊತೆ ಸುಖ । ಭಾಜನವದರಿಂ ॥ ಇದ ॥ ೨ ॥ ಅವಧರಿಸು ಮುನಿವರನೆ ॥ ನಿಜ । ತವವಚನ ಗುಣಯುತನೆ ॥ ಹವಣರಿಯಲು ಕೇ । ಳವನು ವಿವಾಹಿತ । ಬವಣೆಯಿಂದಲ್ಲದೆ । ಕುವರಿಗೆ ಸವುನೆ ॥ ಅವಧರಿಸು ॥ ೩ ॥ ಭೂಧವನ ಕಾದಲೆಯು । ಮವು । ಸೋದರಿಯು ಪ್ರಿಯಸುತೆಯು ॥ ಮೇದಿನಿಗಿದು ಹಿತ । ವಾದುದೆ ಸವತಿಯು । ನಾದಿಸಿಯೆನೆ ಮುನಿ । ವಾದಿಸಿ ನುಡಿದ ॥ ಅವಧರಿಸು ॥ ೪ ॥

॥ ಭಾಮಿನಿ ॥

ಇದಕೆ ಚಿಂತೆಯು ನಿನಗೆ ಲೋಕದಿ । ವಿಧಿಯ ಮಹಿಮೆಯ ನಾರು ಬಲ್ಲರು । ಸುದತಿ ಮಣಿತಾ ಸೇರುವಳು ನಿಜ ನೃಪ ಶಿರೋ ಮಣಿಗೆ ॥ ಸದಮಳನು ಪೇಳ್ದಿಂತು ಪೋಗಲು । ಮುಂದದೊಳಲ್ಲಿಗೆ ಬಂದು ಭೂಪನ । ಪದಕೆರಗಿ ಬಾಭ್ರುವ್ಯ ನುಡಿದನು ಪಾರ್ಥಗಳ ವಿಂತು ॥ ೧ ॥

ರಾಗ ಕಾಂಭೋಜ ॥ ಅಷ್ಟತಾಳ ॥

ಚಿತ್ತವಿಸೆಲೆ ನೃಪಮಣಿಯೆ । ಕೇಳು । ವೃತ್ತಾಂತವಿದ ಗುಣ ಖನಿಯೆ ॥ ಅತ್ತ ವತ್ಸದಿ ನಮ್ಮ । ಪೃಥ್ವೀಶ ದುಃಖದಿಂ । ತುತ್ತು ಗೊಂಡಿಹ ಪರಿಯ ಪೇಳಲು । ಚಿತ್ತ ತಲ್ಲಣಿಸುತ್ತಲಿಹುದೈ ॥ ೧ ॥ ಅಂತಃಪುರದ ಕಿಚ್ಚಿನಲ್ಲೀ । ನೃಪ । ಕಾಂತೆಯಾ ಮತಿಯಾದಳಲ್ಲಿ ॥

ಎಂತು ಪೇಳುವೆನೊ ಭೂ । ಕಾಂತನು ಕಳುಹಿದ । ಚಿಂತೆಯನು ತಾ ತಡೆಯಲಾರದೆ । ಪಂಥಗೆಟ್ಟಿಹನೇನನುಸಿರ್ವೆನು ॥ ಚಿತ್ತ ॥ ೨ ॥

॥ ಭಾಮಿನಿ ॥

ದೂತನೆಂದುದ ಕೇಳ್ದು ಮರುಗಿದ । ಭೂತಳಾಧಿಪ ಹಾ ಮಗಳೆ ಹಾ । ಹಾ ತಳೋದರಿ ಮಣಿಯೆ ನಿನಗೀ ಕ್ರೂರದ ವಿಧಿಯಾಯ್ತು ॥ ಕಾತರದೊಳಿಂತೆನಲು ಚರತಾ । ನೋಡು ಪತ್ರವನೀಯಲಂತದ । ನಾತುರದಿ ಭೂಪಾಲ ತೆಗೆದೋದಿಸಿದ ಮಂತ್ರಿಯಲಿ ॥ ೧ ॥

ರಾಗ ಕಾಂಭೋಜ ॥ ಝಂಪೆತಾಳ ॥

ಶ್ರೀಮತ್ಸಮಸ್ತ ಸದ್ಗುಣಭರಿತ ಸಿಂಹಳದ । ಭೂಮಿಪತಿ ವಿಕ್ರಮಾಂಕನಿಗೆ ॥ ಪ್ರೇಮದಿಂ ವತ್ಸಾಧಿಪತಿಯುದಯನಂ ಬರೆದ। ತಾ ಮನದೊಳೊಲಿದು ಪತ್ರವನು ॥ ೧ ॥ ಸುಂದರೀಮಣಿಯು ತವನಂದನೆಯು ಮನವೊಪ್ಪಿ । ಹೊಂದಲಿಕೆ ಬಯಕೆಯಿಹುದೆನಗೆ ॥ ಕುಂದರದನೆಯನೆನಗೆ ವಧುವಾಗಿ ಮಾಡುವುದು । ಚಂದದಿಂದೊಪ್ಪಿಕಳುಹುವುದು ॥೨॥ ಸಚಿವನೋಲೆಯ ವಚಿಸೆ ಹರ್ಷದಿಂದೊಪ್ಪಿಸಲೆ । ಖಚಿತಗೈದನು ಸುತೆಯ ಕೊಡಲು ॥ ಉಚಿತವಚನವ ಪೇಳಲೆಂದು ಕರೆಸಿದ ವೃತ್ತ । ಕುಚೆಯು ರತ್ನಾವಳಿಯ ಜವದಿ ॥ ೩ ॥

ರಾಗ ನೀಲಾಂಬರಿ ॥ ತ್ರಿವುಡೆತಾಳ ॥

ಸಿಂಧುರಯಾನೆ ಬಾಲೆ । ಮೋಹದ ನೃಪ। ನಂದನೆ ಸುಗುಣಶೀಲೆ ॥ ಬಂಧುರ ಶೃಂಗಾರ । ದಿಂದ ಶೋಭಿಸಿ ಸಖಿ । ವೃಂದವನೊಡಗೂಡುತ ॥ ಬಂದಳು ನಗುತ ॥ ೧ ॥ ಪಿತನ ಪಾದಕೆ ನಮಿಸಿ। ಬಾಲೆಯು ಕರೆದ । ಕಿತವ ಕೇಳ್ದಳು ಸ್ಮರಿಸಿ ॥ ಅತುಲ ಪ್ರೇಮದೊಳಾತ । ಸುತೆಯನಪ್ಪುತ ಪೇಳ್ದ । ಹಿತವಚನಗಳನೆಲ್ಲಾ ॥ ಕೇಳಮ್ಮ ಸೊಲ್ಲ ॥ ೨ ॥ ತುಂಬುಜವ್ವನೆಯು ನೀನು । ಕಾಂತನು ಕೌ। ಶಾಂಬೀಶ ನಿನಗೆಂಬೆನು ॥ ತುಂಬ ಪ್ರೇಮದಿ ನಿನ್ನ । ಕಾಂಬನಾತನು ಮುಂದಾ । ಕುಂಭಿನಿಪತಿಯ ಕೂಡಿ ॥ ಬಾಳ್ವುದು ಮೋಡಿ ॥ ೩ ॥

ರಾಗ ಮಧ್ಯಮಾವತಿ ॥ ಏಕತಾಳ ॥

ಪತಿಯ ಸೇವಿಸು ಪತಿವ್ರತೆಯಾಗಿ ಮಗಳೆ ॥ ಕ್ಷಿತಿಯಲ್ಲ ಬಲು ಯೋಗ್ಯ ಸತಿಯೆಂದು ಪೊಗಳೆ ॥ ಪತಿಯ ॥ ಪಲ್ಲವಿ ॥ ಸವತಿಯರಿಗೆ

ಪ್ರಿಯು ಕಳದಿಯೆಂದೆನಿಸಿ ನೀ । ಜ್ಞವು ಪಿರಿಯರ ಸೇವೆಯಲಿ ಮನವಿ
ರಿಸು ॥ ತವರಿನ ಪತಿಗೃಹದತಿಶಯ ಕೀರ್ತಿಯು । ಭುವನಕೆ ನವಮಣಿ
ದೀಪವೆಂದೆನಿಸು ॥ ಪತಿಯು ॥ ೧ ॥ ಶುಭ ಮುಹೂರ್ತದಿ ನಾವು
ವತ್ಸದೇಶಕೆ ಪೋಗಿ । ವಿಭವದಿಂ ಮದುವೆಗೈವುದು ಭಾಗ್ಯವೆಸೆಯೆ॥
ಇಭಗಮನೆಯು ಮನವೊಲಿದಂಗುತ ಸ್ಮರ । ನಿಭರೂಪನುದಯನ
ನೊಳು ಮನ ಬೆಸೆಯೆ ॥ ಪತಿಯು ॥ ೨ ॥

॥ ವಾರ್ಧಿಕ ॥

ಸುತೆಗೆ ಹಿತವಚನವಂ ಪೇಳ್ದು ವಿಕ್ರಮ ಭೂಪ । ನತಿಶಯ
ದೊಳಾಕೆಯಂ ಸಿಂಗರಿಸಿ ವಿಬುಧ ಜನ । ತತಿಯು ಸೇಸೆಯನಿಕ್ಕೆ
ಶುಭದಿನದಿ ಶೋಭಿಸುವ ಮಂತ್ರಿ ಪರಿವಾರ ಸಹಿತ ॥ ಅತುಲ
ಸಂಭ್ರಮದಿಂದೆ ವರವತ್ಸದೇಶಾಧಿ । ಪತಿಯೆಡೆಗೆ ಪೊರಟನದನೇ
ನೆಂಬೆ ಮುಂಬರಿಯೆ । ಪಥವಿ ಕಂಡುದು ರತ್ನದಾಗರಂ ಸಾಗರಂ
ಸಂತೋಷವಿಘೋರ್ಷದಿ ॥ ೧ ॥

॥ ಭಾಮಿನಿ ॥

ಅಂಬುನಿಧಿಯುತ್ತರಿಸಲತಿ ಸಂ । ರಂಭದಲಿ ಮಾತಂಗನೆಂ
ಬವ । ನಂಬಿಗನಿಗಪ್ಪಣೆಯನೀಯಲು ಬಂದು ಮಾತಂಗ ॥ ಕುಂಬಿ
ಡುತ ನೌಕೆಯೊಳು ಜನನಿಕ । ರುಂಬವನು ಕುಳ್ಳಿರಿಸಿ ರಂಜಿಸಿ ।
ಮುಂಬರಿಸಿ ನೌಕೆಯನು ನೂಂಕಿದ ಕಡಲನಡುವಿನಲಿ ॥ ೧ ॥

ರಾಗ ಕೇದಾರಗೌಳ ॥ ಝಂಪೆತಾಳ ॥

ಸಾಗುತಿರೆ ನೌಕೆ ಭರದಿ । ಮುಂಬರಿದು । ವೇಗದಿಂ ಜಲ
ಮಧ್ಯದಿ ॥ ಸಾಗರವು ಕ್ಷೋಭೆಗೊಂಡು । ತೆರೆಯೆದ್ದು । ತಾಗಿ
ದುದು ಕೋಪಗೊಂಡು ॥ ೧ ॥ ಭುಗಿಲ್ಲೆಂಬ ಗಾಳಿ ಜವದಿ ।
ಅಲ್ಲೋಲ । ಕಲ್ಲೋಲವಾಗ ಜಲಧಿ ॥ ಎಲ್ಲರತಿಭಯದಿ ಮರುಗಿ ।
ಸುಳಿಸುಳಿದು । ತಲ್ಲಣಿಸೆ ನೌಕೆ ತಿರುಗಿ ॥ ೨ ॥ ಜಡಧಿಯೊಳು ನೌಕೆ
ಮುಳುಗೆ । ಜನರೆಲ್ಲ । ದಡಗಿದರು ನೀರಿನೊಳಗೆ ॥ ಕಡೆದರತ್ತಿತ್ತ
ತೆರೆಗೆ । ಆರಾರು । ತಡಿಸೇರ್ದರೇನೊ ಕೊನೆಗೆ ॥ ೩ ॥

॥ ಭಾಮಿನಿ ॥

ಬಳಿಕ ರಾಜಕುಮಾರಿ ರತ್ನಾ । ವಳಿಯು ಜಲದೊಳು ಮು

ಳಂಗುತೇಳುತ ॥ ಉಳಿದ ಶಿರುಖಂಡವನು ಪಿಡಿಯುತ ತೀರಕ್ಕೆ ತರುತ ॥ ಒಳಗೊಳಗೆ ತಳವಳದಿ ಜನಗಳ । ಒಳಗ ಕಾಣದೆ ತನ್ನ ಭಾಗ್ಯವ । ಹಳಿದು ಮುಂದಣ ಮಾರ್ಗ ಕಾಣದೆ ರೋದಿಸಿದ ಳಿಂತು ॥ ೧ ॥

ರಾಗ ಆನಂದಭೈರವಿ ॥ ಅಷ್ಟತಾಳ ॥

ಎಲ್ಲಿ ಪೊರಟಿನೆಲ್ಲಿ ಬಂದೆ । ನಿಲ್ಲಿಗೇಕೆ ವಿಧಿಯೆ ತಂದೆ । ನಲ್ಲ ನೆಡೆಗೆ ಪೋಪುದೆಂತು । ಬಲ್ಲರಾರೊ ಭಾಗ್ಯವಿಂತು ॥ ಎಲ್ಲಿ ॥ ೧ ॥ ಅಳಿದುದೇನೊ ಸಖಿಸಮೂಹ । ತಿಳಿಯೆ ನೆಲ್ಲಿ ಜನಕನಾಹ । ಉಳಿದು ನಾನು ದೈವ ಕರುಣೆ। ಯೊಳಗಿದೇಕಿದೊಂದು ಬವಣೆ ॥ ಎಲ್ಲಿ ॥ ೨ ॥

ರಾಗ ತೋಡಿ ॥ ಅಷ್ಟತಾಳ ॥

ಹಿತರಾರೋ । ಎನಗೆ । ಗತಿಯಾರೊ ॥ ಪಲ್ಲವಿ ॥ ಹಿತರಾರೊ ಕಾಣೆನೊಬ್ಬರ ಸನಿಹದಲಿ ॥ ಪಥವ ಕಾಣೆನು ಮುಂದೆ ಕವಿದ ಶೋಕದಲಿ ॥ ಅನು.ಪಲ್ಲವಿ ॥ ಪುಟ್ಟಿದೆ ಸಿಂಹಳ ರಾಜಾಲಯದಲೀ॥ ಕೊಟ್ಟರೆನ್ನನು ವತ್ಸಾಧಿಪಗೆ ಪ್ರೀತಿಯಲಿ ॥ ತಟ್ಟಿದುದಾವಗ್ರಹದ ಸೋಂಕು ವಿಧಿಯೆ । ನಿಟ್ಟಿಸು ದಯದೊಳು ಹೇ ಪುಣ್ಯ ವಿಧಿಯೇ ॥ ಹಿತ ॥ ೧ ॥ ಆವ ಪಾಪದ ಫಲವಿಂದು ಸೇರಿದುದು । ಕಾವವ ರಾರುಂಟು ಕಡಲು ನೂಕಿದುದು ॥ ದೇವನ ಕರುಣೆಯು ಕಿರಣ ಮಾಜಿದುದೆ । ಭೂವಲಯದಿ ಪೆಣ್ಣ ಬಾಳ್ವೆ ಸಹಿಪುದೆ ॥ ಹಿತ ರಾರೊ ॥ ೨ ॥

॥ ವಾರ್ಧಿಕ ॥

ಮರುಗಿದಳು ಹಾಯೆಂದು ರತ್ನಾವಳಿಯು ಬಳಿಕ । ಕೊರಗಿ ದಳು ನಡೆನಡೆದು ಬೇಸತ್ತು ಹಸಿವಿನಿಂ । ಸೊರಗಿದಳು ಬಾಯಾರಿ ಬೆಂದು ಬಿಸಿಲಿನ ಜಳಕೆ ಬಸವಳಿದು ಮೈಗುಂದುತ ॥ ಮರನಡಿಯ ಸಾರ್ದುಕುಳ್ಳಿರ್ದು ಕರುಣಾರಸದ । ಹೊರಳಿಯಂತಿರಲಲ್ಲಿಗೋರ್ವ ಪಾಂಥಂ ಬಂದ । ನುರೆಸುಗುಣ ಶೋಭಿತಂ ಧನದತ್ತನೆಂಬವಂ ರತ್ನಕಾರಂ ಪಥದಲಿ ॥ ೧ ॥

ರಾಗ ಸಾರಂಗಕ್ಕ ॥ ರೂಪಕತಾಳ ॥

ಧನದತ್ತ ಕುಳಿತಿರ್ದ ವನಿತೆಯು ಕಾಣುತ್ತ । ಮನದೊಳಚ್ಚರಿ ಗೊಂಡನಂದು ॥ ವನಜಾಂಬಕಿಯುಂ ಕುಲವತಿಯಂತೆ ತೋರ್ಪಳು । ನೆನೆದಿಂತು ನುಡಿಸಿದನವಳ ॥ ೧ ॥ ಆರು ನೀನೆಲೆ ಬಾಲೆ ಬಳಲಿರ್ಪೆ ಯೇಕೆಲೆ । ದಾರಿ ತಪ್ಪಿದೆಯೇನೊ ಪೇಳ ॥ ಚಾರುವದನವೇಕೆ ಕುಂದಿದೆ ಹಿತರ ವಿಚಾರವೇನೆನೆ ಪೇಳ್ದಳವಳು ॥ ೨ ॥

ರಾಗ ಮಧ್ಯಮಾವತಿ ॥ ತ್ರಿವುಡೆತಾಳ ॥

ಯಾರು ಹಿತವರುಂ ಕಾಣೆ ಲೋಕದಿ । ಶ್ರೀರಮಾವರನೋರ್ವನೆ । ದಾರಿಕಾರನೆ ಪಕೆ ಎನ್ನ ವಿ । ಚಾರಿಸುವೆ ನೀ ಸುಮ್ಮನೆ ॥ ಗತಿವಿಹೀನೆ ॥ ೧ ॥

ರಾಗ ಕೇದಾರಗೌಳ ॥ ಅಷ್ಟತಾಳ ॥

ಪಿತನಾರು ಪತಿಯಾರು ದೇಶವಾವುದು ನಿನ್ನ । ಗತಿಯೆತ್ತ ಸುಂದರಿಯೇ ॥ ರತುನಹಾರವಿದೊಂದು ನಿನ್ನಯ ಕೊರಳೆನೊ । ಳತಿ ಶೋಭಿಸುವುದೇನಿದು ॥ ೧ ॥

ರಾಗ ಮಧ್ಯಮಾವತಿ ॥ ತ್ರಿವುಡೆತಾಳ ॥

ತಿಳಿಯೆ ನಾನದನೆಲ್ಲ ನೀವೇ । ತಿಳಿದು ಮಾಡುವುದೇವನು ॥ ಬಳಲಿರುವೆನ್ನೆ ನಾನನಾಥೆಯುಂ । ತೊಳಲುತಿರುವೆನು ತಿರೆಯನು ॥ ಪಾಂಥ ಕೇಳತಿ ॥ ೧ ॥

ರಾಗ ಕೇದಾರಗೌಳ ॥ ಅಷ್ಟತಾಳ ॥

ಕೊರಳೊಳು ಹೊಳೆಯುವ ರತ್ನಹಾರವ ಕಂಡು । ಪರಿಪರಿ ಯೊಳು ಚಿಂತಿಸಿ॥ ತರುಣಿಯುತ್ತಮಳೆಂದು ಹಿತದಿಂದ ಕೌಶಾಂಬಿ। ಪುರಕೊಯ್ವೆನೆಂದೆನುತ ॥೧॥ ತರುಣಿಯೋರ್ವಳೆ ದಾರಿಯಲಿ ಕುಳಿತಿ ರ್ಪುದು । ಧರಣಿಯು ನೀತಿಯಲ್ಲ ॥ ಬರಿದೆ ಜನರು ಬಾಯೊಳಾಡಿ ಕೊಂಬರು ದೇವ । ನರಸಿಯಾದರುಭಯವು ॥ ೨ ॥ ಸುಂದರಿಮಣಿ ನೀನು ನಂಬುವುದೆನ್ನನು । ತಂದೆಯ ತೆರದಿ ನಿನ್ನ ॥ ಕುಂದಾಗದೆ ನ್ನೊಂದಿಗೈತರೆ ಭಯವಿಲ್ಲ । ಬಂದರೆ ಕರೆದೊಯ್ವೆನು ॥ ೩ ॥

ರಾಗ ಮಧ್ಯಮಾವತಿ ॥ ತ್ರಿವುಡೆತಾಳ ॥

ಮತ್ತೆ ನುಡಿದಳು ನೀನು ಪೋಗುವ । ಪತ್ತನವು ತಾನಾವುದು ॥ ಹತ್ತಿರವೊ ಪೇಳೆಂದೊಡಾ ಧನ । ದತ್ತ ನುಡಿದನು ಕೇಳ್ವುದು ॥ ವತ್ಸಕೆಂದು ॥ ೧ ॥

ರಾಗ ಕೇದಾರಗೌಳ ॥ ಅಷ್ಟತಾಳ ॥

ಪೋಗುವೆ ಕೌಶಾಂಬಿನಗರಕೆ ನಿನಗಲ್ಲಿ। ಆಗದಿರದು ಸುಖವು ॥ ಆ ಗಣ್ಯ ಭೂಪನುದಯನನ ದೇಶವು । ನೀಗು ನೀ ಚಿಂತೆಯನು ॥ ೧ ॥ ನುಡಿದಿಂತು ಧನದತ್ತ ಜಡಜಾಂಬಕಿಯನು ತ ॥ ನ್ನೊಡನೆ ಕರೆದುಕೊಳ್ಳುತ ॥ ನಡೆದು ಕೌಶಾಂಬಿಯ ಸಚಿವನಾಲಯದೊಳು । ಪೊಡಮಡುತಿಂತೆಂದನು ॥ ೨ ॥

॥ ವಾರ್ಧಿಕ ॥

ಈಕೆ ಸಿಕ್ಕಿದಳೆನಗೆ ಸಾಗರದ ತಡಿಯಲ್ಲಿ। ನಾಕ ವನಿತೆಯು ತೆರದಿ ಶೋಭಿಪಳು ಮುಂದಿವಳ । ಸಾಕುವುದು ನೀವೆಂದು ಯೌಗಂಧರಾಯಣನ ವಶದೊಳಿತ್ತವನೈದಲು ॥ ಆ ಕಾಮಿನೀಮಣಿಯು ಸೊಬಗ ಕಾಣುತ ಸಚಿವ । ನೇಕೆ ಚಿಂತಿಪೆ ನಿನ್ನ ಪಿತನಾರು ಹಿತರಾರು । ಶೋಕವೇನೆನಲೆಂದು ಪೇಳಿದಳು ಮೃದು ಮಧುರ ವಚನದಲಿ ರತ್ನಾವಳಿ ॥ ೧ ॥

ರಾಗ ಸೌರಾಷ್ಟ್ರ ॥ ತ್ರಿವುಡೆತಾಳ ॥

ಮೆರೆವ ಸಿಂಹಳದರಸ ಪಿತನಹ। ನರಿಯೆಯಾ ರತ್ನಾವಳಿಯು ನಾ । ವರಿಸಿದೆನು ವತ್ಸಾಧಿಪನ ನಿಜ । ಹಿರಿಯರೆನಲು ॥ ೧॥ ಹರಸಿ ಪಿತ ಕರೆದೊಯ್ಯಲಿಲ್ಲಿಗೆ । ಬರಲು ಬಲು ಪರಿವಾರ ಸಹಿತದಿ । ಶರಧಿಯೊಳು ನೌಕೆಯದು ಕೆಡೆಯಿತು । ಭರದಿ ಬಳಿಕ ॥ ೨ ॥ ಜನಕನಾವೆಡೆಗಾದನೋ ಮಹ । ವನಧಿ ನುಂಗಿತೊ ಮೇಲಕೇಳುತ । ನೆನೆಯುವನೊ ಚಿಂತಿಸುತಲೆನ್ನನು । ಮನದಿ ಮರುಗಿ ॥ ೩ ॥ ಎಲ್ಲಿ ಸಖಿಜನ ವೃಂದವೋ ಮ । ತ್ತೆಲ್ಲಿ ಪರಿಜನ ವಿಸರವೋ ನಾ । ನೆಲ್ಲಿಯೋ ಶ್ರೀಹರಿಯ ಕರುಣದೊ । ಳಿಲ್ಲಿ ಬಂದೆ ॥ ೪ ॥ ಸಾದರದಿ ಮಮ

ಜೀವಿತೇಶನ । ಪಾದ ಪದ್ಮದೊಳೊಪ್ಪಿಸೈ ಮುಂ । ದಾದುದಾಗಲಿ ಎನಲು ಸಚಿವನು । ಮೋದಗೊಂಡ ॥ ೫ ॥

॥ ಕಂದ ॥

ನುಡಿದಂ ಸಚಿವಂ ಕೇಳೆಲೆ । ಜಡಜಾಂಬಕಿಯೇ ಬಿಡು ಭಯಮಂ ನಾನೆಂದೋಲ್ ॥ ನಡೆಯುಲು ಹಿತವಿನಗಪ್ಪುದು । ದೃಢಮಿದು ಪ್ರಿಯನಂ ಪಡೆಯುವೆ ಪೊಡವಿಪನವನಂ ॥ ೧ ॥

ರಾಗ ಕಾಫಿ ॥ ಅಷ್ಟತಾಳ ॥

ಸತಿಶಿರೋಮಣಿ ಕೇಳು ಮುನ್ನ । ನಮ್ಮ । ಕ್ಷಿತಿಪಗೆ ಹೊಂದಿಸೆ ನಿನ್ನ ॥ ಚತುರತೆಯಲಿ ಗೈದೆ । ಹಿತದೊಳೀ ಕಾರ್ಯವ । ನತಿಶಯವದು ವಿಧಿ । ಗತಿಯ ಬಲ್ಲವರಾರು ॥ ಸತಿ ॥ ೧ ॥ ವಸುಮತಿಪತಿಯಿದನರಿಯ । ನಾ । ವೆಸಗುವೆನದಕೊಂದುಪಾಯ ॥ ಹಸನದಿ ರಾಣಿ ಕೋ । ಪಿಸದಂತೆ ನಿನ್ನ ಹೊಂ । ದಿಸುವೆನು ಭೂಪಗೆ । ಬಿಸಜಾಕ್ಷಿ ಕೇಳಮ್ಮ ॥ ೨ ॥ ದಾಸಿಯಂತಿರು ನೀನು ಕ್ರಮದಿ । ರಾಣಿ । ವಾಸವದತ್ತೆಯ ಕೆಲದಿ । ನೀ ಸಾಗರಿಕೆಯೆಂದು । ಭಾಸುರ ಪೆಸರಿಂದ । ಲೇಸಿನೊಳಿರಲು ವಿ । ಶ್ವಾಸದಿ ಶುಭವಕ್ಕು ॥ ೩ ॥

॥ ವಾರ್ಧಿಕ ॥

ಸಾಗರಿಕೆಯೆಂದು ರತ್ನಾವಳಿಗೆ ಪೆಸರಿಟ್ಟು । ಬೇಗದಿಂದ್ಯೆ ತಂದು ರಾಣಿಗೊಪ್ಪಿಸಿ ಧಾತ್ರಿ । ಯಾಗಿ ನೇಮಿಸಿ ಮಂತ್ರಿ ಪೋಗೆ ತನ್ನಾಲಯಕೆ ರಾಣಿ ವಾಸವದತ್ತೆಯು ॥ ನಾಗವೇಣಿಯ ರೂಪದೆರಕಮಂ ಸೌಭಾಗ್ಯ । ಯೋಗೀಕ್ಷಣಗಳಿಂ ಕಂಡು ಬೇಗಿಂ ಮನೋ । ರಾಗದಿಂ ನುಡಿಸಿದಳು ದಾಸಿ ಸಾಗರಿಕೆಯಂ ರೂಪಮತ್ಸರದೊಳಿಂತು ॥ ೧ ॥

ರಾಗ ಮೋಹನ ॥ ಅಷ್ಟತಾಳ ॥

ಕಾಮಿನಿಮಣಿ ಯಾರೆಲೆ । ನೋಡಲು ನೀನು । ಸಾಮಾನ್ಯಳಲ್ಲ ಬಾಲೆ ॥ ಕೋಮಲ ಕಾಯೆ ನಿ । ಸ್ಸೀಮ ಸುಂದರ ರೂಪೆ । ಕಾಮನರಸಿಯಂತಿಹೆ ॥ ಕಾಮಿನಿ ॥ ೧ ॥ ದೇವಿ ನಾ ಗತಿಹೀನೆಯು ।

ಎಂದಿಗು ನಿನ್ನ ॥ ಸೇವಕಿ ಸಿಂಹಳಿಯು ॥ ನಾವೆಯೊಳೈತರ । ಲಾವನಧಿಗೆ ಬೀಳೆ । ದೇವನೆ ದಯದಿ ಕಾಯ್ದ ॥ ದೇವಿ ॥ ೨ ॥ ಗತಿ ಸುಸಂಗತೆಯು । ಸೇರುತ ಮಾಡು । ನಿಳಯದೊಳಗೆ ಸೇವೆಯು ॥ ಸುಳಿಯದಿರರಸನ । ಬಳಿಯೊಳೆಚ್ಚರವೆಂದು । ತಿಳುಹುತ ಕಳುಹಿದಳು ॥ ಕಾಮಿನಿ ॥ ೩ ॥

ರಾಗ ಸೌರಾಷ್ಟ್ರ ॥ ತ್ರಿವುಡೆತಾಳ ॥

ಬಳಿಕ ವಾಸವದತ್ತೆ ಮನದೊಳ । ಗೊಳಗೆ ಕಳವಳಗೊಂಡಳರಸನು । ನಳಿನನೇತ್ರೆಯು ಮೋಹವ್ಯೂಹದಿ । ಸುಳಿವನೆನುತ ॥ ೧ ॥ ಚಳದಳಿಕೆ ಭೂಪಾಲಕನ ಕಂ । ಗಳಿಗೆ ಬೀಳದ ತೆರದಿ ಸಂಶಯ । ದಳುಕಿನಿಂದೆಚ್ಚರದೊಳಿರೆ ಭಯ । ಗೊಳುತ ರಾಣಿ ॥ ೨ ॥

॥ ವಾರ್ಧಿಕ ॥

ಇತ್ತ ವಿಕ್ರಮನೃಪಂ ಜಡಧಿಯೊಳ್ ತೆರೆಹೊಡೆಯೆ । ಸುತ್ತುತ್ತ ಸುಳಿಯುತ್ತ ತೇಕುತ್ತಲೀಸುತ್ತ ॥ ಕತ್ತರಿಸಿ ಮೇಲೆದ್ದು ಜಸವಳಿದು ಬಿಸುಸುಯ್ದು ತನ್ನ ದೇಶದ ತೀರದಿ ॥ ಮತ್ತೆ ಪ್ರಿಯ ಜಾತೆಯುಂ ಪರಿಜನವ್ರಾತಮಂ । ಚಿತ್ತದೊಳ್ ನೆನೆದು ಕಾಣದೆ ದುಃಖಮೊತ್ತರಿಸೆ ॥ ಕತ್ತಲೊಳ್ ಪಥಗೆಟ್ಟನಾಥನಂದದಿ ಮನದಿ ಮರುಗಿದಂ ದುಗುಡದಿಂದ ॥ ೧ ॥

॥ ರಾಗ ನವರೋಜು ॥ ಆದಿತಾಳ ॥

ಹಾ ವಿಧಿಯೇ ಗುಣನಿಧಿಯೇ। ಈ ವಿಧಿ ನಿನ್ನಯ ವಿಧಿಯೇ॥ ಆವುದೊ ಜನ್ಮದ ಪಾಪ । ಆವುದೊ ದೈವದ ಕೋಪ ॥ಹಾವಿಧಿ॥ ॥ ೧ ॥ ಉಳಿದಿಹಳೇ ಪ್ರಿಯಸುತೆಯು । ಅಳಿದುದೊ ಹಾ ಪರಿಜನವು ॥ ತಿಳಿಯದ ಬಾಲಕಿಗಿಂತು । ಅಳಲಾಯ್ತೇ ಬದುಕೇತು ॥ ಹಾ ವಿಧಿ ॥ ೨ ॥

ರಾಗ ಸಾಂಗತ್ಯ ॥ ರೂಪಕ ತಾಳ ॥

ಮುದ್ದಿನ ಮಗಳೆ ನಾನೆದ್ದು ಬಂದಿಹೆನಿಲ್ಲಿ । ಸದ್ದಿಲ್ಲದೇಕಡಗಿರುವೆ ॥ ಅದ್ದಿದೆ ನಿನ್ನ ಸಮುದ್ರದೊಳೆಂದತಿ । ಕ್ರುದ್ಧಳಾದೆಯು

ಪಿತನೊಡನೆ ॥ ೧ ॥ ಮದುವೆಗೈಯುವೆನೆಂದು ಕರೆತಂದು ನಿನ್ನಂ
ಬು । ವಿಧಿಯಲ್ಲಿ ಬಲಿಗೊಟ್ಟೆ ಸಕಟ ॥ ಸುದತಿ ನೀನಿರದೆನ್ನ ಬಾಳುವೆ
ಕತ್ತಲು । ಉದಧಿ ನೀನೇಕೆನ್ನ ತೊರೆದೆ ॥ ೨ ॥ ವರುಣನೀ ಕಠಿಣನು
ಹಿಂದೆ ರಾಮನ ಕೋಪ । ದುರುಬೆಗ ತುತ್ತಾದೆ ಬಳಿಕ ॥ ಪರಶು
ಧರನು ನಿನ್ನನಟ್ಟಿದನೆಂದರೆ । ದುರುಳನಲ್ಲವೆ ನೀನು ಗುಣದಿ ॥ ೩ ॥
ದುಷ್ಟ ಜಂತುಗಳಿಗಾಶ್ರಯದಾತ ನಿನ್ನಲ್ಲಿ । ತುಷ್ಟಿಗೈಯುವ
ಗುಣವಿಲ್ಲ ॥ ಕಷ್ಟವೀಯುವ ನಿನ್ನ ಜಡಗುಣಗಳನೆಲ್ಲ । ವೆಷ್ಟು ನಾ
ಪೊಗಳಲು ವ್ಯರ್ಥ ॥ ೪ ॥ ಚಿಂತೆಯೇಕಿನ್ನೆಂದು ಸ್ವಾಂತದಿ ಧೈರ್ಯಗ
ವ । ನಾಂತು ಬಂದನು ನಿಜ ಪುರಕೆ ॥ ಮಂತ್ರಿಯು ಕರೆದು ಪೇಳಿದ
ನೆಲ್ಲ ನಡೆದುದ । ನಿಂತು ಯೋಚಿಸಿ ಬಳಿಕಂದ ॥ ೫ ॥

ರಾಗ ಕಾಂಭೋಜ ॥ ಝಂಪೆತಾಳ ॥

ಕೇಳಯ್ಯ ಮಂತ್ರಿವರ ಪ್ರಿಯಸುತೆಯನುಳಿದೆಂತು । ಬಾಳು
ವೆನು ಲೋಕದಲಿ ಜರಿದೆ ॥ ತಾಳಲಾರೆನು ದುಃಖವದರಿಂದಲರಸು
ವುದು । ಬಾಲಕಿಯು ಜಗದೆಡೆಯೊಳೆಲ್ಲ ॥ ೧ ॥ ವಸುಮತೀಪತಿಗೆಂದ
ತಲೆವಾಗಿ ಮಂತ್ರಿವರ । ವಸುಭೂತಿ ಬೆಸನವೇಕಿದಕೆ ॥ ಬಿಸಜಾಕ್ಷಿ
ರತ್ನಾವಳೀದೇವಿಯನ್ನೆಂಟು । ದೆಸೆಯೊಳಿದ್ದರು ಹುಡುಕಿ ತಹೆನು
॥ ೨ ॥ ಆವ ದೇಶದೊಳಿದ್ದರಾವ ಕಡಲಿಗೆ ಬಿದ್ದ । ರಾವ ದ್ವೀಪ
ದಲಿ ಸೇರಿರಲು ॥ ಆವ ದುರುಳರ ವಶದೊಳಿರಲು ತಹೆನೆಂದೆನಲು ।
ಭೂವರನು ಕೊಟ್ಟನಪ್ಪಣೆಯ ॥ ೩ ॥

॥ ಕಂದ ॥

ಧರಣಿಪನಾಣತಿಯಂ ಪಡೆ । ದುರುತರ ಸಾಹಸದಿ ದೇಶ
ದೇಶವನೆಲ್ಲಂ ॥ ಪರಿವಾರವೆರಸುತಂಸಂ ॥ ಚರಿಸಿದನೇನೆಂಬೆನರಸಿ
ರತ್ನಾವಳಿಯಂ ॥ ೧ ॥

॥ ವಾರ್ಧಿಕ ॥

ತಂಗಾಳಿ ತೀಡೆ ಕೋಗಿಲೆ ಪಾಡೆ ಪೊಗಳುತ್ತ । ಭೃಂಗಾಳಿ
ಪಲಿಯೆ ತರುನಿಕರ ಪುಷ್ಪಿತವಾಗಿ । ಸಿಂಗಾರವೆಸಗಿರೆ ವಸಂತ
ರಾಜಂ ಬಂದ ವಿರಹಿಗಳ್ ತರಹರಿಸಲು ॥ ತುಂಗವಿಕ್ರಮನುದ

ಯುನಂ ವಸಂತೋತ್ಸವದ । ಶೃಂಗಾರವಂ ನೋಳ್ಪ ಸಂಭ್ರಮದಿ ವಿಹರಿಸೆ ಪ । ರೇಂಗಿತಜ್ಞಂ ವಸಂತಕನೆಂಬ ನರ್ಮ ಸಚಿವನ ಸಹಿತ ನಗರದೊಳಗೆ ॥ ೧ ॥

ರಾಗ ಕೇದಾರಗೌಳ ॥ ಅಷ್ಟತಾಳ ॥

ಸಖ ವಸಂತಕ ನೋಡು ಚಂದ್ರಶಾಲೆಗಳಿಂದು । ಮುಖಿಯರ ಕಾಂತಿಯಿಂದ ॥ ಪ್ರಖರವಾಗಿದೆ ವಸಂತೋತ್ಸವದುತ್ಸಾಹ । ಸುಖ ವನೀವುದು ಜನಕೆ ॥ ೧ ॥ ರತಿಯನಿರಿಸಿ ಕಾಮಪೂಜೆಯ ಮಾಡುವ ಸತಿಯರ ಸೊಬಗು ನೋಡು ॥ ಸ್ತುತಿಸಿ ಕುಣಿದು ಪಾಡಿ ಹರ್ಷದಿ ಪುರುಷರ । ಜೊತೆಯೊಳು ಶೋಭಿಪರು ॥ ೨ ॥ ಕುಸುಮವ ತೋರುವ ಕುಸುಮವನೆರಚುವ । ಕುಸುಮದಂದದಿ ನಗುವ ॥ ಕುಸುಮಕೋಮಲೆಯರ ಕುಟಿಲತನವ ನೋಡು । ಕಸಿವಿಸಿಗೊಳ್ಳದಿರು ॥ ೩ ॥ ಇನಿತು ಮಾತಾಡುತಲಿರೆ ನೃಪನೀರ್ವರು । ವನಜ ಮುಖಿಯರು ಬಂದು ॥ ವಿನಯದಿ ವಂದಿಸಿ ನರ್ತಿಸಿ ನುಡಿದರು । ಜನಪಗೆ ಭಕ್ತಿಯಿಂದ ॥ ೪ ॥

ರಾಗ ಸುರುಟಿ ॥ ಏಕತಾಳ ॥

ಭೂವರಮಣಿ ಕೇಳು । ರಾಣಿಯು । ಸೇವಕಿಯರು ತಾಳು ॥ ದೇವಿಯು ನಿನ್ನಯ । ಭಾವಕೆ ತಿಳುಹಿದ । ಈವಚನವಹಿತ । ಭಾವದಿ ಕಾಂಬುದು ॥ ಭೂವರ ॥ ೧ ॥ ರಾಜೋದ್ಯಾನದೊಳು । ಕಾಮನ । ಪೂಜೆಯು ನಲವಿನೊಳು ॥ ರಾಜಿಸಲಿದೆ ಮಧು । ರಾಜನ ತೃಪ್ತಿಗೆ । ರಾಜನೆ ನಿನಗಂ । ಭೋಜಾಕ್ಷಿಯ ನುಡಿ ॥ ಭೂವರ ॥ ೨ ॥

॥ ಭಾಮಿನಿ ॥

ದೇವಿಯುಪ್ಪಣೆಯಿಂದು ವಸಂತೋ । ದ್ಯಾವನಕೆ ನೀ ಬಿಜಯ ಮಾಡೆಂ । ದಾವನಜ ವದನೆಯರು ತೆರಳಲು ನಕ್ಕನದಕೇಳಿ ॥ ಆ ವಸಂತಕನೇನಿದಾಜ್ಞೆಯೆ । ಭೂವರಗೆ ಹೋ ಎನಲು ನೃಪನಂ । ಭಾವಿಸುತೆ ಮದನೋತ್ಸವಕೆ ನಡೆತಂದ ಹರ್ಷದಲಿ ॥ ೧ ॥

ರಾಗ ಸಾಂಗತ್ಯ ॥ ರೂಪಕತಾಳ ॥

ಇತ್ತಲುದ್ಯಾನದಿ ವಿಭವದಿ ವಾಸವ । ದತ್ತೆಯು ಶೃಂಗಾರದಿಂದ ॥ ಮತ್ತಕಾಶಿನಿಯರ ಗಡಣದಿ ಬಂದಳು । ರಕ್ತಾಶೋಕದ ಬುಡದೆಡೆಗೆ ॥ ೧ ॥ ಮದನ ಮೂರ್ತಿಯನೊಂದು ಮದನ ಮಂಟಪದಲ್ಲಿ । ಮುದದೊಳಿರಿಸಿ ಪೂಜೆಗೆಂದು ॥ ಸದಮಳೆ ತಕ್ಷಣ ನೆನೆದೊಂದು ರೂಪಕವ । ಸುದತಿ ಸಾಗರಿಕೆಗೆ ಪೇಳೆ ॥ ೨ ॥ ಎಲೆ ಸಖಿ ನೀಂ ಪೋಗಿ ಮೈನಾಹಕ್ಕಿಯ ಗೂಡಿ । ನೊಳಗತಿ ಭದ್ರವಾಗಿರಿಸು॥ ತಳುವದಿರಿಲ್ಲೆಂದು ರಾಣಿ ವಾಸವದತ್ತೆ । ಕಳುಹೆ ಸಾಗರಿಕೆಯು ನತ್ತ ॥ ೩ ॥ ಪ್ರಿಯನ ಕಣ್ಣಿಗೆ ಕಂಡರೀ ಹೆಣ್ಣ ಬಿಡನೆಂಬ । ಭಯವು ಜನಿಸಿದುದು ಮನದಿ ॥ ನಯದೊಳಟ್ಟಲು ಮಧ್ಯ ಪಥದೊಳಾಕೆಯು ಗೆಳೆ । ತಿಯ ಕಂಡು ತಿಳಿಯೆ ಸಂಗತಿಯು ॥ ೪ ॥

॥ ವಾರ್ಧಿಕ ॥

ಸಾಗರಿಕಗಾ ಸುಸಂಗತೆ ಪೇಳ್ದಳಿಂತು ನಾ । ನೀಗ ಮೈನಾ ಪಕ್ಕಿಯಂ ಗೂಡಿಗಿಕ್ಕಿಹೆಂ । ಪೋಗು ಹಿಂದಕೆ ಬಂದು ನುಡಿಯಲಾಕೆಯು ಮದನ ಪೂಜೆಗತಿ ಗುಪ್ತದಿಂದ ॥ ಸಾಗಿ ದೂರದಿ ನಿಂತು ನೋಡುತಿರೆ ಶೃಂಗಾರ । ಸಾಗರಂ ಭೂಪಾಲನುದಯನಂ ಸಂಭ್ರಮದೊಳಾಗಮಿಸಿದಂ ವನಕೆ ರಾಣಿ ವಾಸವದತ್ತೆ ಪ್ರೇಮದಿಂದಾದರಿಸಲು ॥ ೦ ॥

ರಾಗ ಸೌರಾಷ್ಟ್ರ ॥ ತ್ರಿವುಡತಾಳ ॥

ವಲ್ಲಭನನುಪಚರಿಸಿ ಬಳಿಕಾ। ಫುಲ್ಲಶರಪೂಜೆಯನು ಗೈದಳು। ಮಲ್ಲಿಕಾಸ್ಮಿತೆ ಪಾದ ಪಲ್ಲವ । ದಲ್ಲಿ ಮಣಿದು ॥ ೧ ॥ ಕಾಂತನನು ಕರೆತಂದು ಮಂಟಪ । ದಂತರದಿ ಕುಳ್ಳಿರಿಸಿ ಮರೆವ ಲ । ತಾಂತಗಳನರ್ಪಿಸುತ ಪೂಜಿಸೆ । ಸಂತಸದಲಿ ॥ ೨ ॥ ಸುಂದರಾಂಗಿಯು ಬಳಿಕ ಪ್ರಿಯನಿಗೆ ಸು । ಗಂಧವನು ಪೂಸುತ್ತ ಮಾಲಾ । ಬಂಧವರ್ಪಿಸುತಾರತಿಯ ಮುದ । ದಿಂದ ಬೆಳಗ ॥ ೩ ॥

॥ ಭಾಮಿನಿ ॥

ದೂರದಲಿ ಸಾಗರಿಕೆ ಕಾಣುತ । ಲೇರಿದುತ್ಸಾಹದಲಿ ನೆನೆದಳು । ಯಾರಿವನು ನಿಜ ಮಾರನೇ ತಾ ಬಂದು ಕುಳಿತಿಹನೆ ॥ ಭೂ

ರಮಣನಿವನೆನಗೆ ಮುಂದೆ ಮ। ನೋರಮಣನಾಗುವನೆ ನೃಪತಿಗೆ। ಸೇರಲಿರ್ಪೆನೆ ಎನುತ ವಿರಹದ ಬೇಗೆಯಲಿ ಬೆಂದು ॥ ೧ ॥

ರಾಗ ಮಧ್ಯಮಾವತಿ ॥ ತ್ರಿಪುಡತಾಳ ॥

ಏಣಲೋಚನೆಯಲ್ಲಿ ತನ್ನಯ । ಪ್ರಾಣಕಾಂತನನರ್ಚಿಸಲು ಸುಮ । ಬಾಣ ಸಮ ಭೂಪಾಲನೆಂದನು । ಪ್ರಾಣವಲ್ಲಭೆ ಕೇಳಲೆ॥ ಪ್ರೇಮದಿಂದ ॥ ೧ ॥ ಸಂಜೆಯಾ ಹೊಂಬಿಸಿಲ ಬಣ್ಣದಿ । ರಂಜಿಪುದು ನಿನ್ನೀ ತನುವು ಗುಣ । ಮಂಜರಿಯೆ ಮೋಹಿನಿಯೆ ಸುಂದರಿ । ಕಂಜಲೋಚನೆ ನೀಡುವೆ । ಪ್ರಿಯ ಪ್ರಸಾದ ॥ ೨ ॥ ಮಂದಿರದಿ ನಾ ಸುಪ್ರಸಾದವ । ಬಂದು ಕೊಡಲಿಹೆನೆನಲು ಕೇಳ್ದ ದ । ರಂದವರಿಯುತ ನರ್ಮ ಸಚಿವಾ । ನಂದದಿಂ ವ್ಯಂಗ್ಯಾರ್ಥದಿ ॥ ಹಂಗಿಸಿದನು ॥ ೩ ॥ ಪೊಡವಿಪಾಲಕ ಮಲ್ಲಿಕಾ ಲತೆ । ಯೆಡೆಗೆ ರಾಣಿಯು ಮಾಧವೀ ಲತೆ । ಯೆಡೆಗೆ ತೆರಳಲು ತೋಷದಿಂದಲಿ । ನಡೆದರಿಲ್ಲರು ಮೆಲ್ಲನೆ ॥ ವನವ ತೊರೆದು ॥ ೪ ॥

॥ ಕಂದ ॥

ಸಾಗಿದೊಡಿಂತಾವನದಿಂ । ಸಾಗರಿಕಾ ದೇವಿ ಮನದಿ ನೊಂದಳ್ ವಿರಹಾ ॥ ವೇಗದಿ ಪತಿಯಂ ಕಂಡನು । ರಾಗದಿ ಬೆಂದಳುರಮಾರುಗೊಟ್ಟಳು ಮನವಂ ॥ ೧ ॥

ರಾಗ ಕಾಫಿ ॥ ಅಷ್ಟ ತಾಳ ।

ಎನಿತು ಮೋಹಕ ರೂಪನವನು। ಎನ್ನ। ಮನವ ಕದ್ದೊಯ್ದ ಸುಂದರನು ॥ ಮನದನ್ನನನು ಕಂಡು । ಜನುಮ ಸಾರ್ಥಕವಾಯ್ತು ಮನುಮಥ ಮೈಗೂಡಿ । ಮನುಜನಾಗಿಹನೇನೊ ॥ ೧ ॥ ಎಂತು ಸೇರುವೆನೊ ವಲ್ಲಭನ । ಎನ್ನ । ಚಿಂತೆಯ ಬಲ್ಲನೆ ರಮಣ ॥ ಕಂತುಶರನ ತಾಪ । ಕುಂತದಂದದಿ ದೇಹಾ । ದ್ಯಂತ ಪೀಡಿಸುತಿದೆ । ಭ್ರಾಂತಿಯೋ ತಿಳಿಯೆನಾ ॥ ೨ ॥ ವಿರಹಾಗ್ನಿಯಲಿ ದೇಹವೆಲ್ಲಾ । ಕಿಚ್ಚು । ಸುರಿದಂತೆ ಸುಡುತಿದೆಯೆಲ್ಲಾ ॥ ಸ್ಮರ ತಾಪವಿದಕಿನ್ನು । ಪರಿಹಾರವೇನು ಜ । ರ್ಜರಿತವಾದುದು ದೇಹ । ಧರಿಸಲಾರೆನು ಜೀವ ॥ ೩ ॥ ಮಂದಾನಿಲನ ತಂಪು ತನುವ । ಸುಮ । ವೃಂದಗಳೀ

ಕಂಪು ಮನವ ॥ ಕುಂದಿಸುತಿದೆ ಮಾರ । ನೆಂದರನಿತು ಕ್ರೂರ । ಸುಂದರಿಯರ ಪೀಡೆ । ಯಿಂದ ಸಂತಸಗೊಂಬ ॥ ೪ ॥

॥ ವಾರ್ಧಿಕ ॥

ರಾಜೀವ ಮುಖಿಯಿಂತು ಮಾರನಸ್ತ್ರದಿ ಬಳಲಿ । ರಾಜ ಪೂಜೆಯು ಗೈದ ಪೂವಿನೊಳ್ ತಾಪೊರಳಿ । ರಾಜಿಸುವ ಮಂಟಪದಿ ಪೊಕ್ಕಲ್ಲಿ ಕುಳಿತೆದ್ದು ಪಲಗೆಯೊಂದನು ಕಾಣುತ ॥ ಓಜೆಯಿಂ ಕಾದಲನ ಚಿತ್ರ ಮಂ ಬರೆದಾ ಸ । ರೋಜಾಕ್ಷಿ ನೋಡುತ್ತ ಹುಚ್ಚೆದ್ದು ಬಿಗಿದಪ್ಪಿ । ಭೂಜದಡಿಯೊಳ್ ಕುಳ್ಳಿರಲ್ ಸುಸಂಗತೆಯೆಂಬ ಸಖಿಯು ಮೆಲ್ಲನೆ ಬಂದಳು ॥ ೧ ॥

ರಾಗ ಸೌರಾಷ್ಟ್ರ ॥ ತ್ರಿವುಡೆ ತಾಳ ॥

ಬರೆದ ಚಿತ್ರವ ಕಂಡು ಸೆಳೆದಾ । ತುರದಿ ನಸು ನಗುತಾಗ ಮೋದದೊ । ಳೊರೆದಳೆಲೆ ಸಾಗರಿಕೆ ತವಮನ । ದಿರವನರಿತೆ ॥೧॥ ಭೂಪನುದಯನ ಚಿತ್ರವಿದಕನು । ರೂಪವಹ ಜೊತೆಗಾತಿಯನು ನಾ । ರೂಪಿಸುವೆ ಚಿತ್ರದೊಳಗೆನ್ನುತ । ಲಾಪಜಾಕ್ಷಿ ॥ ೨ ॥ ರಾಜ ನೊತ್ತಿಗೆ ಸಾಗರಿಕೆಯೂ । ರಾಜಿಸುವ ಚಿತ್ರವನು ಬರೆಯೆ ಸ।ರೋಜ ಮುಖಿ ನಾಚಿದಳು ಮನದೊಳು । ನೈಜವೆನಲು ॥ ೩ ॥ ಸಾಗರಿಕೆ ಕೇಳ್ ನಿನ್ನ ಮನದನು । ರಾಗ ನೃಪತಿಯೊಳಹುದು ನೃಪಸಂ । ಯೋಗ ಭಾಗ್ಯವು ಸಹಜಪದು ನಿನ । ಗಾಗದಿಹುದೆ ॥ ೪ ॥

॥ ವಾರ್ಧಿಕ ॥

ವಿರಹದಿಂ ಕಾಮಿನಿಯು ತನುಮನಗಳೆಲ್ಲಕಿ।ಚ್ಚುರಿದಂತೆ ಬೆಂಡಾಯ್ತು ಬಿಸಿಯುಸಿರ್ ಸುಯ್ಯು ದಿ । ರ್ಭರವಾಗಲದನರಿತು ಸಖಿ ಜವದಿ ಕಮಲದೆಲೆಗಳ ತಂದು ಶಯ್ಯೆಗೈದು ॥ ಒರಗಿಸಲ್ ಸಾಗರಿಕೆ ಶಯ್ಯೆ ಯೊಳ್ ಪೊರಳಲ । ಚ್ಚರಿಯನೇವೆಂಬೆ ಕಾಮನ ಕಾವಿನಿಂದ ಬೆಂ । ದುರೆ ಬಾಡಿದುದು ಪತ್ರಶಯ್ಯೆಯುದು ಮಿಡಮಿಡನೆ ಮನ್ಮಥನ ತಾಪವೆನಿತೊ ॥ ೧ ॥

ರಾಗ ಸಾಂಗತ್ಯ ॥ ರೂಪಕತಾಳ ॥

ಮಾನಿನಿಯಂತಿರೆ ಮೈನಾಹಕ್ಕಿಯು ರಾಜೋದ್ಯಾನದಪಂಜರದಿಂದ॥ ತಾನಾಗಿ ಹಾರುತ್ತ ಬಂದಲ್ಲಿ ವೃಕ್ಷವಿ। ತಾನದಿ ಕುಳಿತಿದ್ದುದಾಗ ॥೧॥

ತಳಿರಿಂದ ತನುವೊತ್ತಿ ಸಖಿಯುಪಚರಿಸಲು । ಬಳಿಕದ್ದು ಸಖಿಯುಸಾ ಧರಿಸಿ ॥ ಹೊಳೆವ ಚಿತ್ರಪಟಾಕ ಮತ್ತೊಮ್ಮೆ ನೋಡುತ ಗೆಳತಿಗೆ ಪೇಳಿದಳಿಂತು ॥ ೨ ॥ ಎಲೆ ಸುಸಂಗತೆ ಕೇಳು ದುರ್ಲಭನೊಳು ಮನ। ದೊಲವನುರಾಗ ವಾಗಿಹುದು ॥ ಸಲೆ ಪ್ರೇಮವಿದು ಲಜ್ಜೆಗೂಡಿ ವಿಷವಮಾಯ್ತು । ನೆಲೆಗಾಣೆ ಸೋತೆನಾನವಗೆ ॥ ೩ ॥ ನುಡಿದಂತೆ ನುಡಿಯುವ ಮೈನಾ ಹಕ್ಕಿಯು ಕಂಡು । ಜಡಜಾಕ್ಷಿಯುರು ಭಯ ಗೊಂಡು ॥ ಹಿಡಿಯಹೋದರೆ ಹಕ್ಕಿ ಓಡಿತಕ್ಕೆ ಸಿಗದೆ ಮ । ತ್ತೊಡನೆ ಹಾರಿತು ಬಲು ದೂರ ॥ ೪ ॥ ಮಾನವರಂದದಿ ಕೇಳ್ದುದ ನುಡಿವುದು । ಮೈನಾಹಕ್ಕಿಯು ನಮ್ಮ ಮಾತು ॥ ತಾನಾಗಿ ಹೊರ ಬೀಳದಿರದೆಂಬ ಭಯದಸು । ಮಾನದಿ ಹಿಂಬಾಲಿಸಿದರು ॥ ೫ ॥

॥ ಭಾಮಿನಿ ॥

ಮರೆದು ಚಿತ್ರಪಟವನ್ನದಲಂತಾ । ತರುಣಿಯರು ಬಳಿಕತ್ತ ಹಕ್ಕಿಯು । ಭರದಿ ಹಾರುತ ಬಂದು ಕುಳಿತುದು ವೃಕ್ಷವೊಂದರಲೀ ॥ ಅರಸನಲ್ಲಿ ವಸಂತಕನ ವೆರ। ಸಿರಲು ಮೈನಾ ಹಕ್ಕಿಯುದು ಸಾ। ಗರಿಕೆಯೆಂದುದ ನುಡಿಯೆ ಪುನರಪಿ ಜನಪನಾಲಿಸಿದ ॥ ೧ ॥

ರಾಗ ಕೇದಾರಗೌಳ ॥ ಅಷ್ಟತಾಳ ॥

ಪ್ರೇಮವು ದುರ್ಲಭನೊಳು ಬೆಸೆದುದು ಮಾನ । ಕಾಮಿಸುತಿಹುದ ವವ ॥ ಭಾಮೆಯರಿಗೆ ಲಜ್ಜೆ ವೈರಿಯಾದುದು ನಿಜ । ಕಾಮನೆಂದರೆ ವಿಷಮು ॥ ೧ ॥ ಗೆಳತಿ ಚಿಂತಿಸಬೇಡ ಯೋಗ್ಯತೆಯಿದು ಚಿತ್ರ । ಫಲಕದಿ ಕಾಣುವುದು ॥ ಲಲನೆ ನೀ ರತಿಯಾತ ಮನ್ಮಥ ನೆಂದುನಾ। ವ್ಹಲಿದರೆ ಕೋಪವುಂಟೆ ॥ ೨ ॥ ಮರಣವೊಂದೇ ಗತಿ ಸಾಕು ನಿಲ್ಲಿಸು ಮಾತು । ಮರದೊಳಿಹುದು ಮೈನವು ॥ ಅರಸನಿಂತಾಲಿಸಿ ಸೋತು ಹೋದನು ಮೈನಾ। ಪೂರೆದ ಸಂಭಾಷಣೆಗೆ ॥ ೩ ॥ ಇನಿತು ಪೇಳಿದ ಪಕ್ಕಿ ಹಾರಿದುದ್ಯಾನ। ವನದೆಡೆಗಾ ಕ್ಷಣದಿ ॥ ಜನಪನ ಮನದೊಳು ಜನಿಸಿತು ಬಯಕೆಯು । ವನಿತೆಯ ಮೋಹದಿಂದ ॥ ೪ ॥ ಎಲೆ ವಸಂತಕ ಕೇಳು ಯೂರಿವಳೀ ಹೆಣ್ಣು । ಬಲು ವಿರಹಿಣಿ ತಿಳಿಯೆ ॥ ಕಳದಿ ಯೂರೀಕಗೆ ಮನದನ್ನ ನಾರೆಂದು। ತಿಳಿಯಬೇಕೀ ಕ್ಷಣದಿ॥ ೫॥

॥ ಭಾಮಿನಿ ॥

ಮಾತ ಕೇಳಿದೊಡೀಕೆ ಮನದೊಳು । ಸೋತು ಹೋಗಿಹಳೆ
ನಗೆನುತ ಭೂ। ನಾಥ ನಿರ್ಣಯಗೈದು ಮನದಲಿ ಕಾಮ ತಾಪದಲಿ॥
ಕಾತರಿಸುತಾ ಪಕ್ಷಿ ಹಾರಿದ ರೀತಿಯಲಿ ಪಥವರಿದು ಸಖನೊಡ ।
ನಾತುರದೊಳುದ್ಯಾನದೆಡೆಗೈತಂದ ನಲವಿನಲಿ ॥ ೧ ।

ರಾಗ ತೋಡಿ ॥ ಆದಿ ತಾಳ ॥

ಉಪವನಕೈತರೆ ಚಿತ್ರಫಲಕವನ್ನು । ನೃಪವರ ಕಾಣುತ
ಲಚ್ಚರಿಗೊಂಡ ॥ ವಿಪುಲ ಲಾವಣ್ಯ ರಾಶಿಯು ತರುಣಿಯ ಕಂಡು ।
ದುಪಹತಿ ಸುಮಶರನವು ಪಿರಿದಾಯ್ತು ॥ ೧ ॥ ಧರಣಿಪ ವಿರ
ಹದಿ ತಪಿಸುತಲಿರೆ ಸಖಿ । ವೆರಸಿ ಸಾಗರಿಕೆಯು ಬಂದು ದೂರದಲಿ॥
ಮರೆಯೊಳು ನಿಂದು ಕೇಳಿದಳರಸನ ಮಾತ । ಹರುಷದಿ ಕಂಬನಿ
ಕಣ್ಣೊಳುಕ್ಕಿದುದು ॥ ೨ ॥ ಭೂವರನೀಕ್ಷಿಸಲಕ್ಷ್ಮಿರ್ದ ಕಮಲ ಪ।
ತ್ರಾವಳಿ ಶಯ್ಯೆಯು ಬಾಡಿ ಬೆಂದುದನು ॥ ಆ ವನಿತೆಯು ವೃತ್ತ
ಕುಚ ನಿತಂಬಗಳಿಂದು । ಭಾವಿಸಿ ತಿಳಿದನು ಭರದೊತ್ತಿನಿಂದ ॥೩॥
ಕೇಳು ವಸಂತಕ ಲಾವಣ್ಯ ರಾಶಿಯು। ತಾಳಿದುದೊ ಹೆಣ್ಣು ರೂಪವ
ಜಗದಿ ॥ ತಾಳಲಾರದು ಮನವೀಕೆಯ ಕೂಡದೆ । ಬಾಳುವುದೆಂತೊ
ವಾನರಿಯೆನು ಮುಂದೆ ॥೪॥ ಕಟಿಯ ಸೊಬಗು ನೋಡು ತುಟಿಯ
ಸೊಬಗ ನೋಡು । ಕುಟಿಲ ಕುಂತಳದ ಸೌಂದರ್ಯವೆಂತಿಹುದು ॥
ಕಠಿಣವಾದುತ್ಕಟ ಕುಚಯುಗ್ಮಗಳ ನೋಡು । ದಿಟವಿದು ತೊಡೆಗಳ
ಚೆಲುವಾಕರ್ಷಕವೂ ॥ ೫ ॥

॥ ವಾರ್ಧಿಕ ॥

ಧರಣಿಪನ ಚಿತ್ತದೊಲವಂ ಸುಸಂಗತೆ ಮನದೊ । ಳರಿತು
ಸಾಗರಿಕೆಗರುಹುತ ಒಳಿಕ ಬಂದು ಭೂ । ವರನಡಿಗೆ ವಂದಿಸೆ ವಸಂ
ತಕಂ ಕೇಳ್ದನೇತಕೆ ಬಂದ ರಾಣಿ ನೃಪನ ॥ ಬರೆಯಲಟ್ಟಿದಳೊ ವ ನ
ವರಿಯಲಟ್ಟಿದಳೊ ಎನ । ಲೊರೆದಳೆಲೆ ಭೂಪ ಕೇಳರಿನಿಕರ ತಾಪ
ಕೇಳ್ । ತರುಣಿಯೋರ್ವಳ್ ನಿನ್ನ ವಿರಹದಿಂದಳಲುತಿರೆ ಕರಿಸನಾ
ಗುವುದುಚಿತವೆ ॥ ೧ ॥

ರಾಗ ನವರೋಜು ॥ ಏಕತಾಳ ॥

ತರುಣಿಮಣೀ ಸಾಗರಿಕೆ । ತವ । ಸ್ಮರಣೆಯುದೊಂದೇ ಮನಕೆ । ಪರಿಪರಿಯೊಳು ಬಲು । ವಿರಹದಿ ಬಿಸಿಲಿನೊ । ಳುರುಳಿದ ಹೂವಿನ॥ ತೆರದಿಂದಿರುವಳು ॥ ೧ ॥ ಪರಿಹರಿಸು ಬನ್ನವನು । ಅ । ಲ್ಲಿರುವಳು ನೋಡಾಕೆಯನು ॥ ಕರೆದೊಯ್ಯಲು ಭೂ । ವರ ದೂರದಿ ಸಾ । ಗರಿಕೆಯ ಕಾಣುತ । ಲೊರೆದನು ಮಿತ್ರಗೆ ॥ ೨ ॥

ರಾಗ ಯಮುನಾ ಕಲ್ಯಾಣಿ ॥ ಅಷ್ಟತಾಳ ॥

ಪಂಚಬಾಣನ ಶರ ಲಾವಣ್ಯ । ರೂಪು । ಮಿಂಚುತಿಪುದು ನೋಡಲಿದು ಪುಣ್ಯ ॥ ಪಲ್ಲವಿ ॥ ಓರೆ ನೋಟದಿ ನೋಡುವಳು ಬಾಲೆ । ನೋಡು । ನೀರೆ ಗಂಭೀರೆ ಮಿಂಚಿನ ಮಾಲೆ ॥ ಚಾರು ವದನದಲ್ಲಿ ಕಲೆಯಿಲ್ಲ । ಮತ್ತೆ । ನೀರಜದಂತೆ ಬಾಡುವುದಿಲ್ಲ ॥ ಪಂಚ ॥೧। ಭೂಮಿಗಿಳಿದು ಬಂದಪ್ಸರೆಯಂತೆ । ನೋಡು ಕಾಮಿನಿ ಪೊಸತೊಂದು ಲತೆಯಂತೆ ॥ ಪ್ರೇಮದ ವಿರಹದೊಳತಿನೊಂದು । ಎನ್ನ । ಕಾಮಿಸಿರಲು ಸ್ವರ್ಗಸುಖವಿಂದು ॥ ಪಂಚ ॥ ೨ ॥ ನಲ್ಲನ ಕಂಡು ನಾಚಿದಳಾಕೆ । ಎದೆ । ತಲ್ಲಣಿಸಲು ಭಯದಲಿ ಜೋಕೆ ॥ ಮೆಲ್ಲನೆ ಬಳಿ ಸಾರಿ ತರುಣಿಯ । ಕರ । ಪಲ್ಲವಗಳ ಪಿಡಿದನು ರಾಯ ॥ ಪಂಚ ॥ ೩ ॥

॥ ಭಾಮಿನಿ ॥

ನಲ್ಲ ನಲ್ಲೆಯರಿಂತು ಮಿಲನದ। ಪಲ್ಲವಿಯ ಹಾಡುತಿರೆ ರಾಣಿಯು। ವಲ್ಲಭನ ಕಾಣಲಿಕೆ ಬರೆ ನೃಪಸುಖಕೆ ಮುಳ್ಳಾಗಿ ॥ ಮಲ್ಲಿಕಾಸ್ಮಿತೆ ಕಂಡು ಮರದೆಡೆ। ಯಲ್ಲಿ ತಕ್ಷಣ ಮಡಗೆ ಮನದೊಳು ತಲ್ಲಣಿಸಿ ನೃಪವರನು ಭಾಗ್ಯವ ಹಳಿದ ಬೆಸನದಲೀ ॥ ೧ ॥

॥ ಕಂದ ॥

ಅಡಗಿಸುತೊಳಗೆ ವಸಂತಕ । ಪಿಡಿದಾ ಚಿತ್ರದ ಫಲಕವು ಬೀಳಲ್ ನೃಪನಾ ॥ ಮಡದಿಯು ಕಂಡಳ್ ಕೈಗೊಂ । ಡೊಡನೀಕ್ಷಿಸುತಚ್ಚರಿಯೊಳು ಪರಿಚಯಗೊಂಡಳ್ ॥ ೧ ॥

ರಾಗ ಕೇದಾರಗೌಳ ॥ ಅಷ್ಟ ತಾಳ ॥

ಉದಯನ ಸಾಗರಿಕೆಯರ ಚಿತ್ರವ ಕಂಡು । ವಿಧುಮುಖಿ ಕೋಪಗೊಂಡು॥ ಪದನವೇನೀಕೆ ಯಾರಿದ ಬರೆದವರಾರೆಂ। ಬುದ ಮತ್ಸರದಿ ಕೇಳ್ದಳು ॥ ೧ ॥ ವಿನಯದಿ ನೃಪವರನೆಂದನು ಕೇಳೆನ್ನ । ಮನದನ್ನೆ ಸುಪ್ರೀತೆಯೇ । ಮುನಿಸೇಕೆ ಬರೆದೆ ನಾನೂಹಿಸಿ ಸುಂದರಿ । ವನಿತೆಯೋರ್ವಳ ಚಿತ್ರವ ॥ ೨ ॥ ಕಲೆಗಾಗಿ ಬರೆದೆನಲ್ಲದೆ ಲೋಕದೊಳಗಿಂಥ । ಲಲನೆಯರಿರುವುದುಂಟೆ ॥ ಲಲಿತಾಂಗಿ ಬಿಡು ಮುನಿಸೆನಲು ವಸಂತಕ। ತಲೆದೂಗಿ ಸರಿಯೆಂದನು ॥ ೩ ॥ ತೀಡುತ ಬ್ರಹ್ಮಸೂತ್ರವನಾಣೆಯಿಟ್ಟು ಪ್ರ । ಗಾಢದಿ ನುಡಿದ ನಾನು ॥ ನೋಡಿಹೆ ಪ್ರತ್ಯಕ್ಷ ರಚನೆಯ ಚಿತ್ರವ। ಮಾಡಿದನೆನಗೆಂದನು ॥ ೪ ॥ ಮಾಧವಿ ಲತೆ ಹೂವ ಬಿಟ್ಟುದ ತಿಳುಹಲು । ಮೋದದಿ ಬಂದ ರಾಣಿ ॥ ಪೋದಳು ಕ್ರೋಧದಿ ಮನದಿ ಮತ್ಸರದಾಪ ॥ ಬಾಧಿಸುತಿರೆ ಬಹಳ ॥ ೫ ॥

॥ ವಾರ್ಧಿಕ ॥

ಕರದಿ ಸಿಕ್ಕಿದ ನಿಧಿಯು ಕಳೆದುಕೊಂಡವನಂತೆ । ತರಹರಿಸಿ ನೃಪತಿ ಸಾಗರಿಕೆಯುಂ ನೆನೆನೆನೆದು । ತೆರಳಿ ಮಂದಿರ ಕಂದಿರುಳು ಹಂಸತೂಲಿಕಾ ತಲ್ಪದೊಳು ಪವಡಿಸಿದನು ॥ ತರುಣಿಯಾ ಚಿಂತೆಯಿರೆ ನಿದ್ರೆಗೆಡೆ ನುಂಟೆ ಮತ್ತಿರುಳುದ್ದವಾದಂತೆ ಭಾಸವಾಹುದು ರವಿಯು । ಕರುಣೆಯಿಂ ಬೆಳಗಾಯ್ತು ಬಂದಾವಸಂತಕಂ ಚಿಂತಿಸದಿರೆಂದು ನುಡಿದ ॥ ೧ ॥

ರಾಗ ಸೌರಾಷ್ಟ್ರ ॥ ತ್ರಿವುಡೆ ತಾಳ ॥

ನೀಗು ಚಿಂತೆಯ ಭೂಪ ಇಂದಿನೊಳಾಗುವುದು ರಾತ್ರಿಯಲಿ ನಿನಗಾ । ಸಾಗರಿಕೆಯ ಸಮಾಗಮವು ಬಲು । ಬೇಗದಿಂದ ॥ ೧ ॥ ನುಡಿದೆನೀ ಯಜ್ಞೋಪವೀತವ । ಪಿಡಿದು ಕೇಳಿಂದೈದೆ ಪಥದಲಿ । ನಡೆಯೆ ದಾಸಿ ಸುಸಂಗತೆಯು ಕಂ । ಡೊಡನೆ ನುಡಿದ ॥ ೨ ॥ ಎಲೆ ಸುಸಂಗತೆ ಕೇಳು ನಿನ್ನಾ । ಗೆಳತಿಯೊಳು ನೃಪ ಮನವನಿಕ್ಕಿದ । ತಿಳಿಸು ಮುಂದೆ ಸಮಾಗಮವ ಕೈ । ಗೊಳಿಪ ಪರಿಯ ॥ ೩ ॥ ಅದಕೆ

ನುಡಿವಳು ಸಾಗರಿಕೆಯೂ । ಹದನವನ್ನೀನೆಂಬೆ ರಾಣಿಯು । ವಿಧಿಸಿ
ದಳು ಕಣ್ಣಿಟ್ಟು ಕಾಯಲು । ವಿಧಿಯೊಳೆನಗೆ ॥ ೪ ॥

॥ ವಾರ್ಧಿಕ ॥

ಆದೊಡದಕೊಂದುಪಾಯುವ ಪೇಳ್ವೆ ನೀನಿದಂ । ಭೂಧವಗೆ
ಬಿನ್ನವಿಸು ರಾಣಿಯಂದದಿ ವೇಷ। ಸಾಧಿಸುತಸಾಗರಿಕೆಯೂ ಪ್ರದೋ
ಷದ ನೆವದಿ ಎನ್ನೊಡನೆ ಬರುವಳಿಂದು ॥ ಮಾಧವೀ ಲತೆಯ
ಮಂಟಪಕಿಂದು ರಾತ್ರಿ ನಾ । ನಾ ದಾಸಿಯಂತೆ ಕಾಂಚನಮಾಲೆ
ಯಾಗಿ ನೀವ್ । ಕಾದಿರುವುದಲ್ಲಿಯಂತಿರೆ ಸಮಾಗಮ ಸುಗಮವೆಂ
ದೊರೆದು ದಾಸಿ ಪೋಗೆ ॥ ೧ ॥

॥ ಭಾಮಿನಿ ॥

ತೆರಳಲತ್ತ ವಸಂತಕನು ನೆರೆ । ಮರೆಯೊಳಿದ್ದಾ ವಾತವಾ
ಲಿಸಿ । ಭರದಿ ಕಾಂಚನ ಮಾಲೆ ಎಂಬಾ ದಾಸಿ ರಾಣಿಯೊಳು ॥ ಒರೆ
ವೆನೀ ಹಂಚಿಕೆಯನೆನ್ನುತ । ಲುರವಣಿಸಿ ಬಂದೆರಗಿ ಪದಕಿಂ । ತರು
ಹಿದಳು ಕೇಳ್ ದೇವಿ ದಾಸಿ ಸುಸಂಗತೆಯ ಕುಹಕ ॥ ೧ ॥

॥ ರಾಗ ಕೇದಾರ ಗೌಳ ಝಂಪೆತಾಳ ॥

ಸಾಗರಿಕೆಗಿಂದಿನಿರುಳು । ನೃಪನೊಳು ಸ । ಮಾಗಮವದು
ವನದೊಳು ॥ ಸಾಗುವಳು ದೇವಿಯಂತೆ । ಸಿಂಗರಿಸಿ । ರಾಗದಿಂ
ನೋಳ್ಪಿರಂತೆ ॥ ೧ ॥ ಆ ಸುಸಂಗತೆಯ ಮುಖದಿ । ತಿಳಿದೆ ನಾ। ನೀ
ಸಂಗತಿಯನು ಜವದಿ ॥ ದಾಸಿಯಿಂತೆನೆ ಕೇಳುತ । ರಾಣಿ ಬಲು ।
ತ್ರಾಸಗೊಂಡಳು ಕೆರಳುತ ॥ ೨ ॥ ಪತಿಯೆನ್ನ ವಂಚಿಸಿದನೆ । ಪ್ರೇ
ಮವ । ನ್ನತಿಶಯದಿ ನಟಿಸುತಿಹನೆ ॥ ಕ್ಷಿತಿಯೊಳಗೆ ಪುರುಷರೆಲ್ಲಾ ।
ಕಪಟಿಗಳು । ಧೃತಿಯಿಂದ ತಡೆವೆನೆಲ್ಲಾ ॥ ೩ ॥

॥ ವಾರ್ಧಿಕ ॥

ಮಾನಿನಿಯು ಮನದಿ ಮತ್ಸರದೊಳಿರಲಿರುಳಾಯ್ತು। ಬಾನಿ
ನೊಳ್ ತಾರೆಗಳ್ ನೃಪನನಿಣುಕುತ ನೋಡೆ । ಭೂನಾಥ ನರ್ಮ
ಸಚಿವನ ಸಹಿತ ಕಾದಲೆಯ ತನುಸುಖವ ಸವಿಯೆ ತಿಳಿದು ॥ ಆ ಮಾ
ತನೋದ್ಯಾನಕ್ಕೈತರಲ್ ಪ್ರೇಮ ಸಂ । ಧಾನ ಸಂಯೋಗಕ್ಕೆ ಸಿದಿ

ಲಾಗಿ ರಾಣಿ ದು । ಮ್ಮಾನದಿಂ ಮುನಿಸಿನಿಂ ದಾಸಿ ಕಾಂಚನಮಾಲೆ ಯೊಡನೆ ಬಂದಿರಲು ಮುನ್ನ ॥ ೧ ॥

॥ ಕಂದ ॥

ತಲೆಗವಗುಂಠನವಿರ್ದಲಾ । ನೆಲೆಯರಿಯದೆ ಸಾಗರಿಕೆಯು ಬಂದಿಹಳೆಂದೇ ॥ ತಿಳಿಯುತ ನೃಪಾಲ ಬಳಿಯಂ । ಮೆಲುನುಡಿಯೊಳ್ ಮಾತನಾಡಿದಂ ನಿಜಪ್ರಿಯೆಯೊಳ್ ॥ ೧ ॥

ರಾಗ ಕಾಫಿ ॥ ಅಷ್ಟತಾಳ ॥

ಸುಂದರಾಂಗಿಯೆ । ಮಂದಗಾಮಿನಿಯೆ । ಮಮ ಪ್ರೇಮ ರಾಜ್ಯಾ । ನಂದಕಾರಿಣಿ । ಸಂದ ಮೋಹಿನಿಯೆ॥ ಇಂದು ರಾಣಿಯು। ಬಂಧನದ ಬಿಗು । ಹಿಂದ ದುಸ್ಥಿತಿ । ಯಿಂದ ತಪ್ಪಿಸಿ । ಬಂದೆ ನಿನ್ನನು । ಬಂಧಿಸಲು ತೋ । ರೆಂದ ಬಿಡೆ ಬಿಡೆ । ಕುಂದರರದನೆಯೆ ॥೧॥ ತಲೆಯ ಸೆರಗನು ತೆಗೆದು ಕೆಳಗಿಳಿಸಿ । ಕೋಪದಲಿ ರಾಣಿಯು । ತಿಳಿಸಿ ನಿಜವನು ಹಳಿಯೆ ತಳಮಳಿಸಿ ॥ ಒಲುಮೆ ಬೇರೊಬ್ಬಳಲಿ ಬಲ್ಲೆ ನಿ । ದೊಳಿತು ನಟನೆಯು । ಥಳುಕು ಬಾಹ್ಯದಿ । ತಿಳಿದೆವೆಲ್ಲವ ನಿಳೆಯ ಪುರುಷರು । ಖಳರು ಕಣ್ಣೀರಿಳಿಸಿ ನುಡಿದಳು ॥ ೨ ॥

ರಾಗ ಕೇದಾರಗೌಳ ॥ ಅಷ್ಟತಾಳ ॥

ಪತಿಯ ಪ್ರೇಮವ ಕಳಕೊಂಡ ನಾರಿಗೆ ಬೇರೆ । ಗತಿಯುಂಟೆ ಮರಣವೊಂದೇ ॥ ಗತಿಯೆಂದು ನುಡಿದು ಹಂಗಿಸಿ ಪೋದಳಾರಾಣಿ। ಕ್ಷಿತಿಪನಂಜದ ಮನದಿ ॥ ೧ ॥ ಚಲದಿ ಪೋದಳು ರಾಣಿಯರಿತಿದ ಕಳವಳ । ಗೊಳುವಳೂ ಸಾಗರಿಕೆ ॥ ತಿಳಿಯುವೆನೆಂದು ನೃಪಾಲನು ದ್ಯಾನದಿ । ಸುಳಿದನಾಕೆಯನರಸಿ ॥ ೨ ॥

ರಾಗ ಸೌರಾಷ್ಟ್ರ ॥ ತ್ರಿವುಡೆತಾಳ ॥

ತರುಣಿಮಣಿ ಸಾಗರಿಕೆಯಿಂತಿದ । ನರಿತು ದುಃಖದಿ ನೊರಗಿ ನಲ್ಲನ । ತೊರೆದು ಬಾಳ್ವುದರ್ಕಿಂತ ಲೇಸೈ । ಮರಣವೆನುತ ॥ ೧ ॥ ವಿರಹಕಿಂತಲು ಮರಣವೇ ಹಿತ । ಕರವೆನುತ ವೇಣೊಂದ ಬಿಗಿಯಲು । ಕೊರಲಿನಲಿ ತಕ್ಷಣದಿ ಬಂದನು । ಧರಣಿಪಾಲ ॥ ೨ ॥

ಪೊಡವಿಪಾಲಕ ನೋಡಿ ನೇಣನು । ಕಡಿದು ರಕ್ಷಿಸೆ ರಾಣಿಯೆಂದೇ ।
ಹೃಥದೊಳಿರೆ ಸಾಗರಿಕೆಯೆಂಬುದ । ನೊಡನೆ ತಿಳಿದ ॥ ೩ ॥ ತಡವ
ರಿಸಿ ಜಡಜಾಕ್ಷಿಯುನು ಕೈ । ಪಿಡಿದೊಡ ಲಿಂಗನದೊಳೀರ್ವರು ।
ತೊಡಗಿ ಮುಳುಗಿದರೆಂದು ಹರುಷದ । ಕಡಲಿನಲ್ಲೀ ॥ ೪ ॥

॥ ಭಾಮಿನಿ ॥

ಆಡಿದುದು ತಪ್ಪೆಂದು ಪತಿಯೊಳು । ಬೇಡಿಕೊಳ್ಳುವೆನೆನುತ
ಖತಿ ನೀ । ಗಾಡಿ ವಾಸವದತ್ತೆ ಪುನರಪಿ ಬರಲು ನೃಪನೆಡೆಗೆ ॥
ರೂಢಿಪಾಲಕ ಸಾಗರಿಕೆಯುರು । ಗಾಢವಾದಾಲಿಂಗನದಿ ಮೈ ।
ಗೂಡಿರಲು ಖತಿಗೊಂಡು ರಾಣಿಯು ಸಿಂಹಿಣಿಯ ತೆರದಿ ॥ ೧ ॥

ರಾಗ ಕಾಂಭೋಜ ॥ ಝಂಪೆತಾಳ ॥

ಮೆಚ್ಚಿದೆನು ಸಾಗರಿಕೆ ದಾಸಿಯುಲ್ಲವೆ ನಿನ್ನ । ಹುಚ್ಚನಿಳಿಸುವೆ
ನಿಂದು ಬಿಡದೆ ॥ ಮುಚ್ಚುಮರೆಯಲಿ ನೃಪನ । ಮೇಳಕೆಳಸಿದೆ
ಬೆನ್ನ । ಚುಚ್ಚಿದೆಯು ಮೋಸದಿಂದೆನಗೆ ॥ ೧ ॥ ಬಯಸಿದುದು
ನೀನೇನು ನಿನ್ನ ಯೋಗ್ಯತೆಗೆ ನಿ । ರ್ಭಯದ ನಾಣಿಲಿವೆಣ್ಣು ಎನುತ॥
ಪ್ರಿಯನ ಭೂವರನ ಹಂಗಿಸಿ ಜರೆದು ಬೈದಳವಿ । ನಯದಿ ಮತ್ಸ
ರದ ಕೋಪದಲಿ ॥ ೨ ॥ ಬಂಧನದೊಳಿಕ್ಕಿರೀಕೆಯನೆನಲು ದಾಸಿ
ಯರು । ಬಂಧಿಸುತಲೊಯ್ದರಾಕ್ಷಣದಿ । ನಿಂದಿಸಿ ವಸಂತಕನ ಬಳಿಕ
ರಾಣಿಯು ಭರದಿ । ಬಂದಳಂತಃಪುರಕೆ ಮುನಿದು ॥ ೩ ॥ ಕೋಮ
ಲಾಂಗಿಯನು ಸೆರೆಗಿಕ್ಕಿದಳೆ ಹಾ ಎಂದು । ಭೂಮಿಪಾಲಕ ಮನದಿ
ಸತಿಯ ॥ ತಾಮಸವ ಚಿಂತಿಸುತ ಮಂದಿರಕೆ ಬರಲಿತ್ತ ॥ ಭಾಮೆ
ಸೆರೆಯಲಿ ದುಃಖಪಡಲು ॥ ೪ ॥

॥ ವಾರ್ಧಿಕ ॥

ಬಳಿಕಿತ್ತ ಯೌಗಂಧರಾಯಣಂ ಯೋಚನಾ । ಜಲಧಿಯೊಳ್
ಮುಳುಗುತ್ತ ವತ್ಸಾಧಿಪತಿಗೆ ಮುಂ । ದಿಳೆಯೊಳಗೆ ಸಾರ್ವಭೌ
ಮತ್ವಮೆಂತಹುದೆಂದು ಮನದೊಳಗ ನೆನೆದು ನೆನೆದು ॥ ಮಲೆತು
ಕೊಬ್ಬಿದ ಕೋಸಲೇಶ ಪ್ರಸೇನನಂ । ತಲೆವಾಗಿಸಲು ನಮ್ಮ ರಾಯ
ನಿಂಗಿದಿರು ಭೂ । ವಲಯದೊಳಗಾರೆನುತ । ತನ್ನ ನಿಶ್ಚಯಂಗೈದು
ನೃಪಗೆಂದ ಮನದಿರವನು ॥ ೧ ॥

ರಾಗ ಸೌರಾಷ್ಟ್ರ ॥ ಅಷ್ಟತಾಳ ॥

ಬಿನ್ನಹವೊಂದೆನ್ನ ಮನದ ಮಂಥನವಿದು । ಸ್ವಾಮಿ ಕೇಳು ॥ ನಾವು । ಮುನ್ನ ಯೋಚಿಸಿದಂಥ ಕಾರ್ಯದಂಗಗಳಿವು । ಸ್ವಾಮಿ ಕೇಳು ॥ ೧ ॥ ಒಂದೇ ಬೆಳ್ಗೊಡೆಯಲ್ಲಿ ಭೂಮಿಯನಾಳಲು । ಸ್ವಾಮಿ ಕೇಳು ॥ ಇಂದು । ಕುಂದಾದುದೊಂದು ನಮ್ಮಯ ವೈರಿ ತಲೆಯೆತ್ತಿ । ಸ್ವಾಮಿ ಕೇಳು ॥ ೨ ॥ ಮಲೆತಿಹ ಸೊಕ್ಕೇರಿ ಕೋಸಲಾಧೀಶನು । ಸ್ವಾಮಿ ಕೇಳು ॥ ಆತ । ಕೊಳಗಳವಿಲ್ಲದೆ ತಲೆವಾಗಲಾರನು । ಸ್ವಾಮಿಕೇಳು ॥ ೩ ॥ ನಮಗೆ ಪುಳಿಂದರ ರಾಜನ ನೆರವುಂಟು ॥ ಸ್ವಾಮಿ ಕೇಳು ॥ ಇನ್ನು । ಸಮರ ಸನ್ನಾಹಕ್ಕೆ ತಡೆಯೇಕೆ ಗೈವುದು । ಸ್ವಾಮಿ ಕೇಳು ॥ ೪ ॥

ರಾಗ ಕಾಂಭೋಜ ॥ ಝಂಪೆತಾಳ ॥

ಸಚಿವನಿಂತೆನಲು ನೃಪ ಸರಿಯೆನುತ ತಲೆದೂಗಿ । ಉಚಿತಗೈದನು ಬವರವೆಸಗೆ ॥ ಉಚಿತವಿದು ಖೂಳನಿಗೆ ತಕ್ಕ ಮದ್ದೆನುತ ಭಟ । ನಿಚಯವನು ಸನ್ನಾಹಗೈದ ॥ ೧ ॥ ಸೇನಾಧಿಪತಿ ರುಮಣ್ವಾನ ಜಾಮಾತನಹ । ಸೇನಾನಿ ಜಯವರ್ಮ ಬಂದು । ಭೂನಾಥ ನಪ್ಪಣೆಗೆ ತಲೆವಾಗಿ ಪೇಳಿದನ । ನೂನ ವಿಕ್ರಮವಂತವವನು ॥ ೨ ॥

ರಾಗ ಭೈರವಿ ಅಷ್ಟತಾಳ ॥

ಏನಾಗಬೇಕು ಜೀಯ । ವಿಜಯರನು । ಮಾನವ ಬಿಡು ವಿಶ್ವಯು ॥ ಆ ನರ ಕುರಿಗಳ । ಪ್ರಾಣಹೀರುವೆನೆಪೆ । ಭೂನಾಥ ತೋಷಗೊಂಡು ॥ ೧ ॥

ರಾಗ ಕಾಂಭೋಜ ॥ ಝಂಪೆತಾಳ ॥

ವಿಂಧ್ಯಾಚಲವನಾಳ್ವ ಮಿತ್ರ ನೃಪನಾದಾ ಪು । ಳಿಂದರಗೆ ಚರರ ಕಳುಹಲ್ಕೆ ॥ ಬಂದನಾತನು ತೋಷದಿಂದ ತನ್ನಯ ಚಮೂ । ವೃಂದದಿಂ ಕೌಶಾಂಬಿಗಂದು ॥ ೧ ॥ ನಮಿಸಿ ಪೇಳಿದನಿಂತು ರಾಜರಾಜಾಧೀಶ । ಏಮಗೇಕೆ ಕರೆಯ ಕಳುಹಿರುವೆ ॥ ಸಮರ ಸಂಭವಿಸಿತೇ ನಿನ್ನ ವೈರಿಗಳಾರು । ಯಮನೂರ ದಾರಿ ಕಾಯುವರು ॥ ೨ ॥ ಅಪ್ಪಣೆಯನಿತ್ತು ರೀಕ್ಷಣದೊಳಾರಾದರೇ । ನಪ್ಪಳಿಸಿ ಮದಮುಖರ

ಘುರಿದು ॥ ಒಪ್ಪಿಸುವೆನೆರಿಶಿರದ ಕಾಣಿಕೆಯು ನೋಡಿದರೆ । ಇಪ್ಪ ನೆನೆ ನೃಪನೆಂದನಾಗ ॥ ೩ ॥ ಸೊಕ್ಕಿಹನು ಕೋಸಲಾಧೀಶ ಪ್ರಸೇನ ನತಿ । ರಕ್ಕಸನ ತೆರದಿ ಗರ್ವದಲೀ ॥ ಮಿಕ್ಕಿ ನಡೆಯುವವೆಮ್ಮನದಕೆ ನಾವಿಂದ್ಯೆದಿ । ತರ್ಕ ಮುದ್ದರೆಯಬೇಕೀಗ ॥ ೪ ॥

॥ ಭಾಮಿನಿ ॥

ಇಂತು ಭೂವರ ಚಲದಿ ಸೇನಾ । ತಿಂಥಿಣಿಯವೊಡಗೊಂಡು ಬವರದ । ಪಂಥದಿಂದಲಿ ವರ ರುಮಣ್ವಾನಾದಿ ಪಟುಭಟರು ॥ ಪೊಂತಕಾರಿಗಳಿರಲು ಕೋಸಲ । ಮಂಥನಕೆ ನಡೆತರಲು ರಿಪುಗಳ । ಚಿಂತೆ ಹೆಚ್ಚಿಪು ಬಿರಿಯೆ ರಣಘೋಷದಲಿ ದಶದಿಶೆಯು ॥ ೧ ॥

ರಾಗ ಭೈರವಿ ॥ ತ್ರಿಪುಡತಾಳ ॥

ನಡೆದರಾಗ । ಸಮರಕೆ । ನಡೆದರಾಗ ॥ ಪಲ್ಲವಿ ॥ ನಡೆದರತಿ ದೃಢದಿಂದ ಖಡ್ಗವ । ಜಡಿದು ತೋಮರ ಕುಂತ ಧನುಗಳ । ಪಿಡಿದು ಕಡುಹಿಂದರಿಗಳೆದೆ ಗಡ। ಗಡನೆ ನಡುಗಲು ಕಡಲುತಡಿಯುನ। ಕಡಿದು ಮುಂಬರಿದಂತೆ ಸಿಡಿಲುಗ । ಳೊಡನೊಡನೆ ಸಿಡಿದಂತೆ ಕೋಸಲ । ದೆಡೆಗೆ ಭರದಲಿ ಬಂದು ಮುತ್ತಿದ । ರಡಿಗಡಿಗೆ ಜನ ಗಡಣ ಬೆದರಲು । ಕಡುಹಲಂದು । ಕೋಟೆಯು । ಕಡೆಗೆ ಬಂದು ॥ ನಡೆದರಾಗ ॥ ೧ ॥

ರಾಗ ಭೈರವಿ ॥ ಏಕತಾಳ ॥

ಮುತ್ತಿರಯ್ಯಾ ॥ಪಲ್ಲವಿ ॥ ಮುತ್ತಿ ಮುತ್ತಿ ಮುಂ । ದೊತ್ತಿ ಕತ್ತಿ ಮಸೆ । ಯುತ್ತೆತ್ತೆತ್ತಲು । ಕತ್ತಲು ಕವಿಸಿ ॥ ಅ ಪ. ॥ ಲಟ ಕಟಿಸುತ ಕಟು । ದಿಟದೊಳು ಪಟುಭಟ । ಕಟಕವದಟೊಳು । ತ್ಕಟಚಟುಲದಿ ಗಜ । ಘಟೆ ಸಂಘಟಿಸುತ । ಕಠಿಣದಿ ಧುರಲಂ । ಪಟರತಿ ಮುಸುಕಿರಿ । ಕುಟಿಲರನೆನುತ ॥ ಮುತ್ತಿ ॥ ೧ ॥

॥ ಕಂದ ॥

ಅರಿಗಳ ಮುತ್ತಿಗೆಯಂ ಕಂ । ಡುರೆ ಭಯದಿಂ ಕೋಟೆಕಾಪಿನಾಳ್ಗಳ್ ಬಂದಿಂ ॥ ತೊರೆದರ್ ನಡುಗುತ ಕೋಸಲ । ಧರಣೀಶ್ವರನಾ ಪ್ರಸೇನಪದ ಸನ್ನಿಧಿಯೊಳ್ ॥ ೧ ॥

ರಾಗ ಸಾರಂಗ ॥ ಅಷ್ಟತಾಳ ॥

ಚಿತ್ತಾವಧಾನರಾಯ । ಪೇಳುವೆವೊಂದು । ವೃತ್ತಾಂತ ಚಿತ್ರ ಜೀಯ ॥ ಮಂತ್ರಿ ಹುದರಿಗಳ । ಮೊತ್ತವು ಕೋಟಿಯು । ಸುತ್ತಲು ಉದಯನ । ಪೃಥ್ವೀಶ ಸೈನ್ಯವು ॥ ೧ ॥ ಶರಣಾಗಿ ಕಪ್ಪವನು । ಒಪ್ಪಿಸದಿರೆ । ಧುರದಿ ಕೊಳ್ಳುವೆವೆಮ್ಮನು ॥ ಮರೆಯಹೊಗುವೆವು ದೆಂದು । ಪರಿಪರಿ ಪೀಡಿಸಿ । ಜರದಟ್ಟಿದರು ನಮ್ಮ । ಧರಣೀಶ ರಕ್ಷಿಸು ॥ ೨ ॥

॥ ಭಾಮಿನಿ ॥

ಚರರ ನುಡಿಯನು ಕೇಳ್ದು ಕೋಸಲ । ಧರಣಿವಲ್ಲಭನಾ ಪ್ರಸೇನನು । ಕೆರಳಿ ಹೂಂಕರಿಸುತ್ತ ಮೀಸೆಯ ತಿರುಹಿ ಕೋಪದಲಿ॥ ಭರದಿ ಖಂಡೆಯ ಜಡಿದು ಕಾಲನ । ತೆರಿಯ ಜಲ್ಪಿಸು ಹನ ಸೆರೆ ಯೊಳ । ಗಿರಿಸಬಲ್ಲೆನೆನುತ್ತ ರೌದ್ರವ ತಾಳ್ದ ಸಿಡಿಲಂತೆ ॥ ೧ ॥

ರಾಗ ಮಾರವಿ ॥ ಏಕತಾಳ ॥

ಕೇಳಿರಿ ಗರ್ವದಿ । ಪೇಳಿದುದನು ಮ । ಲ್ಲಾಳಿರು ಕಿವಿದೆ ರೆದು ॥ ತಾಳುವೆನೆಂತರಿ । ಪಾಳಯವನು ಯಮ । ನಾಲಯಕಟ್ಟು ವೆನು ॥ ೧ ॥ ಖೂಳರಿವರು ಕೊಳ । ದಾಳವನರಿಯದೆ । ಲೀಲೆ ಯೊಳದಕಿಳಿದು ॥ ಬೀಳುವ ತೆರದಿಂ ಬೀಳುವರಿವರವು । ತೂಳುವೆ ವಾಧುರದಿ ॥ ೨ ॥ ಉದಯನ ಪಿತ್ತದಮದಪಿಳಿಸುವೆ ನೀ । ಕದನ ಮುಖದೊಳಿಂದು ॥ ಒದಗಿತು ಸಮಯವು ಸದೆಬಡಿಯಲು ಖ । ಡ್ಗದ ಸವಿ ತೋರಿಸಲು ॥ ೩ ॥

ರಾಗ ಸೌರಾಷ್ಟ್ರ ॥ ತ್ರಿವುಡತಾಳ ।

ಅನಿತರೊಳು ಕೇಳುತ್ತಲಾತನಿ । ಗನುಜನಾಗಿಹ ಭದ್ರ ಬಾಹುವು । ಘನವೆನಮುಗಿದು ಹರುಷವೆನ್ನುತ । ಕನಲಿ ನುಡಿದ ॥೧॥ ಗುಬ್ಬಿಯೊಳು ಬ್ರಹ್ಮಾಸ್ತ್ರವೇಕೆ ವ । ರಬ್ಬರದ ಬೊಬ್ಬೆಯನು ನೆತ್ತರ । ಕೊಬ್ಬನಿಳಿಸುವೆನಿಂದು ಬೇರಿ । ನ್ನೊಬ್ಬರೇಕೆ ॥ ೨ ॥ ದೀಪವನು ನೋಡುತ್ತ ಬಣ್ಣಂ । ದಾಪತಂಗಗಳೆಲ್ಲ ದೀಪದ । ತಾಪದಲಿ ಸಾವಂತೆ ಸಾವರು । ಕೋಪದರಿಗೆ ॥ ೩ ॥ ಅಣ್ಣ

ಕೇಳಿಂದಿನಲಿ ಬಿಡು, ಬಿಡು । ಗಣ್ಣರೈ ಕರಲೇನು ಪರಿ ಪ್ರು । ಕೃಣ್ಣ ನೈತರಲೇನು ಭಯವೇ । ಹಣ್ಣಿಸುವೆನು ॥ ೪ ॥ ಎಂದ ತಮ್ಮನ ಸಹಿತ ತೆರಳಿದ । ನಂದು ರಣರಂಗಕೆ ಪ್ರಸೇನನು । ಸಂದ ಸೇನೆಯು ಸಹಿತ ಬಲುರವ । ದಿಂದ ಜವದಿ ॥ ೫ ॥

॥ ವಾರ್ಧಿಕ ॥

ಇಕ್ಕಡೆಯು ಪಡೆಗಳ್ಳೈತರೆ ಶರಧಿಗಳು ಮುಳಿದು । ತಿಕ್ಕಿರಂ ತಾಯುತ್ತ ಬಲು ಭಟರೆಲ್ಲ ರಂಗವಂ । ಪೊಕ್ಕು ಕಾದಿದರಂದು ಶರ ಕುಂತ ಪರಶು ತೋಮರಗಳಿಂ ತಿವಿದು ತಿಪಿದು ॥ ಎಕ್ಕತುಳದಿಂ ರುಮುಣ್ಣಾನನಿದಿರಾದನಾ । ಸೊಕ್ಕಿದ ನೃಪಾಲ ಪ್ರಸೇನಂ ಜಯ ವರ್ಮ । ನೊಕ್ಕಲಿಕ್ಕುವೆನೆಂದು ಭದ್ರಬಾಹುವು ಜಡಿದು ಮುಂಬರಿದು ಜರೆದೊರೆಧನು ॥ ೧ ॥

ರಾಗ ಕುಜಾವಂತು ॥ ಮಟ್ಟೆತಾಳ ॥

ನಿಲ್ಲೆಲೋ ವಿರೋಧಿ ವೀರನೆ ॥ ಪಲ್ಲವಿ ॥ ಎಲ್ಲಿ ನಿನ್ನ ಗತಿಯು ನಿಲ್ಲು । ವಿಲ್ಲು ನಿನ್ನ ಪ್ರಾಣ ಕಳೆದು । ಕೊಳ್ಳಬೇಡ ಶರಣು ಬಂದ । ರಿಲ್ಲಿ ಬಿಡುವೆ ಯುದ್ಧದಲ್ಲಿ । ಮಲ್ಲತನವು ಸಾಕು ತಿಳಿಯೆಲಾ । ಸಂಗರದ ಪರಿಯು । ಬಲ್ಲೆಯೇನೊ ಯಾರು ನೀನೆಲಾ ॥ ಪೇಳಿನಲು ಬಿರುದ । ನೆಲ್ಲ ನುಡಿದ ಕೇಳು ಕೇಳೆಲಾ ॥ ನಿಲ್ಲೆಲೋ ॥ ೧ ॥ ಕ್ರೂರ ರಿಪು ಕುಠಾರನಾದ । ವೀರ ಕೋಸಲೇಶನನುಜ । ಧೀರ ಭದ್ರ ಬಾಹು ನಾನು । ಸಾರು ರಣವ ತೊರೆದು ಕಾದ । ಲಾರೆ ನೀನು ಸಾಯಬೇಡಲಾ ॥ ಎಚ್ಚರಿಕೆ ಪೇಳು । ಯಾರು ನೀನು ತತ್ಕ್ಷಣನಿಹೆ ಭಲಾ ॥ ರವಿಸುತನ ಪುರಕೆ । ತೋರಲಿರುವೆ ಪಥವ ತಾಳೆಲಾ ॥ ॥ ೨ ॥ ತಾಳಲಾರೆನಿನ್ನು ನಿನ್ನ । ಕಾಳುಗೈಯದಿರೆನು ವತ್ಸ । ಪಾಲ ಮಂತ್ರಿಯುಳಿಯು ಸಮರ । ಕಾಲ ವೈರಿನಿಕರ ಹೃದಯ । ಶೂಲ ನೆಂಬ ಬಿರುದು ಕದನದಿ ॥ ಜಯವರ್ಮನೆಂದು ತಾಳಿರುವೆನು ಪೆಸರು ಲೋಕದಿ ॥ ಎಂದೆನುತ ಶಸ್ತ್ರ । ಜಾಲವೆಸೆಯೆ ಭರದಿ ಕೋಪದಿ ॥ ನಿಲ್ಲೆಲೊ ॥ ೩ ॥

ರಾಗ ಶಂಕರಾಭರಣ ॥ ಮಟ್ಟೆತಾಳ ॥

ತಿಳಿದೆ ನಿನ್ನ ಬಿರುದ ಬರಿದೆ । ಗಳಹಬೇಡ ಕಾರ್ಯವೊಂದೆ । ಕೊಳುಗುಳಕ್ಕೆ ಸಾಕು ಬಾಹು । ಬಲವ ತೋರಿಸು ॥ ೧ ॥ ಬಾಹು ಬಲವು ಬೇಕೆ ಭದ್ರ । ಬಾಹು ಹೇಡಿ ನಿನಗೆ ಯುದ್ಧ । ದಾಹ ಸಾಕೆ ನುತ್ತ ಶರಸ । ಮೂಹವೆಸೆದನು ॥ ೨ ॥ ಅನಿತು ಶರವ ಕಡಿದ ಬಳಿಕ । ಕನಲಿ ಜಯವರ್ಮನನ್ನು । ಕಣಕಿಸೆರೆಯು ಪಿಡಿದ ರಣದ । ಕಣದಿ ಗೆಲ್ಲುತ ॥ ೩ ॥ ಆಗಲಾ ಪುಳಿಂದ ರಾಜ । ತಾಗಿ ಭದ್ರಬಾಹು ವೆಡೆಗೆ । ರೇಗಿ ಸರಳ ಮಳೆಯು ಸುರಿಸೆ । ಲಾಗುವೇಗದಿ ॥ ೪ ॥ ನುಡಿದ ಭದ್ರಬಾಹು ಶರವ । ಕಡಿದು ಯಾರು ನೀನು ಪೇಳು । ದುಡುಕುತನದಿ ಧುರಕೆ ಬಂದು । ಕೆಡುವೆ ನಿಶ್ಚಯು ॥ ೫ ॥

ರಾಗ ಮಾರವಿ ॥ ಝಂಪೆತಾಳ ॥

ದುಡುಕುವವ ನಾನಲ್ಲ । ಕಡುಗಲಿ ಪುಳಿಂದಕನು । ಪೊಡವಿ ಯೊಳು ಸಾಹಸದ । ಕಿಡಿಗೊಂದು ಪೆಸರು ॥ ತರೆಪುಳಿಂದಕ ನಿನ್ನ । ಕಿಡಿಗ ನೀರೆರೆಯಲ್ಕೆ । ಜಡಧಿಯಿಹುದೆಮ್ಮಲ್ಲಿ । ಮಿಡುಕಲೆಚ್ಚರಿಕೆ॥೧॥ ಫಡಭದ್ರಬಾಹು ಎಳೆ । ಹುಡುಗನನು ಪಿಡಿದು ತಲೆ । ಗಡರಿತೇ ಗರ್ವವಿದು । ಕಡೆಗಾಲ ನಿನಗೆ ॥ ಕಡೆಗಾಲವಲ್ಲದಿರೆ । ಪಡೆಯು ಸಹಿತದಿ ವತ್ಸ । ದೊಡೆಯನಾಳಾಗುವೆಯು । ಕಡುಮೂರ್ಖ ನೀನು ॥ ೨ ॥ ಬರಿದೆ ಮಾತುಗಳೇಕೆ । ಶರದ ಮೊನೆಯೊಳು ನಿನ್ನ ಶಿರದ ಕಾಣಿಕೆಯನಾ । ನರಪತಿಗೆ ಕೊಡುವೆ ॥ ಒರೆದಿಂತು ಶರವರ್ಷ। ಸುರಿಯೆ ಸೋಲುತ ಕುಸಿದ । ನುರೆ ಭದ್ರಬಾಹುಧರೆ । ಗೊರಗಿ ದನು ಹತಿಗೆ ॥ ೩ ॥

ರಾಗ ನಾದನಾಮ ಕ್ರಿಯೆ ॥ ಅಷ್ಟತಾಳ ॥

ಆಗ ರುಮಹ್ವಾನ ಕೋಪದಿ । ಧನು । ತೂಗುತ ಶೌರ್ಯ ಪ್ರತಾಪದಿ ॥ ತಾಗಿದ ಭರದಿ ಪ್ರಸೇನಗೆ । ಎಲ್ಲಿ । ಪೋಗುವೆ ನಿಲ್ಲೆಂದು ಖೂಳಗೆ ॥ ೧ ॥ ಎಲೆ ಪ್ರಸೇನನೆ ನಿನ್ನ ಗರ್ವವ । ಈಗ । ತಲೆ ಯಿಂದಲಿಳಿಸುವ ಸರ್ವವ ॥ ಚಲಿಯಾಗಬೇಡ ನೀ ಸುಮ್ಮನೆ ।

ಕೊಳು । ಗುಳ ಬಿಟ್ಟು ಶರಣಾಗು ಬಿಮ್ಮನೆ ॥ ೨ ॥ ಶರಣೆಂಬುದೆಂತೆಂದು ತಿಳಿಯೆವು । ಶರ । ಣರ ರಕ್ಷಿಪುದನೊಂದೆ ಬಲ್ಲೆವು ॥ ತೆರಳು ಮೂಲೆಯೊಳಿದ್ದ ಕೊಡಲಿಯು । ಕಾಲೊ । ಳೊರಗಿಸಿಕೊಳದಿರು ತಿಳಿದೆಯು ॥ ೩ ॥ ಶರಣೆಂದು ಕಪ್ಪವ ಕೊಟ್ಟರೆ । ನಮ್ಮ । ಧರಣೀಶನೊಳು ಭಕ್ತಿಯಿಟ್ಟರೆ ॥ ತೆರಳುವೆವೀ ಕ್ಷಣ ತಪ್ಪಲು । ನಿನ್ನ ಹರಣವಕೊಳುವೆವು ಶರದೊಳು ॥ ೪ ॥ ಕದನಕೆ ಬಂದ ಕಾರಣವೇನು । ನಿನ್ನ । ಉದಯನ ಮೂರ್ಖನಾಗಿಹನೇನು ॥ ಮದವೇರಿ ವೀತಿಗೆಟ್ಟವನಂತೆ । ಮಾಳ್ಪ । ಹದನಕೆ ಮದ್ದುಂಟು ಬಿಡುಚಿಂತೆ ॥ ೫ ॥ ವತ್ಸದೇಶಾಧಿಪ ಗುಣಯುತ । ಪ್ರಜಾ । ವತ್ಸಲನಿಹನೆಂದು ಪ್ರಖ್ಯಾತ ॥ ಕುತ್ಸಿತ ನೀನು ಪ್ರಜೆಗಳಿಂಗೆ । ಪೀಡೆ । ಗುತ್ಸುಕನದಕೆ ಯುದ್ಧವು ಹೀಗೆ ॥ ೬ ॥ ಮುಚ್ಚು ಬಾಯನು ಸಾಕು ಯುದ್ಧದಿ । ಮಾತು । ಹೆಚ್ಚೇಕೆನ್ನುತ ಬಲು ಬಾಣದಿ ॥ ಚುಚ್ಚಿದರೋರ್ವರವೋರ್ವರು । ನೋಳ್ಪ । ರಚ್ಚರಿಗೊಂಡರು ಸರ್ವರು ॥ ೭ ॥ ಆಗ ಪ್ರಸೇನನ ಶರವೊಂದು । ಸರಿ । ತಾಗಿ ರುಮಣ್ವಾನ ನತಿನೊಂದು ॥ ವೇಗದಿ ಮೂರ್ಛೆಗೆ ಸಂದನು । ತಿಳಿ । ದಾಗ ವತ್ಸೇಶನು ತಡೆದನು ॥ ೮ ॥

ರಾಗ ಶಂಕರಾಭರಣ ॥ ಮಟ್ಟೆತಾಳ ॥

ನಿಲ್ಲು ನಿಲ್ಲು ಫಡ ಪ್ರಸೇನ । ಎಲ್ಲಿಗೈದುವೆ ॥ ಖುಲ್ಲತನವನೆಲ್ಲ ಕ್ಷಣದೊಳಿಲ್ಲಿ ನಿಲಿಸುವೆ ॥ ೧ ॥ ಸುಮ್ಮನೇಕೆ ಬಂದೆ ವತ್ಸ । ನಮ್ಮ ದೇಶಕೆ । ಹೆಮ್ಮೆಯಿಂದ ಬಂದ ನಿನ್ನ । ದಮ್ಮ ನಿಳಿಸುವೆ ॥ ೨ ॥ ನಾಡೊಳೆಲ್ಲ ಪ್ರಜೆಗಳನ್ನು । ಪೀಡಿಸುತ್ತಲಿ ॥ ನೀಡುತಿರುವೆ ಬನ್ನ ಜನರ । ಕಾಡಿಸುತ್ತಲಿ ॥ ೩ ॥ ಆಯುತಪ್ಪಿ ನುಡಿದು ಬರಿದೆ । ಸಾಯು ಬೇಡವೊ ॥ ಆಯುತಾಕ್ಷಿಯುರನು ಗೆಲ್ದ । ಗೇಯುವಲ್ಲವೋ ॥ ೪ ॥ ಶರಣು ಬಂದು ಕಪ್ಪವೀಯೆ । ಪೊರೆವೆ ನಿನ್ನನು ॥ ಬರಿದೆಗಳಹೆ ನಿನಗೆ ಯಮಪ । ಪುರವ ತೋರ್ವೆನು ॥ ೫ ॥ ಯಮನಪುರದ ದಾರಿಗೆನುತ । ಲಮಿತ ಬಾಣದಿ ॥ ಸಮರಗೈದರೀರ್ವರು ವಿ । ಕ್ರಮದಿ ರೋಷದಿ ॥ ೬ ॥ ಕೆರಳಿ ವತ್ಸಭೂಪನೆಸೆಯು । ಲುರಗ

ಶಿರವನು ॥ ಉರಿಯುನುಗುಳುತಾಗ ಕಡಿಯು । ಲರಿಯು ಶಿರವನು ॥ ೭ ॥ ಖನನೆಂಬ ಬೀಳಲಾ ಪ್ರ । ಸೇನ ಧರೆಯೊಳು ॥ ಸೇವೆ ಶರಣು ಬರಲು ಜಯುದ । ಧ್ವಾನ ಹೆಚ್ಚಲು ॥ ೮ ॥

ರಾಗ ಕಾಂಭೋಜ ॥ ಝಂಪೆತಾಳ ॥

ವಿಜಯು ವನಿತೆಯು ವರಿಸಿ ಶಾಂತಿಯುನು ನೆಲೆಗೊಳಿಸಿ । ಪ್ರಜೆಗಳಿಗೆ ಹಿತವಚನ ನುಡಿದು ॥ ನಿಜಪುರಕೆ ತನ್ನವರನೊಡಗೊಂಡು ಸಂಭ್ರಮದಿ । ಬಿಜಯುಗೈದನು ಭೂಪ ಮುದದಿ ॥ ೧ ॥ ಜಯು ವಿಭೋ ಉದಯುನ ನೃಪಾಲ ಸದ್ಗುಣಶೀಲ । ಜಯುಚಕ್ರವರ್ತಿ ಜಯುವೆನುತ ॥ ಜಯುಘೋಷವಾಗುತಿರೆ ಸಿಂಗರದಿ ಬಂದಾರ । ತಿಯು ಬೆಳಗ ಮಂಗಳಾಂಗಿಯರು ॥ ೨ ॥ ಯೌಗಂಧರಾಯಣನು ಬಳಿಕ ಯೋಚಿಸುತಿರ್ದ । ಸಾಗರಿಕೆಗಾದ ಬಂಧನವ ॥ ಹೇಗೆ ಬಂಧ ವಿಮುಕ್ತಿಯುಹುದು ನೃಪನೊಡನೆ ಸಹ । ಯೋಗವೆಂತೆಂದು ಚಿಂತಿಸಿದ ॥ ೩ ॥ ಮಂತ್ರಿ ಯೋಚಿಸಿ ನಗುತವಂತಿಯಿಂದೋರ್ವ ಘನ । ಮಾಂತ್ರಿಕನ ಕರೆಸಿ ಪೇಳಿದನು ॥ ತಂತ್ರದಲಿ ರತ್ನಾವಳಿಯು ಸೆರೆಯು ಬಿಡಿಸುವುದು । ಮಂತ್ರಪ್ರಭಾವದಿಂದೆನುತ ॥ ೪ ॥

॥ ವಾರ್ಧಿಕ ॥

ಉಡುಗೊರೆಯುನಿತ್ತೈಂದ್ರಜಾಲಿಕಗೆ ಗುಪ್ತದಿಂ । ನುಡಿದೆಲ್ಲ ಮಂ ಕಳುಹಲತ್ತ ಮರುದಿನ ಪೊಡವಿ । ಯೊಡೆಯುನೊಡ್ಡೋಲಗದೊಳೆಸೆದಿರಲು ಸಿಂಹಳೇಶನ ಸಚಿವ ವಸುಭೂತಿಯುು ॥ ಬಿಡುವರಿತು ಬಂದು ವಂದಿಸಲು ಸತ್ಕರಿಸಿ ಮ । ತ್ತೊಡನೆ ಸಂತೋಷದಿಂ ಬೆಸಗೊಳಲು ಕಜ್ಜಮಂ । ಬಿಡದೊಂದ ನುಡಿದ ನಡೆದುದನೆಲ್ಲ ಮನ ಕರಗೆ ಕೇಳ್ದನದ ರಾಣಿಸಹಿತ ॥ ೧ ॥

ರಾಗ ಬೇಗಡೆ ॥ ಅಷ್ಟತಾಳ ॥

ಲಾಲಿಸು ವತ್ಸಾಧಿಪತಿ ದಯುವಿಟ್ಟು । ಜಾಲವಿದಲ್ಲ ವಾರ್ತೆಯುಕಿವಿಗೊಟ್ಟು ॥ ಲಾಲಿಸು ॥ ಪಲ್ಲ ॥ ತವ ವಾರ್ತೆಯುನು ಕೇಳಿ ಸಿಂಹಳೇಶ್ವರನು । ವಿವರಿಸಲಸದಳ ಮನದಿ ನೊಂದುದನು ॥ ತವ

ಯುರಿಯೊಳು ರಾಣಿಯುರಿದುದನರಿತು । ಬವಣೆಗೊಂಡನು ಬಲು ತರ ದುಃಖ ಬೆರೆತು ॥ ಲಾಲಿಸು ॥ ೧ ॥ ಪತ್ರವ ನೋಡಿಕೊಂಡಾಡಿ ಸಮ್ಮುದದಿ । ಪುತ್ರಿ ರತ್ನಾವಳಿಯನು ನಿಮ್ಮ ಪದದಿ ॥ ಧಾತ್ರೀಶ ಸಿಂಹಳೇಶ್ವರನರ್ಪಿಸಿದನು ॥ ೨ ॥ ಧಾತ್ರಿಯರೊಡನೆ ಸುತೆಯು ಕಳುಹಿದನು ॥ ೨ ॥ ಪರಿಜನರೊಂದಿಗೆ ನೌಕೆಯೊಳಂದು । ಶರಧಿ ಯುತ್ತರಿಸೆ ಸುಂಟರಗಾಳಿ ಬಂದು ॥ ಭರದಿ ಮುಳುಗೆ ನೌಕೆಯುಳಿ ಯುವರೆಂತು । ಅರಿಯೆವು ರತ್ನಾವಳಿಯು ವಾರ್ತೆಯಿಂತು ॥ ॥ ಲಾಲಿಸು ॥ ೩ ॥

ರಾಗ ಸಾಂಗತ್ಯ ॥ ರೂಪಕ ತಾಳ ॥

ಕೇಳುತಾಕೆಯು ಘೋರ ದುರ್ಗತಿಗಳ ರಾಣಿ । ತಾಳಿದಳತಿ ದುಃಖ ಮನದಿ ॥ ಬಾಲೆ ಕೋಮಲೆ ಶೀಲೆ ಏವಾದಳೋ ತಂಗಿ । ಬಾಳೊಂದು ಕನಸಾಯ್ತು ನಿನಗೆ ॥ ೧ ॥ ಸತಿಯು ಸಾಂತ್ವನಗೈದನೇಕೆ ಚಿಂತಿಪೆ ದೈವ । ಗತಿಯುಬಲ್ಲವರಾರು ಜಗದಿ ॥ ವ್ಯಥೆಯೇಕೆ ಬದು ಕಿರಬಹುದಿವರಂದದಿ । ಕೃತಪುಣ್ಯವಿದ್ದರೆಂದನುತ ॥ ೨ ॥ ವಸು ಭೂತಿಗೆಂದ ನಮ್ಮರಸಿಯುಗ್ನಿಯೊಳುದ । ಹಿಸಿ ಪೋದುದಿಲ್ಲವಿಚ್ಛೆ ಸುತ ॥ ಬಿಸಜಾಕ್ಷಿಗಾಗಿ ಪತ್ರವ ಕಳುಹಿಸಲಿಲ್ಲ । ಪೊಸೆಕತೆಯಿದು ಮಿಥ್ಯವಚನ ॥ ೩ ॥ ಎಂತಾದರಾಕೆಯುನರಸಬೇಕೆನುತೆಂದ । ಮಂತ್ರಿ ಯೌಗಂಧರಾಯಣಗೆ ॥ ಸಂತಸಗೊಂಡು ಸಂತವಿಸುತ್ತಲಿರಲಾಗ । ಮಾಂತ್ರಿಕನೈತಂದು ಮಣಿದ ॥ ೪ ॥

॥ ಭಾಮಿನಿ ॥

ವಂದಿಸುವೆ ಪದಕಾನವಂತಿಯು । ಐಂದ್ರಜಾಲಿಕನೆಸಲರಸಿ ಯೂ । ನಂದದಲಿ ತವರಿಂದ ಬಂದಿಹನೆನುತಲುಪಚರಿಸೆ ॥ ಬಂದ ಕಾರ್ಯವದೇನೆನುತ್ತ ವ । ಸುಂಧರಾಧಿಪ ಬೆಸಸೆ ಮಾಂತ್ರಿಕ । ಚಂದದಿಂದಲಿ ನವಿಲ ಗರಿಗಳ ಕೀಡಿ ಪೇಳಿದನು ॥ ೧ ॥

ರಾಗ ಕಾಂಭೋಜ ॥ ಝಂಪೆತಾಳ ॥

ಐಂದ್ರಜಾಲಿಕ ನಾನು ತೋರಿಸುವೆ ಭೂಮಿಯೊಳ । ಗಿಂದ್ರ ನಮರಾವತಿಯನಿಳಿಸಿ ॥ ಚಂದ್ರಲೋಕವನು ಪಾತಾಳವನು ನೋ

ಡುವುದು । ರುಂದ್ರವಮಾಂತ್ರಿಕ ಶಕ್ತಿಯೆನಲು ॥ ೧ ॥ ಅರಸನಪ್ಪಣೆ ಯಾಗೆ ಸುರಪುರವ ಬಳಿಕ ಚಂ । ದಿರನ ಧರೆಗಿಳಿಸಿ ತೋರಿದನು ॥ ಬೆರಗಾದುದೆಲ್ಲ ಜನ ಪಾತಾಳವನು ನೋಡಿ । ಧರಣಿಯೊಳಗೇನೆವು ತಲಿರಲು ॥ ೨ ॥ ಅನಿತರೊಳು ಸಾಗರಿಕೆಯುನು ಬಂಧಿಸಿರ್ದ ಸೆರೆ । ಮನೆಯು ಕಿಚ್ಚಿನೊಳುರಿದ ತೆರದಿ ॥ ಜನವೆಲ್ಲ ನೋಡಲಾಕೆಯುನು ಪೊರೆಯುವೆನೆನುತ । ಜನಪನೈಧಿದನತ್ತ ಭರದಿ ॥ ೩ ॥

॥ ಭಾಮಿನಿ ॥

ಕಿಚ್ಚುರಿಯೆ ಧಗಧಗನೆ ಜನಗಳ । ಕಿಚ್ಚು ಕಳೆದುದು ಭಯದ ನದಿಯುಲಿ । ಕೊಚ್ಚಿ ಹೋದಳು ರಾಣಿ ವಾಸವದತ್ತೆ ಮನಮರುಗಿ ॥ ಹೆಚ್ಚಿತೆನ್ನಪರಾಧ ವಿಧಿಯಾ । ಬಿಚ್ಚುಗತ್ತಿಯು ಹೊಡೆತ ಮತ್ಸರ । ದಿಚ್ಛೆಪೂರೈಸುವುದೆ ಹಾಯೆಂದಳಲಿ ಬಾಯ್ಬಿಡಲು ॥ ೧ ॥

॥ ವಾರ್ಧಿಕ ॥

ಜನಪನಾಕೆಯ ಕಿಚ್ಚು ಕಾವಿನಿಂ ಬಿಡಿಸಿ ತರ । ಲನಿತರೊಳ ಗುರಿಯು ತಾ ಮಾಯವಾಗಲು ತಿಳಿದ । ರನುಮಾನವೇಕಿಂದ್ರ ಜಾಲವಿದು ನಿಜವೆಂದು ಬಳಿಕಲ್ಲಿ ವಸುಭೂತಿಯು ॥ ವನಿತೆಯಿವಳ ಹುದು ರತ್ನಾವಳಿಯು ಕೊರಲಿನಲಿ । ಮಿನುಗುತಿಹ ರತ್ನಹಾರವ ಬಲ್ಲೆನೆನುತ ಗುರು । ತನು ತಿಳಿದು ನೃಪಗೆ ಬಿನ್ನವಿಸಲಾನಂದಾಬ್ಧಿ ಯೊಳ್ ತೇಲಿದಂ ಭೂಪನು ॥ ೧ ॥

ರಾಗ ಮಧ್ಯಮಾವತಿ ॥ ತ್ರಿವುಡ ತಾಳ ॥

ನುಡಿದವಾ ಯೌಗಂಧರಾಯಣ । ನೊಡವಿದಕೆ ನಾನಿರುವ ಕಾರಣ । ಪೊಡವಿಪನ ಕೀರ್ತಿಯನು ಪೆರ್ಚಿಸೆ । ಬಿಡದೆಯತ್ನವ ಗೈದೆನು ॥ ೧ ॥ ಸಾರ್ವಭೌಮತ್ವದಲಿ ಮೆರೆಸಲು । ಸರ್ವಕಾರ್ಯವ ಗೈದೆನಿಂದಿನೊ । ಉರ್ವಿಯೊಳು ನೀನೋರ್ವನಾಗಿಹೆ । ಸಾರ್ವಭೌಮನು ಸಾರ್ಥಕ ॥ ೨ ॥ ಎಂದ ಮಾತಿಗೆ ನೃಪವರನು ಯೌ । ಗಂಧರಾಯಣನನ್ನು ಪೊಗಳಿದ । ನಂದು ಬಲು ಮೆಚ್ಚುಗೆ ಯನೀಯುತ । ಲಿಂದುಮುಖಿಯನು ನೋಡಿದ ॥ ೩ ॥ ಅರಿತು ವಾಸವದತ್ತೆ ನಿಜವನು । ತರುಣಿ ರತ್ನಾವಳಿಯ ಪ್ರೇಮದ । ಭರ

ದೊಳಪ್ಪುತ ನುಡಿಯೆ ಭಗಿನಿಯೆ । ಬರಿದೆ ಬನ್ನವನಿತ್ತೆನು ॥ ೪ ॥ ಕ್ಷಮಿಸು ನೀನೆಲೆ ದೇವಿ ಈ ಭೂ । ರಮಣನೊಂದಿಗೆ ಸೇರ್ದು ಬಾಳುವು । ದಮಿತ ಸುಖದಿಂ ಕೀರ್ತಿ ವರ್ಧಿಸಿ । ಸುಮನಸ ಸ್ತ್ರೀ ರೂಪೆಯೆ ॥ ೫ ॥

॥ ಕಂದ ॥

ತಿಳಿದರು ಸರ್ವರು ರತ್ನಾ । ವಳಿ ಸಿಂಹಳ ರಾಜಪುತ್ರಿಯೆಂ ಬುದನರಸಂ ॥ ಸಲೆ ಪೊಗಳಿ ಮಾಂತ್ರಿಕನ ತಾ । ಕಳುಹಿದ ಬಹು ಮಾನವಿತ್ತು ವಿಧವಿಧದಿಂದಂ ॥ ೧ ॥

ರಾಗ ಸೌರಾಷ್ಟ್ರ ॥ ತ್ರಿವುಡೆ ತಾಳ ॥

ಬಳಿಕ ಸಿಂಹಳ ಪತಿಗೆ ರತ್ನಾ । ವಳಿಯ ಪರಿಯನ್ನರುಹಿ ಶೀಘ್ರದೊ । ಳಿಳೆಯ ಪಾಲಕ ವಿವಹ ಸಿದ್ಧತೆ । ಗಳನು ಗೈದ ॥ ೧ ॥ ಕರೆಸಿ ವಿಬುಧರವೆಲ್ಲ ದೈವ । ಜ್ಞರ ಮುಖದಿ ಲಗ್ನವನು ತಿಳಿಯುತ । ಪುರವ ಸಿಂಗರಿಸಿದನು ಭೂಮಿಪ । ಹರುಷದಿಂದ ॥ ೨ ॥ ಪರಮ ಹರುಷದಿ ಸಿಂಹಳಾಧಿಪ । ನರಿತು ತರಳೆಯ ವಿವ ಹಕೆನ್ನುತ । ಪರಿಪರಿಯ ಬಳುವಳಿಯ ಕೊಳ್ಳುತ । ಪೊರಟು ಬಂದ ॥ ೩ ॥ ಬಂದು ಸೇರಿತು ನಗರದೊಳು ಜನ । ವೃಂದ ವಿವಹ ದ ಸೊಬಗನೀಕ್ಷಿಸ । ಲೆಂದು ಬಹುಪರಿಯಿಂದಲಂದಾ । ನಂದ ಮರೆಯೆ ॥ ೪ ॥ ತರುಣಿ ರತ್ನಾವಳಿಯು ಸೊಬಗನು । ಧರಿಸಲು ದಯನ ಭೂಪನೊಂದಿಗೆ । ಮೆರೆಯೆ ವಿವಹವು ನಡೆದುದೇನಾ । ಪರಿಯನೆಂಬೆ ॥ ೫ ॥ ಹರಸಿದರು ಬುಧರಾಗಳುದಯನ । ಧರಣಿ ಪತಿ ರತ್ನಾವಳೀ ಸತಿ । ವೆರಸಿ ರಾಣಿಯು ಸಹಿತ ಬಾಳಲಿ ॥ ವಿರುತ ಸುಖದಿ ॥ ೬ ॥ ಮಂಗಳಾಂಗಿಯರನಿತರೊಳು ಬಲು । ಸಿಂಗರ ದೊಳಾರತಿಯ ಬೆಳಗಿದ । ಸಂಗತಿಯನೇನೆಂಬೆ ಹಬ್ಬವು । ಕಂಗ ಳಿಂಗೆ ॥ ೭ ॥ ಶ್ರೀರಮಣಿ ಭೂರಮಣಿಯರು ಬಳಿ । ಸೇರಿ ರಂಜಿಪ ಶ್ರೀಹರಿಯವೊಲು । ಭೂರಿ ವೈಭವದಿಂದ ಶೋಭಿಸೆ । ಭೂರ ಮಣನು ॥ ೮ ॥

॥ ವಾರ್ಧಿಕ ॥

ಅಂದವಿಂದು ರತ್ನಾವಳೀ ಪರಿಣಯಂ ಕಲಾ । ಸುಂದರಿಗೆ ರತ್ನಹಾರದ ತೆರದೊಳೆಸೆಯೆ ಜನ । ವೃಂದ ಹರಸಲು ನಿಚ್ಚವಿೂ ದೃಶ್ಯಕಾವ್ಯವಂ ರಚಿಸಿದವನಾರೆಂದೊಡೆ ॥ ಕಂದರ್ಪ ವೈರಿ ಶ್ರೀ ಪಂಚಲಿಂಗಂ ನೆಲಸಿ । ನಿಂದ ಬಾಯಾರದ ಕಲೆಂಗಳದ ಕೃಷ್ಣಭೂ। ಬೃಂದಾರಕೋತ್ತಮನ ನಂದನಂ ರಾಮಕೃಷ್ಣಾಂಕನೆಂಬಾತನೊಲಿದು ॥ ೧ ॥

॥ ಮಂಗಳ ಪದ ॥

ರಾಗ ಯಮುನಾ ಕಲ್ಯಾಣ ॥ ತ್ರಿವುಡೆ ತಾಳ ॥

ಮಂಗಳಂ ಜಯ । ಮಂಗಳಂ ಶುಭ । ಮಂಗಳಂ ಮುರ ಭಂಗಗೆ ॥ ತುಂಗಮಹಿಮಾ । ನಂಗಪಿತ ಮೋ । ಹಾಂಗ ಲಕ್ಷ್ಮೀ ಸಂಗಗೆ ॥ ಮಂಗಳಂ ॥ ಪಲ್ಲವಿ ॥ ಹಂಸರೂಪಗೆ । ಹಂಸತೇಜಗೆ । ಹಂಸ ವಿಬುಧೋತ್ತಂಸಗೆ ॥ ಹಂಸವೇದ್ಯಗೆ । ಕಂಸಕುಳ ವಿ । ಧ್ವಂಸನಿಗೆ ಸುರಹಂಸಗೆ ॥ ಮಂಗಳಂ ॥ ೧ ॥ ಕ್ರೂರ ವೃಕ್ಷಕು । ಠಾರ ಪಾರಾ । ವಾರ ಗುಣಗಂಭೀರಗೆ॥ ಧೀರಶರಣೋ । ದ್ಧಾರ ಸಾರಾ। ಸಾರ ಪೂರ್ಣ ವಿಚಾರಗೆ॥ ಮಂಗಳಂ ॥ ೨ ॥ ದೇವದೇವರ । ದೇವ ಮುನಿಜನ । ಭಾವನಭ ಬಾಲಾರ್ಕಗೆ ॥ ಸೇವಕರ ನುರೆ । ಕಾವ ಬಂಡಿಯು । ಬೋವ ಸೃಷ್ಟಿಯ ಜೀವಗೆ ॥ ಮಂಗಳಂ ॥ ॥ ೩ ॥ ಕಾಮಪಿತನಿ । ಷ್ಕಾಮನಿಗೆ ಗುಣ । ಧಾಮ ಸಂಗರ ಭೀಮಗೆ ॥ ಶ್ರೀಮನೋಹರ ರಾಮಕೃಷ್ಣಗೆ । ಸೋಮರವಿಶತ ಧಾಮಗೆ ॥ ಮಂಗಳಂ ॥ ೪ ॥

॥ ಮಂಗಳಂ ಜಯ ಮಂಗಳಂ ॥

ಒಟ್ಟು ಪದ್ಯ ಸಂಖ್ಯೆ ೪೩೪

ಇದೇ ಲೇಖಕರ ಇತರ ಕೃತಿಗಳು

1. ಕುಟುಂಬದ ಕೊಲೆ- (ಪತ್ತೇದಾರಿ ನಾಟಕ) ಬೆಲೆ: 1-75

2. ಭಕ್ತ ಧ್ರುವ (ಮಕ್ಕಳ ನಾಟಕ) 0-90

3. ಬಸವೇಶ್ವರ ಚರಿತಂ (ಯಕ್ಷಗಾನ) ಅಚ್ಚಾಗಲಿಲ್ಲ.

ಕವನಗಳು:

ಮುಸುಕುತಿದೆ ಮುಗಿಲು, ವಿರಹಿಣಿ, ಸೇವಂತಿಗೆ, ಗೊಂದಲ, ಎದ್ದೇಳು, ಕಾವ್ಯಜೀವಿ, ಪಾರ್ತಿಸುಬ್ಬನಿಗೆ ಇತ್ಯಾದಿ.

ಬೆಲೆ: ರೂ. 2/-